ಪ್ರಚಾರ ಪುಸ್ತಕಮಾಲೆ 230

ಭಾರತೀಯ ಮಹಿಳಾ ಪರಂಪರೆ

ಬಿ. ಪಿ. ಚಂದ್ರಾಬಾಯಿ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೨೩೦

ಭಾರತೀಯ ಮಹಿಳಾ ಪರಂಪರೆ

ಬಿ. ಪಿ. ಚಂದ್ರಾಬಾಯಿ

೧೯೮೧

ಮೊದಲನೆಯ ಮುದ್ರಣ : ೧೯೮೧

ಬೆಲೆ : ೨೫ ಪೈಸೆ

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

ಮುದ್ರಕರು

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ, ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವದ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ, ವಿಶ್ವವಿದ್ಯಾ-ನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿಸಿ, ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆ ಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕ ರೀತಿಯಲ್ಲಿ ನೆರವೇರಿಸುತ್ತದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ, ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕ ವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯ ಜನರಂತೆಯೇ ಇದ್ದು

ಕೊಂಡು ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯ ದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನು ಉಂಟುಮಾಡುತ್ತಾರೆ. ಈ ಉಪ ನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶ ವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗ ಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವ ವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋ ದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲಭಾವನೆ ಮೂಡು ವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಿಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಿಗೆಗಳನ್ನು ಕೊಂಡು, ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೇ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೇ ಭೌತ ವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯ ವಿಜ್ಞಾನ, ಗಣಿತವಿಜ್ಞಾನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ–ಮುಂತಾದ ವಿಷಯ

ಗಳನ್ನು ಕುರಿತ ಇನ್ನೂರ ಇಪ್ಪತ್ತೊಂಬತ್ತು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈಗ ಹೊರಬರುತ್ತಿರುವ ಶ್ರೀಮತಿ ಬಿ. ಪಿ. ಚಂದ್ರಾಬಾಯಿ ಅವರ 'ಭಾರತೀಯ ಮಹಿಳಾ ಪರಂಪರೆ' ಎಂಬ ಕೃತಿ ಹೆಚ್ಚು ಜನಪ್ರಿಯವಾಗಲೆಂದು ಆಶಿಸುತ್ತೇನೆ.

ಕೆ. ಎಸ್. ಹೆಗ್ಡೆ
ಕುಲಪತಿ

ಮೈಸೂರು

ಅರಿಕೆ

ಜಗತ್ತಿನ ಇತಿಹಾಸವನ್ನು ಸಮೀಕ್ಷಿಸಿದಾಗ, ಮಹಿಳೆಯರು ಧಾರ್ಮಿಕ ಜೀವನದಲ್ಲಿ ಪುರುಷರಿಗೆ ಸಮಸ್ಪರ್ಧಿಗಳಾಗಿ ತಮ್ಮ ಸಾಧನೆಯಿಂದ ತಮ್ಮ ಬದುಕನ್ನು ಪಾವನವಾಗಿ ಮಾಡಿಕೊಂಡ ಅನೇಕ ನಿದರ್ಶನಗಳಿವೆ. ಸ್ತ್ರೀ ಪುರುಷರಲ್ಲಿ ಆತ್ಮವೇ ಚಿರಜಾಗೃತವಾಗಿರುವುದು. ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ. ಮಹಿಳೆಯರಾಗಲಿ, ಪುರುಷರಾಗಲಿ, ತಮ್ಮಲ್ಲಿರುವ ಆತ್ಮಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಕೊಂಡಾಗ ಮುಕ್ತರಾಗುತ್ತಾರೆ. ಆತ್ಮವೇ ತನ್ನ ಲೀಲಾರ್ಥವಾಗಿ ಗಂಡು ಹೆಣ್ಣಿನ ವೇಷಧಾರಿಯಾಗಿ ಈ ಜಗನ್ನಾಟಕದಲ್ಲಿ ಪಾತ್ರಧಾರಿಯಾಗಿರುವುದು. ಯಾರು ಈ ಲೀಲಾ ರಹಸ್ಯವನ್ನು ಅರಿಯುವರೋ ಅವರು ಶಾಂತರಾಗುತ್ತಾರೆ, ಮುಕ್ತರಾಗುತ್ತಾರೆ.

ವೈದಿಕ ಕಾಲವಾದ ಬಳಿಕ ಹಲವು ಶತಮಾನಗಳ ಕಾಲ ಭಾರತದಲ್ಲಿ ಹಲವು ಸ್ತ್ರೀಯರು ಪತಿಯ ಸೇವೆಗೂ ಕಾಮೋಪಭೋಗಕ್ಕೂ ಸೃಷ್ಟಿಯಾದ ಪ್ರಾಣಿಗಳಂತೆ ಬದುಕಿದರು. ಪತಿಯು ಹಾಗೂ ಅತ್ತೆ ಮಾವಂದಿರಿಗೆ ಸೇವೆ ಸಲ್ಲಿಸುತ್ತ, ಅವರು ಕೊಡುತ್ತಿದ್ದ ಹಿಂಸೆಗಳಿಗೆ ಪ್ರತ್ಯುತ್ತರವೀಯದೆ, ಅಪಚಾರಗಳನ್ನು ಸಹಿಸಿ, ಹೆದರಿ ಬದುಕುವ ಸ್ಥಿತಿ ಬಂದಿತ್ತು. ಮನುವಿನಂತಹ ಧರ್ಮಶಾಸ್ತ್ರಕಾರನೂ ಮಹಿಳೆ ಪರಾಧೀನೆ ಎಂದು ನಿರ್ಣಯಿಸಿದ್ದ. ಮನುಧರ್ಮಶಾಸ್ತ್ರದಲ್ಲಿ ಹೇಳಿರುವುದೆಲ್ಲ ಪರಮ ಸತ್ಯವೆಂದು ಭ್ರಮಿಸಬಾರದೆಂಬ ವಿವೇಕವಿಲ್ಲದೆ ಹೋಯಿತು ಮಹಿಳೆಯರಿಗೆ. ಪತಿ ಬದುಕಿದಾಗ, ಸುಖವಿಲ್ಲದೆ ಗುಲಾಮಗಿರಿಯಲ್ಲಿದ್ದು, ವಿಧವೆಯಾದ ಬಳಿಕ ಸೌಭಾಗ್ಯಹೀನಳಾಗಿ, ಮಾನಮರ್ಯಾದೆ ಕಳೆದು

ಕೊಂಡ ಮಹಿಳೆಯರಂತೂ ಪ್ರಾಣಿಗಿಂತಲೂ ತುಚ್ಛವಾದ ಜೀವನ ನಡೆಸಿ, ಕ್ಷಯಿಸಿದ ಸನ್ನಿವೇಶಗಳಿವೆ. ಪತಿಯು ಕಾಲವಾದ ಬಳಿಕ ಸ್ತ್ರೀಯರ ಬದುಕು ದುರದೃಷ್ಟಕರವೆಂದು ತಿಳಿದ ಸತಿಯರು ಸಹಗಮನ ಮಾಡಲಾರಂಭಿಸಿದರು. ಆದರೆ ಈ ಪದ್ಧತಿ ಈಗ ಅಳಿದುಹೋಗಿದೆ. ಸ್ವತಂತ್ರ ಭಾರತದಲ್ಲಿ ಪುರುಷರಿಗೆ ಸಮಾನ ವಾದ ಹಕ್ಕುಗಳು ಸ್ತ್ರೀಯರಿಗೆ ಲಭಿಸಿವೆ. ವೈದಿಕ ಕಾಲದ ಸ್ವಾತಂತ್ರ್ಯ ಮತ್ತೆ ತಲೆದೋರಿದೆ. ಆ ಸ್ವಾತಂತ್ರ್ಯ ಸ್ವಚ್ಛಂದ ವಾಗದಂತೆ ನೋಡಿಕೊಂಡು, ಮಹಿಳೆಯರು ಪ್ರಗತಿಪಥದಲ್ಲಿ ಮುಂದುವರಿಯಲು ದೃಢ ಸಂಕಲ್ಪ ಚಿತ್ತರಾಗಬೇಕು.

ಭಾರತೀಯ ಮಹಿಳೆಯರು ಧಾರ್ಮಿಕ ಜೀವನದಲ್ಲಿ ಎಂತಹ ಪ್ರಗತಿಯನ್ನು ತೋರಿದ್ದಾರೆ, ಎನ್ನುವುದನ್ನು ದೃಷ್ಟಿ ಯಲ್ಲಿಟ್ಟುಕೊಂಡು ಈ ಪುಸ್ತಕವನ್ನು ರಚಿಸಿದೆ. ವೇದಗಳ ಕಾಲದಿಂದ ಆಧುನಿಕ ಕಾಲದವರೆಗಿನ ಕೆಲವು ಪ್ರಮುಖ ಮಹಿಳೆ ಯರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಅವರ ಧಾರ್ಮಿಕ ಜೀವನ ವನ್ನು ಚಿತ್ರಿಸಲು ಈ ಪುಸ್ತಕದಲ್ಲಿ ಯತ್ನಿಸಿದೆ. ಮಹಿಳೆಯರ ಜೀವನಕ್ಕೆ ಧಾರ್ಮಿಕ ದೃಷ್ಟಿ ಎಂತಹ ಶಕ್ತಿಯನ್ನು ನೀಡಿದೆ ಎಂದು ಯೋಚಿಸಿದಾಗ, ಧರ್ಮ ಭಾರತೀಯ ಮಹಿಳೆಯರ ಜೀವನಾಡಿ ಎಂದು ಹೇಳಬಹುದು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಆಶ್ರಯ ದಲ್ಲಿ ಮಾಡಿದ ಭಾರತದ ಧಾರ್ಮಿಕ ಮಹಿಳೆಯರು ಎಂಬ ಉಪನ್ಯಾಸವೇ ಈ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಈ ಅವಕಾಶವನ್ನು ನೀಡಿದ ಪ್ರಸಾರಾಂಗದ ಅಧಿಕಾರಿಗಳಿಗೆ ವಂದನೆಗಳು.

ಬಿ. ಪಿ. ಚಂದ್ರಾಬಾಯಿ

ಪರಿವಿಡಿ

ಪೀಠಿಕೆ

ಭಾರತೀಯರಿಗೆ ಧರ್ಮವೇ ಬಾಳಿನ ಉಸಿರು. 'ಧೃ' ಎಂಬ ಧಾತುವಿನಿಂದ ಧರ್ಮ ಶಬ್ದದ ಉತ್ಪತ್ತಿ. 'ಧೃ' ಎಂದರೆ ಧರಿಸುವುದು, ಎಂದರ್ಥ. ಮಾನವರನ್ನು ನಿಯಮಬದ್ಧರನ್ನಾಗಿ ಮಾಡಿ ಅವರ ಶ್ರೇಯಸ್ಸಿಗೆ ಕಾರಣವಾಗುವ ನೀತಿಯೇ ಧರ್ಮ–ಎಂಬ ಅರ್ಥವಿದ್ದುದು, ಕ್ರಮೇಣ ಅದರ ಅರ್ಥವ್ಯಾಪ್ತಿ ವಿಸ್ತಾರವಾಯಿತು. ವೇದದಲ್ಲಿ ಧರ್ಮವೆಂಬ ಪದ ಯಜ್ಞವೆಂಬ ಅರ್ಥದಲ್ಲಿ ಉಪಯೋಗವಾಗಿದೆ. ಪುರಾಣಗಳಲ್ಲಿ ಶ್ರೇಯಸ್ಸಿಗೆ ಪ್ರೇರಕವಾಗುವುದೇ ಧರ್ಮ–ಎಂಬ ವಿವರಣೆ ಬರುತ್ತದೆ. ಮನುಧರ್ಮ ಶಾಸ್ತ್ರದಲ್ಲಿ,

ವಿದ್ವದ್ಭಿಸ್ಸೇವಿತ ಸದ್ಭಿರ್ನಿತ್ಯಮದ್ವೇಷರಾಗಿಭಿಃ |
ಹೃದಯೇನಾಭ್ಯನು ಜ್ಞಾತೋ ಯೋ ಧರ್ಮಸ್ತನ್ನಿಬೋಧತ ||

ವಿದ್ವಾಂಸರೂ, ಸಂತರೂ, ರಾಗದ್ವೇಷರಹಿತರೂ, ಏಕಪ್ರಕಾರವಾಗಿ ಯಾವುದನ್ನು ಹೃತ್ಪೂರ್ವಕವಾಗಿ ಆಚರಿಸುವರೋ–ಅದನ್ನೇ ಧರ್ಮವೆಂದು ತಿಳಿಯಬೇಕು – ಎಂಬ ವಿಶಾಲಾರ್ಥದಲ್ಲಿ ಧರ್ಮದ ವಿವರಣೆ. ಕ್ರಮೇಣ ಧರ್ಮವೆಂದರೆ ಸದಾಚಾರ, ಸದ್ವೃತ್ತಿ, ದಾನ, ಶುದ್ಧಿ, ಷೋಡಶ ಸಂಸ್ಕಾರಗಳು, ಸತಿಪತಿಯರ ನಿಯಮ ಜೀವನ, ನಿತ್ಯಕರ್ಮಗಳು, ದೇವತಾರ್ಚನೆ–ಈ ರೀತಿಯ ಆಚಾರ ಸಂಹಿತೆ ಎಂಬ ಅರ್ಥ ಬಂದು ಹೋಯಿತು. ಕೇವಲ ಕರ್ಮಾಚಾರಕ್ಕೆ ಬಲಿಯಾಗಿ ಧರ್ಮದ ನೈಜ ಅರ್ಥವನ್ನು ಮರೆಯುತ್ತಿದ್ದ ಮಾನವರ ದೃಷ್ಟಿಯನ್ನು ಬುದ್ಧ, ದಯಾನಂದ ಸರಸ್ವತಿ, ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ

ಶ್ರೀ ರಮಣ ಮಹರ್ಷಿ, ಶ್ರೀ ಅರವಿಂದ ಮೊದಲಾದವರು ಎಚ್ಚರಿಸಿ, ಮೂಲಭೂತವಾದ ಧರ್ಮದತ್ತ ದೃಷ್ಟಿ ಹರಿಸಿದರು. ಮೂಲ ತತ್ವಗಳನ್ನು ಮರೆತು ಕೇವಲ ಬಾಹ್ಯಾಚಾರಗಳೇ ಸತ್ಯವೆಂದು ಭ್ರಮಿಸಿದರೆ, ಅಹಂಕಾರದಲ್ಲಿ ಪ್ರಮತ್ತರಾಗಿ ಅಧೋಗತಿಗಿಳಿಯುವ ಸಂಭವವಿದೆ. ಆದುದರಿಂದಲೇ ಮಹಾತ್ಮರು ಪುನಃ ಪುನಃ ಎಚ್ಚರಿಕೆಯನ್ನು ನುಡಿದಿದ್ದಾರೆ. ಮಾನವನಿಗೆ ಅತೀಂದ್ರಿಯಾನುಭವವಾದೊಡನೆ ಪರಾತ್ಪರ ಶಕ್ತಿಯು ಅರಿವಾಗುತ್ತದೆ. ನೈಜ ಧರ್ಮವೆಂದರೆ ಆತ್ಮ ಸಾಕ್ಷಾತ್ಕಾರಕ್ಕೆ ಪ್ರೇರಕವಾದುದೆಂಬ ವಿಶಾಲಾರ್ಥ ಮಹಾತ್ಮರ ಜೀವನದಿಂದ ಭಾಸವಾಗುತ್ತದೆ. ಮಾನವನ ಪಾಶವೀ ಪ್ರವೃತ್ತಿ ಕುಗ್ಗುತ್ತ ದೈವೀಗುಣಗಳ ಆವಿಷ್ಕಾರವಾದಂತೆ, ಅವನ ಧಾರ್ಮಿಕ ಭಾವನೆಗಳೂ, ಆಚರಣೆಗಳೂ, ವ್ಯತ್ಯಾಸವಾಗುತ್ತ ಬಂದವು. ಇಂದು ಪ್ರಪಂಚದ ಅನೇಕ ಸಂತರು ಸತ್ಯ, ಅಸ್ತೇಯ, ಅಹಿಂಸೆ, ಬ್ರಹ್ಮಚರ್ಯ, ಸೇವಾನಿಷ್ಠೆ ಮೊದಲಾದವು ಧಾರ್ಮಿಕ ಜೀವನಕ್ಕೆ ಪ್ರೇರಕ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಧಾರ್ಮಿಕ ಭಾವನೆಗಳನ್ನು ಜೀವನದಲ್ಲಿ ಶಕ್ತಿಯುತವಾಗಿ ಮೂಡಿಸುವವರು ಮಹಾತ್ಮರು. ಅವರ ಜೀವನದ ಮೇಲ್ಪಂಕ್ತಿಯೇ ಮನುಕುಲಕ್ಕೆ ದಾರಿದೀಪ.

ಮಾನವನ ಅನುಭವ ವಿಶಾಲವಾಗಿ, ಆಲೋಚನಾ ಶಕ್ತಿ ವಿಕಾಸವಾದಂತೆ, ಧಾರ್ಮಿಕ ವಿಚಾರಗಳು ಪರಿಷ್ಕೃತವಾದವು. ಹಿಂದೂ ಧರ್ಮ, ಉಪನಿಷತ್ತುಗಳು ಸಾರಿದ, 'ಸರ್ವಂ ಖಲ್ವಿದಂ ಬ್ರಹ್ಮ' – ಎಂಬ ದರ್ಶನವನ್ನು ಸಾರಿದೆ. ಈ ದರ್ಶನ ಋಷಿಗಳ ಅನುಭವದಿಂದ ಮೂಡಿದ ಮಿಂಚುನುಡಿ ಅವರ ದರ್ಶನದಂತೆ ವ್ಯಕ್ತಾವ್ಯಕ್ತ ಸೃಷ್ಟಿಗೆ ಅನಾದಿ, ಸರ್ವಶಕ್ತ, ಸರ್ವಜ್ಞ, ಸರ್ವ

ವ್ಯಾಪಿ ಶಕ್ತಿಯೇ ಕಾರಣ. ಈ ನಂಬಿಕೆಯ ಆಧಾರದ ಮೇಲೆ ಹಿಂದೂ ಧರ್ಮದ ತತ್ವಗಳು ಅರಳಿದವು.

ಈಶ್ವರನನ್ನು ಅರ್ಧನಾರೀಶ್ವರನೆಂದು ಕರೆದಿದ್ದಾರೆ. ಇಹದಲ್ಲಿ ಯಾತ್ರಿಯಾಗಿರುವ ಗಂಡು ಹೆಣ್ಣು ಒಬ್ಬರಿಗೊಬ್ಬರು ಪೂರಕ. ಭಗವಂತನ ಅಂಶದ ಈ ಎರಡು ಶಕ್ತಿಗಳು ಎರಡು ಕಣ್ಣುಗಳಿದ್ದಂತೆ. ಸಾಧಕರಿಗೆ ಕ್ರಮೇಣ ಬಾಹ್ಯವಾದ ವ್ಯತ್ಯಾಸಗಳು ಮಾಯವಾಗಿ, ಅಂತರ ನಿಷ್ಠವಾದ ಆತ್ಮ ತತ್ವವೊಂದೇ ಗೋಚರವಾಗುತ್ತದೆ. ಧಾರ್ಮಿಕ ಜೀವನದಲ್ಲಿ ಪುರುಷರು ಹೆಚ್ಚಾಗಿ ಮುನ್ನಡೆದಿದ್ದಾರೆ. ಆದರೆ ಮಹಿಳೆಯರೂ ತಮ್ಮ ಸಾಧನೆಯಿಂದ ಮಹಾ ಮಹಿಳೆಯರಾಗಿ ಜಗತ್ತಿನಲ್ಲಿ ದಿವ್ಯಪಥವನ್ನು ನಿರ್ಮಿಸಿ ಹೋಗಿದ್ದಾರೆ. ವೈದಿಕ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೆ ಭಾರತೀಯ ಮಹಿಳೆಯರ ಧಾರ್ಮಿಕ ಜೀವನದ ಆದರ್ಶ ಅನನ್ಯವಾದುದು, ಚಿರಸ್ಮರಣೀಯವಾದುದು.

2. ಭಾರತೀಯ ಮಹಿಳೆಯರ ಧಾರ್ಮಿಕ ಜೀವನ

ಭಾರತೀಯ ಇತಿಹಾಸವನ್ನು ಸಮೀಕ್ಷಿಸಿದಾಗ, ಧರ್ಮದಲ್ಲಿ ಆಸಕ್ತರಾದ ಹಲವು ಮಹಿಳೆಯರ ಜೀವನ ಹೃದ್ಗೋಚರವಾಗುತ್ತದೆ.

1. ವೈದಿಕ ಕಾಲದಲ್ಲಿ:

ವೈದಿಕ ಕಾಲದಲ್ಲಿ ಹಲವು ಧರ್ಮಪರಾಯಣೆಯರಾದ ಮಹಿಳೆಯರ ಉಲ್ಲೇಖವಿದೆ. ನಿದರ್ಶನಕ್ಕಾಗಿ ಮೈತ್ರೇಯಿ ಮತ್ತು ಗಾರ್ಗಿ ಇಬ್ಬರನ್ನು ಮಾತ್ರ ಗಮನಕ್ಕೆ ತೆಗೆದುಕೊಳ್ಳಬಹುದು. ಮೈತ್ರೇಯಿ, ಯಾಜ್ಞವಲ್ಕ್ಯನ ಪತ್ನಿ. ಅವಳು ವಿಚಾರಪರಳು, ಧರ್ಮನಿಷ್ಠಳು. ಪತಿಯ ಶ್ರೇಯಸ್ಸಿನಲ್ಲಿ ಸದಾ

ಆಸಕ್ತಳು. ಯಾಜ್ಞವಲ್ಕ್ಯನಿಗೆ ಇಬ್ಬರು ಪತ್ನಿಯರು, ಮೈತ್ರೇಯಿ ಮತ್ತು ಕಾತ್ಯಾಯಿನಿ. ಹಲವು ವರ್ಷಗಳ ಸಾಂಸಾರಿಕ ಜೀವನವನ್ನು ಸಾಗಿಸಿದ ಬಳಿಕ ಅವನಿಗೆ ವೈರಾಗ್ಯ ಮೂಡಿ, ತಾನು ಸನ್ಯಾಸಿಯಾಗಲು ಇಚ್ಛಿಸಿದನು. ಆಗ ಪತ್ನಿಯರನ್ನು ಕರೆದು ಸನ್ಯಾಸಿಯಾಗುವ ತನ್ನ ಬಯಕೆಯನ್ನು ತಿಳಿಸಿ, ತನ್ನ ಅಲ್ಪ ಸ್ವಲ್ಪ ಆಸ್ತಿಯನ್ನು ಅವರಿಗೆ ಕೊಡುವುದಾಗಿ ತಿಳಿಸಿದನು. ಅವರಿಬ್ಬರ ಸಂಭಾಷಣೆ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೃದಯಂಗಮವಾಗಿ ನಿರೂಪಿತವಾಗಿದೆ:

ಯಾಜ್ಞವಲ್ಕ್ಯ : ಸಂಸಾರ ದುಃಖಕರ, ಸನ್ಯಾಸವೇ ಉತ್ತಮ. ನನ್ನ ಆಸ್ತಿಯನ್ನು ನಿಮ್ಮಿಬ್ಬರಿಗೂ ಹಂಚಿಕೊಟ್ಟು ಸನ್ಯಾಸಿಯಾಗುವೆ, ನಿಮ್ಮ ಅಭಿಪ್ರಾಯವೇನು?

ಮೈತ್ರೇಯಿ : ನಿಮ್ಮ ಸಂಪತ್ತಿನಲ್ಲಿ ಅರ್ಧ ನನಗೆ ಕೊಡುವುದು ದಿಟ. ಅದರಿಂದ ಅಮೃತತ್ವವು ಲಭಿಸುತ್ತದೆಯೆ ?

ಯಾಜ್ಞವಲ್ಕ್ಯ: ಸಂಪತ್ತಿನಿಂದಲೇ ಅಮೃತತ್ವವು ಲಭಿಸುವುದಿಲ್ಲ. ಅದಕ್ಕಾಗಿ ಶಾಸ್ತ್ರವಿಹಿತವಾದ ಸಾಧನೆಯಲ್ಲಿ ತೊಡಗಬೇಕು.

ಮೈತ್ರೇಯಿ : ಆ ಸಾಧನಾ ಮಾರ್ಗವನ್ನು ತಿಳಿಸಿ.

ಯಾಜ್ಞವಲ್ಕ್ಯ : ನೀನು ನನಗೆ ಅತ್ಯಂತ ಪ್ರಿಯಳಾಗಿರುವೆ, ನಿನ್ನ ಮನಸ್ಸು ಪಾವನ. ಜಗತ್ತಿನಲ್ಲಿ ಎಲ್ಲರೂ ಒಬ್ಬರನ್ನೊಬ್ಬರು ಪ್ರೀತಿಸುವುದು ತಮ್ಮ ತಮ್ಮ ಸುಖ ಹಾಗೂ ಸ್ವಾರ್ಥಕ್ಕಾಗಿ. ಪತಿ ಪತ್ನಿಯನ್ನು ಪ್ರೀತಿಸುವುದು ತನ್ನ ಸುಖಕ್ಕಾಗಿ. ಹೀಗೆಯೇ ಎಲ್ಲಾ ಕ್ಷೇತ್ರಗಳಲ್ಲಿಯೂ ಈ ವಿಧಾನ. ಜೀವನದ ನಿಜಸ್ವರೂಪವನ್ನು ತಿಳಿದ ಬಳಿಕ

ಪ್ರಪಂಚದಲ್ಲಿ ತಿಳಿಯಬೇಕಾದುದು ಮತ್ತಾವುದೂ ಇಲ್ಲ. ಈ ಸಕಲ ಚರಾಚರ ಜಗತ್ತು ಬ್ರಹ್ಮದಿಂದಲೇ ಮಾಡಿ, ಕಡೆಗೆ ಬ್ರಹ್ಮದಲ್ಲಿಯೇ ಲೀನವಾಗುತ್ತದೆ. "ಸರ್ವಂ ಖಲ್ವಿದಂ ಬ್ರಹ್ಮ".

ಮೈತ್ರೇಯಿ : ನೀವು ಸನ್ಯಾಸ ಸ್ವೀಕರಿಸಿದರೆ, ನಾನೂ ನಿಮ್ಮಂತೆಯೇ ವಿರಕ್ತಳಾಗಿ ಧನ್ಯಳಾಗುತ್ತೇನೆ.

ಮಹರ್ಷಿ ಯಾಜ್ಞವಲ್ಕ್ಯ ಯಾವ ಎತ್ತರಕ್ಕೆ ಏರಿದ್ದನೋ ಆ ಎತ್ತರಕ್ಕೇ ಏರಿದ ಮಹಾಸಾಧ್ವಿ ಮೈತ್ರೇಯಿ. ಆಕೆಯ ನೆನಪು ಶತಶತಮಾನಗಳು ಕಳೆದರೂ ವಿಸ್ಮೃತಿ ಯಾಗದೆ ಅಮರವಾಗಿದೆ.

ಗಾರ್ಗಿ ಮತ್ತೊಬ್ಬ ವೈದಿಕ ಕಾಲದ ಧರ್ಮನಿಷ್ಠ ಮಹಿಳೆ. ಇವಳ ಉಲ್ಲೇಖನವೂ ಬೃಹದಾರಣ್ಯಕೋಪನಿಷತ್ತಿನಲ್ಲಿ ಬರುತ್ತದೆ. ವಿದ್ವಾಂಸರಿಗೆ ಕಲ್ಪವೃಕ್ಷದಂತಿದ್ದ ರಾಜರ್ಷಿಜನಕರಾಜನು ಅಶ್ವಮೇಧ ಯಾಗವನ್ನು ಮುಗಿಸಿ, " ಈ ಸಭೆಯಲ್ಲಿ ಶ್ರೇಷ್ಠ ಬ್ರಹ್ಮಜ್ಞಾನಿಗೆ ಸುವರ್ಣದಿಂದ ಅಲಂಕೃತವಾದ ಒಂದು ಸಹಸ್ರ ಗೋವುಗಳು ಲಭಿಸುತ್ತವೆ" ಎಂದು ಘೋಷಿಸಿದಾಗ ಎಲ್ಲರೂ ಮೌನವಾದರು. ಕಡೆಗೆ ಯಾಜ್ಞವಲ್ಕ್ಯನು ಮುಂದೆ ಹೋಗಿ, ಆ ಹಸುಗಳನ್ನು ತನ್ನ ಆಶ್ರಮಕ್ಕೆ ಕೊಂಡೊಯ್ಯಲು ತನ್ನ ಶಿಷ್ಯರಿಗೆ ಆಜ್ಞೆ ಮಾಡಿದನು. ಆಗ ಅತೃಪ್ತರಾದ ಹಲವರು ಹಲವು ರೀತಿಯಲ್ಲಿ ಪ್ರಶ್ನಿಸಿದಾಗ, ಅವರೆಲ್ಲರಿಗೂ ಸರಿಯಾದ ಉತ್ತರವನ್ನೇ ಯಾಜ್ಞವಲ್ಕ್ಯನು ನೀಡಿ, ಅವರನ್ನು ನಿರುತ್ತರಗೊಳಿಸಿದನು.

ಆಗ ತೇಜಸ್ವಿನಿಯಾದ ಮಹಿಳೆ ಗಾರ್ಗಿ, ಕೆಲವು ಪ್ರಶ್ನೆಗಳನ್ನು ಕೇಳಿದಳು. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ನಿರೂಪಿಸಿದೆ.

ಗಾರ್ಗಿ : ಪೃಥ್ವಿಯು ಯಾವುದರಲ್ಲಿ ಓತಪ್ರೋತವಾಗಿದೆ?

ಯಾಜ್ಞವಲ್ಕ್ಯ : ವಸ್ತ್ರದ ನೂಲಿನಂತೆ ಪೃಥ್ವಿ ಜಲದಲ್ಲಿ ಓತಪ್ರೋತವಾಗಿದೆ.

ಗಾರ್ಗಿ : ಜಲವು ಯಾವುದರಲ್ಲಿ ಓತಪ್ರೋತವಾಗಿದೆ?

ಯಾಜ್ಞವಲ್ಕ್ಯ : ಜಲವು ವಾಯುವಿನಲ್ಲಿ.

ಗಾರ್ಗಿ : ವಾಯುವು ಯಾವುದರಲ್ಲಿ ?

ಯಾಜ್ಞವಲ್ಕ್ಯ : ವಾಯುವು ಅಂತರಿಕ್ಷದಲ್ಲಿ.

ಗಾರ್ಗಿ : ಅಂತರಿಕ್ಷ ಯಾವುದರಲ್ಲಿ ?

ಯಾಜ್ಞವಲ್ಕ್ಯ : ಅಂತರಿಕ್ಷ ಗಂಧರ್ವಲೋಕದಲ್ಲಿ.

ಗಾರ್ಗಿ : ಗಂಧರ್ವಲೋಕ ಯಾವುದರಲ್ಲಿ?

ಯಾಜ್ಞವಲ್ಕ್ಯ : ಗಂಧರ್ವಲೋಕ ಆದಿತ್ಯಲೋಕದಲ್ಲಿ.

ಗಾರ್ಗಿ : ಆದಿತ್ಯಲೋಕ ಯಾವುದರಲ್ಲಿ ?

ಯಾಜ್ಞವಲ್ಕ್ಯ : ಆದಿತ್ಯಲೋಕ ಚಂದ್ರಲೋಕದಲ್ಲಿ.

ಗಾರ್ಗಿ : ಚಂದ್ರಲೋಕ ಯಾವುದರಲ್ಲಿ ?

ಯಾಜ್ಞವಲ್ಕ್ಯ : ಚಂದ್ರಲೋಕ ನಕ್ಷತ್ರಲೋಕದಲ್ಲಿ.

ಗಾರ್ಗಿ : ನಕ್ಷತ್ರಲೋಕ ಯಾವುದರಲ್ಲಿ ?

ಯಾಜ್ಞವಲ್ಕ್ಯ : ನಕ್ಷತ್ರಲೋಕ ದೇವಲೋಕದಲ್ಲಿ.

ಗಾರ್ಗಿ : ದೇವಲೋಕ ಯಾವುದರಲ್ಲಿ ?

ಯಾಜ್ಞವಲ್ಕ್ಯ : ದೇವಲೋಕ ಇಂದ್ರಲೋಕದಲ್ಲಿ.

ಗಾರ್ಗಿ : ಇಂದ್ರಲೋಕ ಯಾವುದರಲ್ಲಿ ?

ಯಾಜ್ಞವಲ್ಕ್ಯ : ಇಂದ್ರಲೋಕ ಪ್ರಜಾಪತಿ ಲೋಕದಲ್ಲಿ.

ಗಾರ್ಗಿ : ಪ್ರಜಾಪತಿಲೋಕ ಯಾವುದರಲ್ಲಿ ?

ಯಾಜ್ಞವಲ್ಕ್ಯ : ಪ್ರಜಾಪತಿಲೋಕ ಬ್ರಹ್ಮಲೋಕದಲ್ಲಿ.

ಗಾರ್ಗಿ : ಬ್ರಹ್ಮಲೋಕ ಯಾವುದರಲ್ಲಿ ?

ಯಾಜ್ಞವಲ್ಕ್ಯ : ಗಾರ್ಗಿ, ಕೇವಲ ತರ್ಕದಿಂದ ಬ್ರಹ್ಮವನ್ನು

ತಿಳಿಯಲಾರೆ. ಅದನ್ನು ಸ್ವಾನುಭವದಿಂದ ತಿಳಿಯಬೇಕು. ಕೇವಲ ವಾದಕ್ಕೆ ಹೊರಟರೆ, ತಲೆ ಸಿಡಿದೀತು. ಅಯುಕ್ತ ವಾದ ಪ್ರಶ್ನೆ ಕೇಳಬಾರದು.

ಕಡೆಗೆ ಮತ್ತೊಮ್ಮೆ ಗಾರ್ಗಿ ಪ್ರಶ್ನೆ ಕೇಳಿದಾಗ ಬ್ರಹ್ಮಸ್ವರೂಪ ವನ್ನು ಯಾಜ್ಞವಲ್ಕ್ಯ ವಿವರಿಸಿದನು. ಸಚ್ಚಿದಾನಂದ ಸ್ವರೂಪ ವಾದ ಬ್ರಹ್ಮದಲ್ಲಿ ಎಲ್ಲವೂ ಇದೆ ಎಂಬ ಅರಿವು ಗಾರ್ಗಿಗಾಯಿತು. ವಿದ್ವತ್ ಪೂರ್ಣ ಸಭೆಯಲ್ಲಿ ತತ್ತ್ವಜ್ಞಾನಿಯೂ, ಮಹರ್ಷಿಯೂ ಆದ ಯಾಜ್ಞವಲ್ಕ್ಯನನ್ನು ಪ್ರಶ್ನಿಸುವ ಸ್ವಾತಂತ್ರ್ಯ ಆ ಕಾಲದಲ್ಲಿ ಮಹಿಳೆಯರಿಗಿತ್ತು. ಗಾರ್ಗಿಯ ಪ್ರಶ್ನೆಗಳಿಂದ ಅವಳ ಮಹತ್ತರ ಅಭೀಪ್ಸೆಯೂ, ಜ್ಞಾನಾಭಿಲಾಷೆಯೂ ಸುಪ್ರಕಟ.

ವೈದಿಕ ಕಾಲದ ಮಹಿಳೆಯರು ಪುರುಷರಂತೆ ಉಪನಯನಾದಿ ಸಂಸ್ಕಾರಗಳಿಗೆ ಯೋಗ್ಯರಾಗಿದ್ದರು. ವೇದೋಪನಿಷತ್ತುಗಳ ಅಧ್ಯಯನಕ್ಕೂ ಅವರಿಗೆ ಅಧಿಕಾರವಿತ್ತು. ಅವರು ಧರ್ಮದಲ್ಲಿ ನಿಷ್ಠೆಯುಳ್ಳವರಾಗಿದ್ದರು. ಜೀವನದ ಆದರ್ಶ ಧರ್ಮದತ್ತ ಹರಿಯುತ್ತಿತ್ತು. ಆ ಕಾಲದಲ್ಲಿ ಸಾತ್ವಿಕರಿಗೆ ವಿಶೇಷ ಗೌರವವಿತ್ತು. ಧರ್ಮನಿಷ್ಠೆಗೆ ಪ್ರೋತ್ಸಾಹವಿತ್ತು.

2. ರಾಮಾಯಣದಲ್ಲಿ:

ವಾಲ್ಮೀಕಿ ರಾಮಾಯಣ ಭಾರತೀಯರಿಗೆ ಪರಮಪೂಜ್ಯವಾದ ಕಾವ್ಯ. ಅಲ್ಲಿ ಬರುವ ರಾಮಸೀತೆಯರು ಜನತೆಯ ಆರಾಧ್ಯ ದೇವತೆಗಳು. ರಾಮಾಯಣದಲ್ಲಿ ಬರುವ ಮಹಿಳೆಯರಾದ ಅನಸೂಯೆ, ಶಬರಿ, ಕೌಸಲ್ಯೆ, ಸುಮಿತ್ರೆ ಮತ್ತು ಸೀತೆ— ಇವರ ವ್ಯಕ್ತಿ ಚಿತ್ರಣವನ್ನು ಮಾತ್ರ ಇಲ್ಲಿ ನಿರೂಪಿಸಿದೆ.

ಅನಸೂಯೆ :

ಸೀತಾರಾಮಲಕ್ಷ್ಮಣರು ಅಯೋಧ್ಯೆಯನ್ನು ಬಿಟ್ಟು ಚಿತ್ರಕೂಟದಲ್ಲಿ ನೆಲಸಿ, ಅಲ್ಲಿಂದ ದಂಡಕಾರಣ್ಯವನ್ನು ಪ್ರವೇಶಿಸುವ ಮೊದಲು ಅತ್ರಿ ಮಹರ್ಷಿಯ ಆಶ್ರಮಕ್ಕೆ ಹೋದರು. ವೃದ್ಧನೂ, ಜ್ಞಾನಿಯೂ, ಆದ ಅತ್ರಿಯೂ ಅವನ ಪತ್ನಿ ಅನಸೂಯೆಯೂ ಸೀತಾರಾಮಲಕ್ಷ್ಮಣರನ್ನು ತಮ್ಮ ಮಕ್ಕಳೆಂಬ ಪ್ರೀತಿಯಿಂದ ಸ್ವಾಗತಿಸಿ ಆದರಿಸಿದರು. ಪರಮ ಪತಿವ್ರತೆಯಾದ ಅನಸೂಯೆ ಪತಿಯೊಡನೆ ತಪಸ್ಸುಮಾಡಿ, ಮಹಾತಪಸ್ವಿನಿಯಾಗಿದ್ದಳು. ತಪಸ್ವಿನಿಯಾದ ಅವಳಲ್ಲಿ ಸೇವಾನಿಷ್ಠೆ ತುಂಬಿಹೋಗಿತ್ತು. ಭಯಂಕರ ಕ್ಷಾಮ ತಲೆದೋರಿದಾಗ ಅವಳು ನಾರು,ಬೇರುಗಳನ್ನು ಸಂಗ್ರಹಿಸಿ, ದೀನ ದಲಿತರಿಗೆ ಹಂಚಿ ಸೇವೆ ಮಾಡಿದ್ದಳು. ವನವಾಸಕ್ಕೆ ಬಂದ ಸೀತೆಯನ್ನು ತನ್ನ ಮಗಳಂತೆ ಕಂಡು, 'ಧರ್ಮಮಾರ್ಗದಲ್ಲಿ ನಡೆ, ಪತಿಗೆ ವಿಧೇಯಳಾಗಿರು, ಸುಖ ಕಷ್ಟಗಳನ್ನು ಸಮಾನವಾಗಿ ಕಾಣು' — ಎಂಬ ಹಿತವಚನಗಳನ್ನು ನುಡಿದಳು. 'ಪತಿಸೇವೆಯೇ ನನ್ನ ಪರಮಧರ್ಮವೆಂದು ತಿಳಿದಿದ್ದೇನೆ'—ಎಂದು ಸೀತೆ, ಮಹಾಸಾಧ್ವಿಯಾದ ಋಷಿಪತ್ನಿಗೆ ತನ್ನ ಹೃದಯಾಂತರಾಳದ ಭಾವನೆಗಳನ್ನು ವ್ಯಕ್ತಪಡಿಸಿದಳು. ಅನಸೂಯೆ ಆಶ್ರಮದ ಸುಂದರ ಸನ್ನಿವೇಶವನ್ನೂ ಚಿಲಿಪಿಲಿಗುಟ್ಟುವ ಪಕ್ಷಿಗಳನ್ನೂ ಸೀತೆಗೆ ತೋರಿಸಿದಳು. ಅನಸೂಯೆಯಂತಹ ಧಾರ್ಮಿಕ ಮಹಿಳೆಯರು ಪ್ರಾಚೀನ ಭಾರತದಲ್ಲಿ ತಮ್ಮ ಬದುಕನ್ನು ಪಾವನ ಮಾಡಿಕೊಂಡು ಇತರರಿಗೂ ಮಾರ್ಗದರ್ಶಿಗಳಾಗಿದ್ದರು.

ಶಬರಿ :

ರಾಮಾಯಣದಲ್ಲಿ ಬರುವ ಶಬರಿ, ಸರಳತೆ, ಭಕ್ತಿಭಾವ, ಸೌಜನ್ಯ, ತಪಸ್ಸು–ಇವುಗಳ ಸಾಕಾರಮೂರ್ತಿ. ಶಬರ ಸ್ತ್ರೀಯಾದ ಅವಳು ಮತಂಗ ಮಹರ್ಷಿಯ ಶಿಷ್ಯೆಯಾಗಿ ತನ್ನ ಆತ್ಮ ತೇಜಸ್ಸಿನಿಂದ ಶ್ರೀರಾಮ ಲಕ್ಷ್ಮಣರನ್ನು ಸಂದರ್ಶಿಸಲು ಹಾರೈಸಿ, ಅವರ ಮೇಲೆ ತನ್ನ ಮಾತೃವಾತ್ಸಲ್ಯವನ್ನು ಹರಿಸಿ, ಅವರನ್ನು ಸತ್ಕರಿಸಿ ಬೀಳ್ಕೊಂಡ ಚಿತ್ರ, ರಾಮಾಯಣದಲ್ಲಿ ಹೃದಯಂಗಮವಾಗಿದೆ. ಶಬರ ಗೃಹದಲ್ಲಿ ಜನಿಸಿದ ಅವಳಿಗೆ ವಿಶೇಷ ಸಾಂಸ್ಕೃತಿಕ ಹಿನ್ನೆಲೆ ಇರಲಿಲ್ಲ. ಕೇವಲ ತನ್ನ ಅಭೀಪ್ಸೆಯಿಂದಲೇ ಅವಳು ಧರ್ಮಮಾರ್ಗದಲ್ಲಿ ಮುನ್ನಡೆದಳು. ಶ್ರೀರಾಮನನ್ನು ಕಾಣುವ ಸುಯೋಗವಿದೆ ಎಂಬ ಮುನಿ ವಚನದಲ್ಲಿ ಅವಳು ವಿಶ್ವಾಸವಿಟ್ಟು ಆ ವಾಕ್ಯವನ್ನೇ ವೇದ ವಾಕ್ಯವೆಂದು ನಂಬಿ, ರಾಮ ಸಂದರ್ಶನಕ್ಕಾಗಿ ಅವಳು ಬಹುವರ್ಷ ಕಾದಳು. ಅವಳ ವಿಶ್ವಾಸ ಅನುಪಮ. ಕಡೆಗೆ ರಾಮನನ್ನು ಸಂದರ್ಶಿಸಿ ಕೃತಾರ್ಥಳಾದಳು. ಸೀತೆಯನ್ನು ಕಳೆದುಕೊಂಡು ಅವಳನ್ನು ಹುಡುಕುತ್ತ ಚಿಂತಾಕ್ರಾಂತನಾಗಿ, ಬಂದ ರಾಮನನ್ನೂ ಅವನ ಸಹೋದರ ಲಕ್ಷ್ಮಣನನ್ನೂ ಆದರಿಸಿ ಸಂತೈಸಿದ ಶಬರಿಯಲ್ಲಿ ಯಾರಿಗಾದರೂ ಭಕ್ತಿ ಗೌರವಗಳು ಚಿಮ್ಮದಿರದು. ಅರಣ್ಯದಲ್ಲಿ ಅಲೆದು ರಾಮಲಕ್ಷ್ಮಣರಿಗೆ ರುಚಿಕರವಾದ ಹಣ್ಣುಗಳನ್ನು ತಂದು ನಿರ್ಮಲ ಹೃದಯದಿಂದ ಅವರನ್ನು ಉಪಚರಿಸಿದ ಅವಳ ಹೃದಯದ ಪ್ರೀತಿ ಅನನ್ಯವಾದುದು. ಆ ಪ್ರೀತಿ ಮಾತೃವಾತ್ಸಲ್ಯಕ್ಕೆ ಸದೃಶವಾದುದು.

ಕೌಸಲ್ಯೆ:

ರಾಮಾಯಣದಲ್ಲಿ ಉದಾತ್ತ ಸ್ತ್ರೀಪಾತ್ರಗಳೆಂದರೆ ಕೌಸಲ್ಯೆ, ಸುಮಿತ್ರೆ ಮತ್ತು ಸೀತೆ. ರಾಮನ ತಾಯಿ ಕೌಸಲ್ಯೆಯ ಮಹತ್ತರವಾದ ಗುಣವೆಂದರೆ ಪತಿಯಲ್ಲಿ ಅವಳಿಗಿದ್ದ ಅಪಾರ ಪ್ರೀತಿ. ದಶರಥನಿಗೆ ಕೈಕೇಯಿಯಲ್ಲಿ ವಿಶೇಷ ಪ್ರೇಮ ವಿರುವುದನ್ನು ತಿಳಿದಿದ್ದರೂ ಅವಳು ಅಸೂಯೆ ಪಡಲಿಲ್ಲ. ಪತಿಯನ್ನು ಅವಾಚ್ಯ ಶಬ್ದಗಳಿಂದ ನೋಯಿಸಲಿಲ್ಲ. ತನಗೆ ದುಃಖವಾದರೂ ಸಹಿಸಿ, ಎಲ್ಲರಿಗೂ ಒಳ್ಳೆಯದನ್ನೇ ಹಾರೈಸಿದ ಅವಳು ದಾಸಿಯಂತೆ, ಭಾರ್ಯೆಯಂತೆ, ಸಹೋದರಿಯಂತೆ, ತಾಯಿಯಂತೆ ಪತಿಗೆ ಸೇವೆ ಸಲ್ಲಿಸಿದಳು. ಅವಳಿಗೆ ಸಪತ್ನೀತ್ವದ ಕಷ್ಟ ಚೆನ್ನಾಗಿ ಅರ್ಥವಾಗಿತ್ತು. ರಾಮನು ಅರಣ್ಯಕ್ಕೆ ಹೊರಟು ನಿಂತಾಗ, ತಾನೂ ಅವನೊಡನೆ ಹೊರಟು ಹೋದರೆ, ಕ್ಲೇಶ ಗಳಿಂದ ದೂರವಾಗಬಹುದೆಂದು ಯೋಚಿಸಿದಳು. ಪುತ್ರ ವಾತ್ಸಲ್ಯದಿಂದ ತಾಯಿ ತನ್ನೊಡನೆ ಬರಲು ಇಚ್ಛಿಸಿದಾಗ, ಪತಿಯ ಸೇವೆಯನ್ನು ಮರೆಯಬಾರದೆಂದು ರಾಮನು ಹೇಳಿದೊಡನೆ, ತನ್ನ ನಿರ್ಧಾರವನ್ನು ಬಿಟ್ಟು ಪತಿಯ ಸೇವೆಗಾಗಿ ಅವಳು ಅಯೋಧ್ಯೆಯಲ್ಲಿಯೇ ನಿಂತಳು. ಸ್ತ್ರೀಧರ್ಮವಾದ ಪತಿಯ ಸೇವೆಯಲ್ಲಿ ಅವಳಿಗೆ ಅಸಾಧಾರಣವಾದ ಶ್ರದ್ಧೆ ಇದ್ದುದರಿಂದಲೇ ಅವಳ ಮನಸ್ಸು ಸ್ಥಿರವಾಯಿತು. ಕಪಟವಿಲ್ಲದ ಅವಳ ಹೃದಯದ ಭಾವನೆ ಪವಿತ್ರವಾದುದು, ನಿರ್ಮಲವಾದುದು.

ರಾಮನನ್ನು ಬೀಳ್ಕೊಡುವಾಗ ಧರ್ಮವೇ ಅವನನ್ನು ರಕ್ಷಿಸಲೆಂದು ಅವಳು ನುಡಿದಳು.

> ಯಂ ಪಾಲಯಸಿ ಧರ್ಮಂ ತ್ವಂ ಧೃತ್ಯಾ ಚ ನಿಯಮೇನ ಚ
> ಸ ವೈ ರಾಘವ ಶಾರ್ದೂಲ ಧರ್ಮಸ್ತ್ವಾಮಭಿರಕ್ಷತು॥
>
> ವಾಲ್ಮೀಕಿ ರಾಮಾಯಣ II 25–3

"ರಘುವಂಶ ಶ್ರೇಷ್ಠನೇ, ನಿಷ್ಠೆ ನಿಯಮಗಳಿಂದ ನೀನು ಯಾವ ಧರ್ಮವನ್ನು ಪಾಲಿಸುತ್ತಿರುವೆಯೋ ಆ ಧರ್ಮವೇ ನಿನ್ನನ್ನು ಎಲ್ಲೆಡೆಯೂ ರಕ್ಷಿಸಲಿ".

ಸಾಧ್ವಿಯೂ, ನಮ್ರ ಮಧುರ ಸ್ವಭಾವದವಳೂ ಆದ ಕೌಸಲ್ಯೆಗೆ ಸೀತಾರಾಮ ಲಕ್ಷ್ಮಣರನ್ನು ಬೀಳ್ಕೊಡುವುದು ಬಹು ಕಷ್ಟವಾಯಿತು. ಕ್ಷತ್ರಿಯ ಮಾತೆಯಾದ ಅವಳು ತನ್ನ ದುಃಖವನ್ನು ಸಹಿಸಿ, ಸೀತೆಯನ್ನು ಕುರಿತು, 'ಶೀಲದಲ್ಲಿ, ಸತ್ಯದಲ್ಲಿ, ತಿಳಿವಿನಲ್ಲಿ ನೆಲಸಿದ ಸಾಧ್ವಿಯರಿಗೆ ಪತಿಯೊರ್ವನೆ ಶ್ರೇಷ್ಠ' – ಎಂಬ ಧರ್ಮವನ್ನು ತಿಳಿಸಿ ಅವಳನ್ನು ಬೀಳ್ಕೊಟ್ಟಳು.

ಸೀತಾರಾಮಲಕ್ಷ್ಮಣರು ಅರಣ್ಯಾಭಿಮುಖವಾಗಿ ಹೊರಟು ಹೋದ ಬಳಿಕ ದಶರಥನು ಪುತ್ರಶೋಕದಿಂದ ಗತಜೀವಿಯಾದನು. ದುಃಖದ ಮೇಲೆ ದುಃಖ ಕೌಸಲ್ಯೆಯನ್ನು ಅಪ್ಪಳಿಸಿತು. ಅವಳ ಸ್ಥಿತಿ ಶೋಚನೀಯವಾಯಿತು. ಶೋಕದಿಂದ ಕುಗ್ಗಿಹೋದ ಅವಳು ಕೃಶಳಾದಳು. ಆದರೆ ಕಷ್ಟಕ್ಲೇಷಗಳನ್ನು ಕಡೆಗೆ ಗೆದ್ದು ನಿಂತ ಮಹಾಸಾಧ್ವಿ ಅವಳು. ಅವಳ ಮಾತೃವಾತ್ಸಲ್ಯ, ಸರಳತೆ ಋಜು ಮನೋಭಾವ ಮೊದಲಾದ ಗುಣಗಳು ಅವಳ ವ್ಯಕ್ತಿತ್ವಕ್ಕೆ ಶೋಭೆಯನ್ನುಂಟುಮಾಡಿವೆ.

ಸುಮಿತ್ರೆ :

ಸುಮಿತ್ರೆ ಸಂಯಮಶೀಲೆ. ದಶರಥನ ಪ್ರೇಮ ಅತಿಯಾಗಿದ್ದುದು ಕೈಕೇಯಿ ಮತ್ತು ಕೌಸಲ್ಯೆಯರಲ್ಲಿ. ಸಾತ್ವಿಕ ಶೀಲಳಾದ ಅವಳಿಗೆ ಸುಖಕಷ್ಟಗಳನ್ನು ಸಮಾನವಾಗಿ ಕಾಣುವ ದೃಷ್ಟಿಲಭಿಸಿತ್ತು. ಮಗನಾದ ಲಕ್ಷ್ಮಣನು ಸೀತಾರಾಮರೊಡನೆ ಅರಣ್ಯಕ್ಕೆ ಹೋಗುವುದನ್ನು ಕೇಳಿದೊಡನೆ ಸಂತೋಷದಿಂದ ಅವನನ್ನು ಬೀಳ್ಕೊಟ್ಟಳು ಆಗ ಅವಳು ನುಡಿದ ಮಾತುಗಳು ಅರ್ಥಪೂರ್ಣ.

ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಮ್।
ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾ ಸುಖಮ್॥
ವಾಲ್ಮೀಕಿ ರಾಮಾಯಣ II 40—9

"ರಾಮನನ್ನು ದಶರಥನೆಂದು ತಿಳಿ. ಸೀತೆಯನ್ನು ನಾನೆಂದು ತಿಳಿ. ಅಡವಿಯನ್ನು ಅಯೋಧ್ಯೆಯೆಂದು ತಿಳಿ. ಸುಖವಾಗಿ ಹೋಗಿ ಬಾ".

ನಿರ್ಮಲ ಮುಗ್ಧ ಹೃದಯ ಹಾಗೂ ವಿವೇಕಗಳಿಂದ ಕೂಡಿದ ಸುಮಿತ್ರೆ ಭಾರತೀಯ ಆದರ್ಶ ಮಹಿಳೆಯರ ವಿರಳ ವರ್ಗಕ್ಕೆ ಸೇರುತ್ತಾಳೆ.

ಸೀತೆ:

ಸೀತೆ ರಾಜರ್ಷಿಯಾದ ಜನಕರಾಜನ ಮಗಳು. ಅವಳು ಪದ್ಮಪತ್ರ ವಿಶಾಲಾಕ್ಷಿ,ಶುಚಿಸ್ಮಿತೆ. ಶೀಲ ಸೌಂದರ್ಯಗಳ ತೇಜೋರಾಶಿಯಾದ ಅವಳು, ಪುರುಷೋತ್ತಮನಾದ ಶ್ರೀರಾಮನನ್ನು ವರಿಸಿದ ಸಾಧ್ವಿ. ಅವಳ ಸ್ವಭಾವವನ್ನು ಕುರಿತು ಸೀತಾ ಕಲ್ಯಾಣದಲ್ಲಿ ಜನಕನು ಹೇಳಿದ ಮಾತುಗಳಿವು:

ಇಯಂ ಸೀತಾ ಮಮಸುತಾ ಸಹಧರ್ಮಚರೀತವ।
ಪ್ರತೀಚ್ಛ ಚೈನಾಂ ಭದ್ರಂತೇ ಪಾಣಿಂ ಗೃಹ್ಣೀಷ್ವ ಪಾಣಿನಾ॥
ಪತಿವ್ರತಾ ಮಹಾಭಾಗಾ ಛಾಯೇವಾನುಗತಾ ಸದಾ॥
ವಾಲ್ಮೀಕಿ ರಾಮಾಯಣ I 73 27—28

"ಇವಳೇ ಸೀತೆ. ನನ್ನ ಮಗಳು. ನಿನಗೆ ಸಹಧರ್ಮಚಾರಿಣಿ. ಇವಳ ಕೈಯನ್ನು ನಿನ್ನ ಕೈಯಿಂದ ಗ್ರಹಿಸಿ ಸ್ವೀಕರಿಸು. ನಿನಗೆ ಮಂಗಳವಾಗಲಿ. ಇವಳು ಪತಿವ್ರತೆ, ಪುಣ್ಯಶಾಲಿನಿ, ನೆರಳಿನಂತೆ ನಿನ್ನನ್ನು ಅನುಸರಿಸುವವಳು"

ಶೀಲರೂಪಗಳಲ್ಲಿ ರಾಮಸೀತೆಯರು ಸಮಾನರು. ಅನುಕೂಲ ದಾಂಪತ್ಯದಿಂದ ಸಂತೋಷಗೊಂಡ ಅವರು, ವಿವಾಹದ ಬಳಿಕ ಅಯೋಧ್ಯೆಯಲ್ಲಿ ಸುಖವಾಗಿದ್ದುದು ಕೇವಲ ಹನ್ನೆರಡು ವರ್ಷಗಳ ಕಾಲ. ಅನಂತರ ಪ್ರಾರಂಭವಾಯಿತು ಕಷ್ಟಗಳ ಪರಂಪರೆ. ಧರ್ಮವೇ ಸಾಕ್ಷಾತ್ಕಾರಗೊಂಡಂತಿದ್ದ ರಾಮನು ಅರಣ್ಯಕ್ಕೆ ಹೊರಡಬೇಕಾಯಿತು. ರಾಮನ ಯೌವರಾಜ್ಯಾಭಿಷೇಕಕ್ಕಾಗಿ ಅಲಂಕೃತಳಾದ ಸೀತೆ, ರಾಮನು ಅರಣ್ಯಕ್ಕೆ ಹೊರಡಬೇಕಾದುದನ್ನು ಕೇಳಿ ನಡುಗಿದಳು. ಅವಳ ಕೋಮಲ ಹೃದಯಕ್ಕೆ ಆ ವಾರ್ತೆಯಿಂದ ಬಹು ದುಃಖವಾಯಿತು. ಸೀತೆ ಅರಮನೆಯಲ್ಲಿಯೇ ಇರಬೇಕೆಂದು ರಾಮ ಎಷ್ಟು ಹೇಳಿದರೂ ಅದಕ್ಕೆ ಸೀತೆ ಒಪ್ಪಲಿಲ್ಲ. ಸೀತೆ ಎಷ್ಟು ಹೇಳಿದರೂ ಅವಳನ್ನು ಅರಣ್ಯಕ್ಕೆ ಕರೆದೊಯ್ಯಲು ರಾಮನು ಒಪ್ಪಲಿಲ್ಲ. ರಾಮನೊಡನೆ ಯಾವ ಕಷ್ಟವನ್ನಾದರೂ ಅನುಭವಿಸಲು ಸಿದ್ಧಳಾದ ಸೀತೆ, ದುಃಖಾತಿರೇಕದಿಂದಲೂ, ಪ್ರಣಯ ಕೋಪದಿಂದಲೂ " ರಾಮ, ಪುರುಷರೂಪದಿಂದಿರುವ ಸ್ತ್ರೀಯಾದ ನಿನ್ನನ್ನು ನನ್ನ ತಂದೆ ಜನಕನು ಹೇಗೆ ಅಳಿಯನನ್ನಾಗಿ ಮಾಡಿಕೊಂಡನೋ '' – ಎಂದು ನುಡಿದಳು. ಎಷ್ಟು ಬೇಡಿದರೂ ರಾಮನು ಅವಳನ್ನು ಕರೆದೊಯ್ಯಲು ಒಪ್ಪದಿದ್ದಾಗ, ಕ್ಷತ್ರಿಯ ರಮಣಿಯಾದ ಅವಳಿಗೆ ಬೇರೆ ಮಾರ್ಗ ಕಾಣದೆ ಕಟುವಾಗಿ ನುಡಿಯಬೇಕಾಯಿತು. ಪತಿವ್ರತೆಯೂ, ಪ್ರಿಯಳೂ, ಸುಖದುಃಖಗಳಲ್ಲಿ ಸಮಾನಳೂ ಆದ ಪತ್ನಿಯನ್ನು ರಾಮನು ಕಡೆಗೆ ಅರಣ್ಯಕ್ಕೆ ಕರೆದೊಯ್ಯಲು ಒಪ್ಪಬೇಕಾಯಿತು.

ಕೋಮಲ ಶರೀರೆಯಾದ ಸೀತೆ, ಚೀರವಲ್ಕಲಗಳನ್ನು ಧರಿಸಿ ಪತಿಯೊಡನೆ ಅರಣ್ಯಕ್ಕೆ ಹೊರಟಳು. ಅರಮನೆಯನ್ನು ಬಿಡುವೆ

ನೆಂಬ ಸಂಕಟ ಅವಳಿಗಾಗಲಿಲ್ಲ. ಗಿರಿವನ ಪ್ರಿಯನಾದ ರಾಮ ನೊಡನೆ ಅವಳು ಅರಣ್ಯದ ವಿಪುಲ ಸೌಂದರ್ಯವನ್ನು ಸವಿದಳು. ಸೀತಾರಾಮಲಕ್ಷ್ಮಣರು ಪಂಚವಟಿಯ ಪರ್ಣಕುಟೀರದಲ್ಲಿ ವಾಸ ಮಾಡುತ್ತಿದ್ದಾಗ, ಮಾರೀಚನು ಸುವರ್ಣಮೃಗವಾಗಿ ಸುಳಿಯುವು ದನ್ನು ಕಂಡ ಸೀತೆ, ಸ್ತ್ರೀಸಹಜವಾದ ಚಾಪಲ್ಯದಿಂದ ಆ ಮೃಗ ವನ್ನು ತನಗೆ ಬೇಕೆಂದು ಪತಿಯನ್ನು ಕಾಡಿದಳು. ಈ ಒಂದು ಸಂದರ್ಭದಲ್ಲಿ ಮಾತ್ರ ಸೀತೆ ರಾಮನ ಅಭಿಪ್ರಾಯಕ್ಕೆ ಮಾನ್ಯತೆ ತೋರಲಿಲ್ಲ. ರಾಮನು ಅದು ರಾಕ್ಷಸ ಮಾಯೆಯೆಂದು ಹೇಳಿದರೂ ಕೇಳಲಿಲ್ಲ. ಕಡಗೆ ರಾಮನು ಮಾಯಾಮೃಗವನ್ನು ಬೆನ್ನಟ್ಟಿ, ಅದು ಸಿಕ್ಕದಿರಲು ಬಾಣ ಪ್ರಯೋಗ ಮಾಡಿದನು. ರಾಮ ಬಾಣದಿಂದ ಏಟು ತಿಂದು, ಮಾಯಾಮೃಗದ ರೂಪದಲ್ಲಿದ್ದ ಮಾರೀಚನು, “ಓ ಲಕ್ಷ್ಮಣಾ,” ಎಂದು ಕೂಗಿ ಸತ್ತನು. ಅದನ್ನು ಕೇಳಿ ಕಳವಳಗೊಂಡ ಸೀತೆ, ಲಕ್ಷ್ಮಣನನ್ನು ರಾಮನ ಬಳಿಗೆ ಹೋಗಬೇಕೆಂದು ಒತ್ತಾಯಪಡಿಸಿದಳು. ಸೀತೆಯ ರಕ್ಷಣೆಯಲ್ಲಿರ ಬೇಕೆಂದು ರಾಮನ ಆಜ್ಞೆಯಾಗಿತ್ತು ಲಕ್ಷ್ಮಣನಿಗೆ. ಅವನು, ಆ ಕೂಗು ರಾಕ್ಷಸರ ಮಾಯೆಯೆಂದರೂ ಇವಳು ನಂಬಲಿಲ್ಲ. ತನ್ನ ಅಭಿಲಾಷೆಯಂತೆ ಲಕ್ಷ್ಮಣನು ರಾಮನ ಬಳಿಗೆ ಹೋಗದಿರಲು, ಅವಳಿಗೆ ಕೋಪ ಬಂದು, “ಅನಾರ್ಯ, ನಿರ್ದಯ, ಘಾತುಕ, ಕುಲಗೇಡಿ, ರಾಮನ ದುಃಖ ನಿನಗೆ ಪ್ರಿಯವಾಯಿತೆಂದು ಕಾಣುತ್ತದೆ. ರಾಮನ ಕಷ್ಟವನ್ನು ಕಂಡು, ದುರ್ಗುಣಗಳಿಂದ ಕೂಡಿದ ನೀನು ಈ ರೀತಿ ಮಾತನಾಡುತ್ತಿರುವೆ. ನಿನ್ನಂತಹ ಶತ್ರುಗಳಲ್ಲಿ ಈ ರೀತಿಯಾದ ಪಾಪಕೃತ್ಯವು ನಡೆಯುವುದಾದರೆ ಆಶ್ಚರ್ಯವಿಲ್ಲ !” ಎಂದು ಕಠೋರವಾಗಿ ನುಡಿದುಬಿಟ್ಟಳು. ವೈದ್ಯನ ಲಕ್ಷ್ಮಣನ ರೀತಿ ನೀತಿ ಸದ್ಗುಣಗಳನ್ನು ತಿಳಿದ ಸೀತೆ, ಈ

ರೀತಿ ನುಡಿಯುವುದನ್ನು ಕಂಡು ಆಶ್ಚರ್ಯವಾಗಬಹುದು. ಈ ರೀತಿ ನುಡಿಯಲು ಅವಳಿಗೆ ಪತಿಯಲ್ಲಿದ್ದ ಪರಮ ಪ್ರೀತಿಯೇ ಕಾರಣ. ಈ ರೀತಿ ಉದ್ವೇಗದಿಂದ ನುಡಿದ ಸೀತೆಯ ಮಾತನ್ನು ಕೇಳಿ, ಲಕ್ಷ್ಮಣ ರಾಮನನ್ನು ಅರಸುತ್ತ ಹೊರಡಲೇ ಬೇಕಾಯಿತು. ಆಗ ರಾವಣನು ಸೀತೆಯನ್ನು ಅಪಹರಿಸುವುದು ಸುಲಭವಾಯಿತು. ರಾವಣನು ಸೀತೆಯನ್ನು ಕರೆದೊಯ್ದು ನಾನಾರೀತಿ ಬೆದರಿಸಿದರೂ ಅವಳು ಬಗ್ಗಲಿಲ್ಲ. ಅವಳು ಒಂದು ಸಲ ರಾವಣನಿಗೆ, '' ನಾನು ಧರ್ಮಿಷ್ಠನಾದ ರಾಮನ ಪತ್ನಿ. ದಶರಥ ಮಹಾರಾಜನ ಸೊಸೆ. ಅಧರ್ಮವನ್ನು ನುಡಿವ ನಿನ್ನ ನಾಲಿಗೆ ಸೀಳಿಹೋಗ ಬಾರದೇಕೆ? " — ಎಂದು ಧೈರ್ಯವಾಗಿ ನುಡಿದಳು. ರಾಕ್ಷಸಿಯರು ಎಷ್ಟು ಹಿಂಸಿಸಿದರೂ ಸೀತೆ ಮಣಿಯಲಿಲ್ಲ. ಅವಳ ಧೀರ ನಿಶ್ಚಯದ ಮುಂದೆ ರಕ್ಕಸಿಯರ ತರ್ಜನ ಗರ್ಜನಗಳು ವ್ಯರ್ಥವಾದವು.

ಹನುಮಂತನು ತಂದುಕೊಟ್ಟ ರಾಮನ ಉಂಗುರವನ್ನು ಸ್ವೀಕರಿಸಿ ಪತಿಯನ್ನು ಪಡೆದಷ್ಟು ಸಂತುಷ್ಟಳಾದಳು ಸೀತೆ. ತನ್ನ ನೆನಪಿಗಾಗಿ ಚೂಡಾಮಣಿಯನ್ನು ರಾಮನಿಗೆ ಅರ್ಪಿಸಿದಳು. ಸೀತೆಯ ಧೈರ್ಯ, ತಾಳ್ಮೆ, ಚಾರಿತ್ರ್ಯ, ನಿಷ್ಠೆ, ಪತಿಭಕ್ತಿ, ಋಜುಮನಸ್ಸು, ಇವೆಲ್ಲ ಅವಳ ಧರ್ಮನಿಷ್ಠೆಯನ್ನು ತೋರುತ್ತವೆ. ಅವಳು ಒಂದು ಸಲ ರಾಮನನ್ನು ಕುರಿತು ತನ್ನ ಸಂದೇಹವನ್ನು ಕೇಳಿದಳು. ಯಾವುದನ್ನೂ ಅವಳು ಬಚ್ಚಿಡುವುದಿಲ್ಲ. ಅವಳ ಹೃದಯ ನಿರ್ಮಲ, ಮತ್ತು ಪವಿತ್ರ. ಮಾನವನ ಯಶಸ್ಸಿಗೆ ಧಕ್ಕೆ ತರುವ ಅವಗುಣಗಳೆಂದರೆ ಮಿಥ್ಯಾವಾಕ್ಯ ಮತ್ತು ಕಾರಣವಿಲ್ಲದೆ ಇತರರನ್ನು ಹಿಂಸಿಸುವುದು. ರಾಮನು ರಾಕ್ಷಸರನ್ನು ದ್ವೇಷಿಸುವುದನ್ನು ಕಂಡಾಗ, ರಾಮನನ್ನು ಕುರಿತು, " ನಮಗೆ ತೊಂದರೆ

ಮಾಡದ ಈ ರಾಕ್ಷಸರಲ್ಲಿ ದ್ವೇಷವೇಕೆ?'' ಎಂದು ಅರಣ್ಯದಲ್ಲಿ ಸಂಚರಿಸುತ್ತಿದ್ದ ಸೀತೆ, ತನ್ನ ಪತಿಯನ್ನು ಪ್ರಶ್ನಿಸಿದಳು. ರಾಮನು ಮುನಿಗಳಂತಹ ಸಾತ್ವಿಕರನ್ನು ದ್ವೇಷಿಸುವ ರಾಕ್ಷಸರನ್ನು ದಂಡಿಸುವುದು ಕ್ಷಾತ್ರಧರ್ಮ ಎಂದು ಸೀತೆಗೆ ಹೇಳಿ ಸಾಂತ್ವನಗೊಳಿಸಿದನು.

ಸ್ವಾಮಿವಿವೇಕಾನಂದರು, ''ರಾಮನಂತಹ ಆದರ್ಶ ಪುರುಷರನ್ನು ಜಗತ್ತಿನಲ್ಲಿ ಕಾಣಬಹುದು. ಆದರೆ ಸೀತೆಯಂತಹ ಆದರ್ಶ ಮಹಿಳೆಯರನ್ನು ಕಾಣುವುದು ದುರ್ಲಭ'' –ಎಂದು ಹೇಳಿದ ನುಡಿಗಳು, ಸೀತೆಯ ಪಾತ್ರವನ್ನು ಅರಿತಾಗ ಸ್ಪಷ್ಟವಾಗುತ್ತದೆ. ಸೀತೆಯ ಧರ್ಮನಿಷ್ಠೆ ಅವಳನ್ನು ಆದರ್ಶ ಮಹಿಳೆಯರ ವಿರಳ ಪಂಕ್ತಿಗೆ ಸೇರಿಸಿದೆ.

3. ಮಹಾಭಾರತದಲ್ಲಿ :

ಮಹಾಭಾರತವು ಪಂಚಮವೇದವೆಂದು ಖ್ಯಾತವಾಗಿದೆ. ಮಹಾಭಾರತವನ್ನು ವಿರಚಿಸಿದ ವ್ಯಾಸಮಹರ್ಷಿ, ಧರ್ಮದ ಹಿರಿಮೆಯನ್ನು ತನ್ನ ಕಾವ್ಯದಲ್ಲಿ ಸ್ಪಷ್ಟವಾಗಿ ಸಾರಿದ್ದಾನೆ. "ಕಾಮದಿಂದ ಕಾಮವನ್ನು ತೃಪ್ತಿಪಡಿಸಲಾಗುವುದಿಲ್ಲ, ಸಂಯಮದಿಂದಲೇ ಶಾಂತಿ ಲಭಿಸುವುದು"— ಎಂಬುದನ್ನು ತನ್ನ ಕಾವ್ಯದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾನೆ. "ಪರೋಪಕಾರಾಯ ಪುಣ್ಯಾಯ, ಪಾಪಾಯ ಪರಪೀಡನಂ" — ಎಂಬುದನ್ನು ತನ್ನ ಕಾವ್ಯದಲ್ಲಿ ಘೋಷಿಸಿದ್ದಾನೆ. "ಪುಣ್ಯವೆಂದರೆ ಪರೋಪಕಾರ, ಪಾಪವೆಂದರೆ ಪರಪೀಡನೆ"— ಎಂದು ಪಾಪಪುಣ್ಯಗಳ ವಿವೇಚನೆ ಈ ಕಾವ್ಯದಲ್ಲಿ ಸುಪ್ರಕಟವಾಗಿದೆ.

ಧರ್ಮ ನಿತ್ಯವಾದುದು, ಎಂಬ ತತ್ವ ಈ ಕಾವ್ಯದ ಉದ್ದಕ್ಕೂ ಅಂತರಗಂಗೆಯಂತೆ ಹರಿಯುತ್ತದೆ. ಮಹಾಭಾರತದಲ್ಲಿ ಧರ್ಮ ಮಾರ್ಗದಲ್ಲಿ ನಡೆದ ಅನೇಕ ಸ್ತ್ರೀಯರ ವೃತ್ತಾಂತಗಳಿದ್ದರೂ ಮಹಾಭಾರತದಲ್ಲಿ ಗಾಂಧಾರಿ, ದ್ರೌಪದಿ ಮತ್ತು ಸಾವಿತ್ರ್ಯುಪಾಖ್ಯಾನದಲ್ಲಿ ಬರುವ ಸಾವಿತ್ರಿ ಈ ಮೂರು ಪಾತ್ರಗಳನ್ನೇ ಪ್ರಧಾನವಾಗಿಟ್ಟುಕೊಂಡು, ಅವರ ಧರ್ಮದೃಷ್ಟಿಯ ರೂಪರೇಷೆಗಳನ್ನು ಇಲ್ಲಿ ಚಿತ್ರಿಸಿದೆ.

ಗಾಂಧಾರಿ :

ಗಾಂಧಾರದೇಶದ ಸುಬಲರಾಜನ ಮಗಳಾದ ಗಾಂಧಾರಿ ತನ್ನ ಅನುಪಮವಾದ ಧರ್ಮನಿಷ್ಠೆಯಿಂದ ಶ್ರೇಷ್ಠ ಮಹಿಳೆಯಾಗಿ ಮಹಾಭಾರತದಲ್ಲಿ ವಿರಾಜಿಸುತ್ತಾಳೆ. ಧರ್ಮಕ್ಕಾಗಿ ತನ್ನ ಸ್ವಾರ್ಥವನ್ನು ತ್ಯಜಿಸಿದ ಮಹಾಮಹಿಳೆ ಅವಳು. ಭೀಷ್ಮನು, ಗಾಂಧಾರಿಯ ಧರ್ಮನಿಷ್ಠೆಯನ್ನು ಕೇಳಿ ತಿಳಿದು, ಅವಳು ಧೃತರಾಷ್ಟ್ರನಿಗೆ ಯೋಗ್ಯ ವಧುವೆಂದು ನಿಶ್ಚಯಿಸಿದನು. ಕುರುಡನಾದ ದೃತರಾಷ್ಟ್ರನಿಗೆ ತನ್ನ ಮಗಳನ್ನು ಕೊಡಲು ಸುಬಲರಾಜನ ಮನಸ್ಸು ಮೊದಲು ಒಪ್ಪಲಿಲ್ಲ. ಆದರೆ ಕುರುವಂಶದ ಹಿರಿಮೆಯನ್ನು ಮನಸ್ಸಿನಲ್ಲಿ ನೆನೆದು, ಕಡೆಗೆ ತನ್ನ ಮಗಳನ್ನು ಧೃತರಾಷ್ಟ್ರನಿಗೆ ವಿವಾಹ ಮಾಡಿಕೊಟ್ಟನು. ಪತಿ ಕುರುಡನಾದ ಮೇಲೆ ತನಗೂ ಕಣ್ಣಿನ ಸುಖ ಬೇಡವೆಂದು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಜೀವನವನ್ನು ಸಾಗಿಸಿದ ಮನೋಧೈರ್ಯ ಅವಳದು!

ಅವಳಿಗೆ ನೂರು ಮಕ್ಕಳಾದರು. ಅವರು ಧರ್ಮನಿಷ್ಠರಾಗಿರಲಿಲ್ಲ. ಹಲವು ವೇಳೆ ಧೃತರಾಷ್ಟ್ರನಿಗೆ, ಮಕ್ಕಳನ್ನು ನಿಗ್ರಹಿಸಬೇಕೆಂದು ಗಾಂಧಾರಿ ಹಿತವಚನಗಳನ್ನು ಹೇಳಿದಳು. ಪಾಂಡವರು

ದ್ಯೂತದಿಂದ ಸರ್ವವನ್ನೂ ಕಳೆದುಕೊಂಡಾಗ ಗಾಂಧಾರಿ ಮಮ್ಮಲ ಮರುಗಿದಳು, ಗಂಡನ ಬಳಿಗೆ ಹೋಗಿ ಸುಯೋಧನನ ಕೃತ್ಯವನ್ನು ಟೀಕಿಸಿದಳು. ಅಷ್ಟೇ ಅಲ್ಲ, ಕುರುವಂಶಕ್ಕೆ ಕಳಂಕಪ್ರಾಯನಾದ ಮಗನನ್ನು ರಾಜ್ಯದಿಂದ ಹೊರಕ್ಕೆ ಕಳುಹಿಸಬೇಕೆಂದು ಆಗ್ರಹಪೂರ್ವಕವಾಗಿ ನುಡಿದಳು.

ಗಾಂಧಾರಿ ತನ್ನ ಮಾತೃವಾತ್ಸಲ್ಯಕ್ಕೆ ಬಲಿಯಾಗಿ, ಧರ್ಮಕ್ಕೆ ಬಾಹಿರವಾಗಿ ವರ್ತಿಸಲಿಲ್ಲ. ಮಹಾಭಾರತದ ಉದ್ದಕ್ಕೂ ಧರ್ಮವನ್ನೇ ನುಡಿದ ಮಹಾಧಾರ್ಮಿಕಳವಳು. ಪಾಂಡವರಿಗೂ, ಕೌರವರಿಗೂ ಇದ್ದ ವೈಮನಸ್ಯೆಯನ್ನು ಧರ್ಮದೃಷ್ಟಿಯಿಂದಲೇ ಪರಿಹರಿಸಬೇಕೆಂದು ಅವಳು ಸಾರಿದಳು. ಕೃಷ್ಣನು ಸಂಧಾನಕ್ಕಾಗಿ ಹಸ್ತಿನಾಪುರಕ್ಕೆ ಬಂದಾಗ, ಅವಳು ದುರ್ಯೋಧನನಿಗೆ, ಪಾಪಕ್ಕೆ ಮರಣವೇ ಪ್ರಾಯಶ್ಚಿತ್ತವೆಂದು ಎಚ್ಚರಿಕೆ ಹೇಳಿದಳು. ಯುದ್ಧವು ಸಮಸ್ಯೆಗಳನ್ನು ಪರಿಹರಿಸಲಾರದು, ಆದರಿಂದ ಸಮಸ್ಯೆಗಳು ಮತ್ತಷ್ಟು ಹೆಚ್ಚಾಗುವುದೆಂದು ಸತ್ಯಸಂಗತಿಯನ್ನು ನುಡಿದಳು. ದುರಾಶೆಗಳನ್ನು ತ್ಯಜಿಸಿ, ಧರ್ಮನಿಷ್ಠೆಯಿಂದ ರಾಜ್ಯವಾಳಬೇಕೆಂದು ಮಗನಿಗೆ ಹೇಳಿದ ಅವಳ ನುಡಿಗೆ ಪುರಸ್ಕಾರ ಸಿಗಲಿಲ್ಲ. ಕಡೆಗೆ ಹದಿನೆಂಟು ದಿನಗಳ ಭೀಕರ ಯುದ್ಧವಾಯಿತು. ದುರ್ಯೋಧನನು ತಾಯಿಯ ಬಳಿಗೆ ಬಂದು, ಯುದ್ಧದಲ್ಲಿ ಜಯಗಳಿಸಲು ಆಶೀರ್ವದಿಸಬೇಕೆಂದು ಕೇಳಿದನು. ಆಗಲೂ ಗಾಂಧಾರಿ, ಮಗನೆಂಬ ಮೋಹಕ್ಕೆ ಒಳಗಾಗದೆ, "ಎಲ್ಲಿ ಧರ್ಮವೋ ಅಲ್ಲಿ ಜಯ" --ಎಂದು ನಿರ್ವಿಕಾರ ಮನಸ್ಸಿನಿಂದ ನುಡಿದಳು. ಅವಳ ಧರ್ಮನಿಷ್ಠೆ ಅನುಪಮ.

ಕುರುಕ್ಷೇತ್ರದ ಯುದ್ಧದಲ್ಲಿ ಅವಳ ನೂರು ಮಕ್ಕಳು ಹತರಾದ ಬಳಿಕ, ಕೃಷ್ಣನು ಗಾಂಧಾರಿಯ ಬಳಿಗೆ ಬಂದು, ಅವಳನ್ನು

ಸಮಾಧಾನಮಾಡಿ, ಪಾಂಡವರಿಗೆ ಅಶ್ವತ್ಥಾಮನಿಂದ ಬಂದೊದಗ ಬಹುದಾದ ಆಪತ್ತನ್ನು ನಿವಾರಿಸಲು ಹೊರಡುವುದಾಗಿ ಹೇಳಿದಾಗ, ಪಾಂಡವರನ್ನು ರಕ್ಷಿಸಲು ತ್ವರಿತವಾಗಿ ಹೋಗಬೇಕೆಂದು ನುಡಿದು ಅವನನ್ನು ಕಳುಹಿಸಿದಳು. ಅವಳು, ಕುರುಕ್ಷೇತ್ರದಲ್ಲಿ ನೂರು ಮಕ್ಕಳು ಹತರಾದುದನ್ನು ಕೇಳಿದಾಗ ಮಾತ್ರ ಮಾತೃ ವಾತ್ಸಲ್ಯದ ಭಾವನೆಯನ್ನು ತಡೆಯಲಾರದೆ ಮೂರ್ಛೆಹೋದಳು. ಇದೊಂದೇ ಬಾರಿ ಅವಳು ಜೀವನದಲ್ಲಿ ಸಂಯಮವನ್ನು ಕಳೆದು ಕೊಂಡ ಸಂದರ್ಭ. ಮಾನವೀಯ ದೃಷ್ಟಿಯಿಂದ ನೋಡಿದಾಗ, ಈ ಸನ್ನಿವೇಶವೂ ಅವಳ ವ್ಯಕ್ತಿತ್ವಕ್ಕೆ ಶೋಭೆಯನ್ನುಂಟು ಮಾಡುತ್ತದೆ.

ಕುರುಕ್ಷೇತ್ರ ಯುದ್ಧ ಮುಗಿದ ಬಳಿಕ ದ್ರೌಪದಿ ಗಾಂಧಾರಿಯನ್ನು ಸಂದರ್ಶಿಸಲು ಬಂದಾಗ, ಅವಳನ್ನು ಕಂಡು ಗಾಂಧಾರಿ ಕೋಪಿಸಲಿಲ್ಲ. ನೂರು ಮಕ್ಕಳನ್ನು ಕಳೆದುಕೊಂಡ ಗಾಂಧಾರಿ, ಐದು ಮಕ್ಕಳನ್ನು ಕಳೆದುಕೊಂಡ ದ್ರೌಪದಿಯನ್ನು ಸಂತೈಸುವ ಸನ್ನಿವೇಶ ಹೃದಯವನ್ನು ಕರಗಿಸುತ್ತದೆ. "ದುಃಖದಲ್ಲಿ ನಾವಿಬ್ಬರೂ ಸಮಾನರು, ದುಃಖವನ್ನು ಸಹಿಸುವುದೇ ಯುಕ್ತ"– ಎಂದು ದ್ರೌಪದಿಯನ್ನು ಸಂತೈಸುವ ಗಾಂಧಾರಿಯಲ್ಲಿ ಗೌರವ ಚಿಮ್ಮುತ್ತದೆ. ಅನಂತರ ಹದಿನೈದು ವರ್ಷಗಳ ಕಾಲ ಧೃತರಾಷ್ಟ್ರನೂ, ಗಾಂಧಾರಿಯೂ ಹಸ್ತಿನಾಪುರದಲ್ಲಿ ವಾಸ ಮಾಡಿಕೊಂಡಿದ್ದು, ಬಳಿಕ ಕುಂತಿ, ವಿದುರ ಮತ್ತು ಸಂಜಯ– ಇವರೊಡನೆ ಧೃತರಾಷ್ಟ್ರ–ಗಾಂಧಾರಿಯರು ಹಿಮಾಲಯಕ್ಕೆ ಹೊರಟು, ಹಿಮಾಲಯದ ತಪ್ಪಲಿನ ಪರ್ಣಕುಟಿಯಲ್ಲಿ ವಾಸಿಸ ತೊಡಗಿದರು. ಕೆಲವು ವರ್ಷಗಳ ವಿರಕ್ತ ಜೀವನವನ್ನು ನಡೆಸಿದ

ಬಳಿಕ, ಒಂದು ದಿನ ಕಾಳ್ಗಿಚ್ಚಿಗೆ ಸಿಕ್ಕಿ ಗಾಂಧಾರಿ ತನ್ನ ದೇಹವನ್ನು ವಿಸರ್ಜಿಸಿದಳು. ಅರಮನೆಯಲ್ಲಿ ಹುಟ್ಟಿ, ಅರಮನೆಯಲ್ಲಿ ಬೆಳೆದು, ಕುರುಡನಾದ ರಾಜನನ್ನು ಮದುವೆಯಾಗಿ, ತಾನೂ ಕುರುಡಿಯಂತೆ ಬದುಕಿ, ಕಡೆಗೆ ಸಹಿಸಲಸದಳವಾದ ದುಃಖವನ್ನು ಸಹಿಸಿ, ಅಂತ್ಯದಲ್ಲಿ ಎಲ್ಲವನ್ನೂ ತ್ಯಜಿಸಿ ವಿರಕ್ತ ಜೀವನ ನಡೆಸುತ್ತ ಲೋಕವನ್ನು ತ್ಯಜಿಸಿದ ಗಾಂಧಾರಿ ಗೌರವಕ್ಕೆ ಭಾಜನಳಾಗುತ್ತಾಳೆ.

ದ್ರೌಪದಿ:

ಮಹಾಭಾರತದ ಕೇಂದ್ರ ಶಕ್ತಿಯೇ ದ್ರೌಪದಿ. ಧೈರ್ಯ, ವಿವೇಕ, ದರ್ಪ ಹಾಗೂ ಕ್ಷಾತ್ರ ತೇಜಸ್ಸಿನ ಸಾಕಾರಮೂರ್ತಿ, ಅವಳು. ಪಾಂಚಾಲ ದೇಶದ ರಾಜ ದ್ರುಪದನ ಮಗಳಾದ ಅವಳು ಅರ್ಜುನನನ್ನು ಸ್ವಯಂವರದಲ್ಲಿ ವಿವಾಹವಾದರೂ, ಸನ್ನಿವೇಶಗಳ ಪ್ರವಾಹಕ್ಕೆ ಸಿಕ್ಕಿ ಐವರು ಪಾಂಡವರನ್ನು ವಿವಾಹವಾದಳು. ಹಸ್ತಿನಾಪುರದಲ್ಲಿ ತನ್ನ ಗಂಡಂದಿರೊಂದಿಗೆ ಸುಖವಾಗಿದ್ದಳು. ಆದರೆ ರಾಜಸೂಯ ಯಾಗದ ಸಂದರ್ಭದಲ್ಲಿ ಅಲ್ಲಿಗೆ ಬಂದ ದುರ್ಯೋಧನನು ಪಾಂಡವರ ವೈಭವವನ್ನು ನೋಡಿ ಕರುಬಿದನು. ಅರಮನೆಯ ಜಲವನ್ನು ನೆಲವೆಂದು ಭ್ರಮಿಸಿ, ನೆಲವನ್ನು ಜಲವೆಂದು ಭ್ರಮಿಸಿದ ದುರ್ಯೋಧನನನ್ನು ಕಂಡು ದ್ರೌಪದಿ ನಕ್ಕಳು. ಅದರಿಂದ ಅವಮಾನಿತನಾದ ದುರ್ಯೋಧನನು ಅವಳಿಗೂ ಅವಮಾನ ಮಾಡುವ ಛಲವನ್ನು ತೊಟ್ಟನು. ಅವನ ಛಲ, ಅವಳ ಕಷ್ಟಗಳಿಗೆ ನಾಂದಿಯಾಯಿತು.

ರಾಜಸೂಯ ಯಾಗದ ಸಂದರ್ಭದಲ್ಲಿ ದ್ರೌಪದಿ ಎಲ್ಲರನ್ನೂ ಉಪಚರಿಸಿದಳು ಭೋಜನ ವ್ಯವಸ್ಥೆಯನ್ನು ನೋಡಿಕೊಂಡು,

ಎಲ್ಲರಿಗೂ ಊಟವಾದ ಬಳಿಕ ಅವಳು ಆಹಾರವನ್ನು ಸ್ವೀಕರಿಸಿದಳು. ಬಲ್ಲಿದರು, ಬಡವರೆಂಬ ಭೇದವಿಲ್ಲದೆ ಅವಳು ಅತಿಥಿ ಸತ್ಕಾರ ಮಾಡಿದಳು. ಕರುಣೆ, ದಯೆ, ಧೈರ್ಯ, ತೆರೆದ ಮನಸ್ಸು ಈ ಗುಣಗಳ ಸಾಕಾರ ಮೂರ್ತಿ ಅವಳು. ಯುಧಿಷ್ಠಿರನು ಜೂಜಿನಲ್ಲಿ ಸೋತ ಬಳಿಕ, ದುರ್ಯೋಧನನ ಸಹೋದರ ದುಶ್ಶಾಸನನು, ಅವಳ ತುರುಬನ್ನು ಎಳೆದು ಅವಳ ಸೀರೆಯನ್ನು ಸೆಳೆದನು. ದುಶ್ಶಾಸನನನ್ನು "ಅನಾರ್ಯ" ಎಂದು ಧಿಕ್ಕರಿಸಿ, ಎಲ್ಲರೂ ನಿಸ್ಸಹಾಯಕರಾಗಿ ಕುಳಿತಿರುವುದನ್ನು ಖಂಡಿಸಿ, ತನ್ನ ಮಾನ ಸಂರಕ್ಷಣೆ ಮಾಡಬೇಕೆಂದು ಕೂಗಿಕೊಂಡಳು. ಆಗ ದುರ್ಯೋಧನನು ತನ್ನ ತೊಡೆಯನ್ನು ತಟ್ಟಿ, "ಇಲ್ಲಿ ಕುಳಿತುಕೋ" ಎಂದು ಹೇಳಿದಾಗ, ಅವಳು ಬಿಂಕಿಯಾಗಿ ದುರ್ಯೋಧನನ ತೊಡೆಯನ್ನು ಮುರಿಸುವುದಾಗಿಯೂ, ದುಶ್ಶಾಸನನ ರಕ್ತದಲ್ಲಿ ತನ್ನ ಕೂದಲುಗಳನ್ನು ಬಾಚಿಕೊಳ್ಳುವುದಾಗಿಯೂ ಪ್ರತಿಜ್ಞೆ ಮಾಡಿದಳು. ಅವಳು ಕಡೆಗೆ ಕೃಷ್ಣನಲ್ಲಿ ಮೊರೆ ಇಟ್ಟಾಗ, ಅವನ ಕೃಪೆಯಿಂದ ಅವಳ ಸೀರೆ ಅಕ್ಷಯವಾಯಿತು. ಅವಳು ಭಗವದ್ಭಕ್ತಿಯಿಂದಲೇ ತನ್ನ ಮಾನ ಸಂರಕ್ಷಣೆ ಮಾಡಿಕೊಂಡಳು.

ರಾಣಿಯಾಗಿ ಸಕಲ ಸುಖಭೋಗಗಳ ಒಡತಿಯಾಗಬೇಕಾಗಿದ್ದ ದ್ರೌಪದಿ, ವಿರಾಟರಾಜನ ಆಸ್ಥಾನದಲ್ಲಿ ಹಲವು ಕಷ್ಟ ಹಾಗೂ ಯಾತನೆಗಳನ್ನು ಅನುಭವಿಸಬೇಕಾಯಿತು. ತನ್ನನ್ನು ಹಿಂಸಿಸುತ್ತಿದ್ದ ಕಾಮಿ ಕೀಚಕನನ್ನು ಭೀಮನಿಂದ ಕೊಲ್ಲಿಸಿದ ವೀರ ಮಹಿಳೆ ಅವಳು. ಉತ್ತರ ಗೋಗ್ರಹಣದ ಸಮಯದಲ್ಲಿ ವಿರಾಟರಾಜನು ಯುಧಿಷ್ಠಿರನ ಹಣೆಗೆ ದಾಳಗಳಿಂದ ಹೊಡೆದಾಗ ಅವನ ಹಣೆಯಿಂದ ರಕ್ತ ಸುರಿಯುವುದನ್ನು ಕಂಡು ದ್ರೌಪದಿ, ತನ್ನ ಸೆರಗಿನಿಂದ ಆ ರಕ್ತ ಭೂಮಿಗೆ ಬೀಳುವ ಮೊದಲೇ ಒರೆಸಿದಳು.

ಅನಂತರ ವಿರಾಟನ ಆಸ್ಥಾನದ ಅಧರ್ಮಕೃತ್ಯಗಳನ್ನು ಖಂಡಿಸಿದಳು.

ಕ್ಷಾತ್ರ ತೇಜಸ್ಸಿನಿಂದ ವಿರಾಜಿಸುವ ದ್ರೌಪದಿಯ ಮನಸ್ಸು ವಜ್ರದಷ್ಟು ಕಠಿಣ. ಛಲವನ್ನು ಸಾಧಿಸುವುದರಲ್ಲಿ ಅವಳು ಅಗ್ರಗಣ್ಯಳು. ಭೀಮನು ದುಶ್ಶ್ಯಾಸನನನ್ನು ರಣರಂಗದಲ್ಲಿ ಸೋಲಿಸಿ, ಕಡೆಗೆ ಅವನನ್ನು ಉರುಳಿಸಿದ ಬಳಿಕ, ದ್ರೌಪದಿಯನ್ನು ಅಲ್ಲಿಗೆ ಕರೆಸಿದನು. ಆಗ ಅವಳು ದುಶ್ಶ್ಯಾಸನನ ರಕ್ತದಿಂದ ತನ್ನ ತಲೆಯನ್ನು ಬಾಚಿಕೊಂಡಳು. ಈ ದೃಶ್ಯ ಭಯಂಕರವಾಗಿ ಕಾಣುತ್ತದೆ. ಅವಳು ರುದ್ರಕಾಳಿಯಾಗಿ ಕಾಣುತ್ತಾಳೆ. ಕಠೋರ ಹೃದಯದ ದ್ರೌಪದಿ ಕೆಲವು ಸನ್ನಿವೇಶಗಳಲ್ಲಿ ಕುಸುಮದಷ್ಟು ಕೋಮಲವಾಗಿ ವರ್ತಿಸಿದ್ದಾಳೆ. ದುರ್ಯೋಧನನು ಭೀಮನಿಂದ ತೊಡೆಯೊಡೆದು ನೆಲಕ್ಕೆ ಉರುಳಿದುದನ್ನು ಕಂಡು, ಅಶ್ವತ್ಥಾಮನು ಪಾಂಡವರನ್ನು ಸಂಹರಿಸಲು ಬಂದು, ಕತ್ತಲೆಯಲ್ಲಿ ಪಾಂಡವರಿಗೆ ಬದಲಾಗಿ ಪಾಂಡುಪುತ್ರರ ತಲೆಯನ್ನು ಕತ್ತರಿಸಿಕೊಂಡು ಹೋಗಿ ದುರ್ಯೋಧನನಿಗೆ ಅರ್ಪಿಸಿದನು. ಅದು ಪಾಂಡು ಪುತ್ರರದೆಂದು ತಿಳಿದು ಕೌರವ ಮಮ್ಮಲ ಮರುಗಿದನು. ಅತ್ತ, ತನ್ನ ಪುತ್ರರನ್ನು ಕಳೆದುಕೊಂಡ ದ್ರೌಪದಿ ದುಃಖಾತಿರೇಕದಿಂದ ಪರಿತಪಿಸಿದಳು. ದ್ರೌಪದಿಯ ಶೋಕವನ್ನು ಕಂಡು ಕೆರಳಿದ ಅರ್ಜುನ, ಅಶ್ವತ್ಥಾಮನನ್ನು ಹಿಡಿದು ತಂದು, ದ್ರೌಪದಿಯ ಮುಂದೆ ನಿಲ್ಲಿಸಿ, "ಇವನಿಗೆ ಏನು ಶಿಕ್ಷೆ ವಿಧಿಸಲಿ"? ಎಂದು ಪ್ರಶ್ನಿಸಿದಾಗ, "ಅಶ್ವತ್ಥಾಮನಿಗೂ ನನ್ನಂಥ ತಾಯಿ ಇದ್ದಾಳೆ, ಇವನ ಹತ್ಯದಿಂದ ಆ ತಾಯಿಯೂ ಪರಿತಪಿಸುವಳು. ಗುರುಪುತ್ರನಾದ ಇವನನ್ನು ಬಿಟ್ಟುಬಿಡು"— ಎಂದು ನುಡಿದ ಮಹಾ ವಿವೇಕಿ ದ್ರೌಪದಿ.

ಅವಳ ಕೋಮಲ ಮನಸ್ಸಿನ ಪರಿಚಯವಾಗುತ್ತದೆ ಇಲ್ಲಿ. ಈ ಸಂದರ್ಭದಲ್ಲಿ ಅವಳ ಕ್ಷಮಾಗುಣವು ಪ್ರಕಟವಾಗುತ್ತದೆ.

ಪಾಂಡವರು ಕೌರವರನ್ನು ಗೆದ್ದು ಮೂವತ್ತಾರು ವರ್ಷಗಳ ಕಾಲ ರಾಜ್ಯಭಾರ ಮಾಡಿದರು. ಆ ಕಾಲದಲ್ಲಿ ಮಹಾರಾಣಿಯಾಗಿ ಸುಖವಾಗಿದ್ದಳು, ದ್ರೌಪದಿ. ಜೀವನದ ಉದ್ದಕ್ಕೂ ಪ್ರಾಮಾಣಿಕ ವಾಗಿದ್ದು, ಕೈಹಿಡಿದ ಗಂಡಂದಿರೈವರಿಗೂ ನಿಷ್ಠೆಯಿಂದ ಸೇವೆ ಸಲ್ಲಿಸಿ, ಚತುರ ಮಂತ್ರಿಯಂತೆ, ಶಿಷ್ಯೆಯಂತೆ, ಸ್ನೇಹಿತೆಯಂತೆ ಅವರೊಡನೆ ಸಹಯೋಗಿನಿಯಾಗಿದ್ದು, ಕಡೆಗೆ ಹಿಮಾಲಯಾ ರೋಹಣದಲ್ಲಿ ಪತಿಗಳೈವರನ್ನು ಹಿಂಬಾಲಿಸಿ, ಅಲ್ಲಿ ದೇಹವನ್ನು ವಿಸರ್ಜಿಸಿದಳು.

ಶ್ರೀ ಕೃಷ್ಣ ಹಾಗೂ ಸತ್ಯಭಾಮೆ, ಒಂದು ದಿನ ದ್ರೌಪದಿ ಯನ್ನು ಕುರಿತು,"ಐದು ಜನ ಗಂಡಂದಿರನ್ನು ವಶಪಡಿಸಿಕೊಂಡ ರಹಸ್ಯವಾವುದು?" ಎಂದು ಕೇಳಿದಾಗ, "ನನಗೆ ಮಂತ್ರ ತಂತ್ರಗಳು ತಿಳಿಯದು. ಮೊದಲು ಪತಿಯರೈವರ ಸುಖ, ಆನಂತರ ನನ್ನ ಸುಖ, ಇದೇ ನನ್ನ ಪ್ರೇಮ ರಹಸ್ಯ" ಎಂದು ದ್ರೌಪದಿ ನುಡಿದಳು. ಅವಳ ಧೈರ್ಯ, ಕಷ್ಟಸಹಿಷ್ಣುತೆ, ಭಗ ವಂತನಲ್ಲಿ ಅನನ್ಯ ಭಕ್ತಿ, ಕ್ಷಾತ್ರ, ಧರ್ಮನಿಷ್ಠೆ, ಪಾವಿತ್ರ್ಯ ಮೊದ ಲಾದ ಗುಣಗಳು ಅವಳ ಪರಿಪರಿಯ ಕಷ್ಟಗಳನ್ನು ದೂರ ಮಾಡುವ ಶಕ್ತಿಗಳಾದವು. ಶತ ಶತಮಾನಗಳುರುಳಿದರೂ ಅವಳು ಭಾರತೀಯರ ಸ್ಮೃತಿಪಥದಲ್ಲಿ ದೇದೀಪ್ಯಮಾನವಾಗಿ ವಿರಾಜಿಸುವ ವೀರ ಮಹಿಳೆ.

ಸಾವಿತ್ರಿ:

ಸಾವಿತ್ರಿ ಯಮನನ್ನು ಗೆದ್ದು ತನಗೂ ತನ್ನ ವಂಶಕ್ಕೂ

ಯಶಸ್ಸನ್ನು ಪಡೆದ ಕಥೆ ಮಹಾಭಾರತದಲ್ಲಿ ಸುಂದರವಾಗಿ ಚಿತ್ರಿತವಾಗಿದೆ. ಮದ್ರ ದೇಶದ ಪರಮ ಧಾರ್ಮಿಕ ರಾಜನೇ ಅಶ್ವಪತಿ. ಅವನಿಗೆ ಸಾವಿತ್ರಿಯ ವರಪ್ರಸಾದದಿಂದ ಜನಿಸಿದವಳು ಸಾವಿತ್ರಿ. ಭಾಗ್ಯಲಕ್ಷ್ಮಿಯಂತೆ ಬೆಳೆದು ಸಾವಿತ್ರಿ ಯುವತಿಯಾದಳು. ಅಪೂರ್ವ ತೇಜಸ್ಸಿನಿಂದ ಬೆಳಗುತ್ತಿದ್ದ ಅವಳನ್ನು ವಿವಾಹವಾಗಲು ರಾಜಕುಮಾರರು ಹೆದರಿದರು. ಆಗ ಅಶ್ವಪತಿ, ಮಗಳಾದ ಸಾವಿತ್ರಿಗೆ, "ಕುಮಾರಿ, ಇದುವರೆಗೆ ಕನ್ಯಾರ್ಥಿಗಳಾಗಿ ಯಾರೂ ಇಲ್ಲಿಗೆ ಬರಲಿಲ್ಲ. ಈಗ ನೀನೇ ವರಾನ್ವೇಷಣೆಗಾಗಿ ಹೋಗು" ಎಂದನು. ನಾಚಿದ ಸಾವಿತ್ರಿ ತಂದೆಗೆ ನಮಿಸಿ, ವೃದ್ಧ ಮಂತ್ರಿಗಳೊಡನೆ ಸುವರ್ಣ ರಥದಲ್ಲಿ ಕುಳಿತು ವರಾನ್ವೇಷಣೆಗಾಗಿ ಹೊರಟಳು. ಪುಣ್ಯಾಶ್ರಮಗಳಲ್ಲಿ ಸಂಚರಿಸಿ, ವರನೊಬ್ಬನನ್ನು ಮನಸ್ಸಿನಲ್ಲಿಯೇ ವರಿಸಿ, ಅವಳ ತಂದೆಯ ಬಳಿಗೆ ಹಿಂತಿರುಗಿದಳು. ಆಗ ಅಶ್ವಪತಿಯೊಡನೆ ಮಾತನಾಡುತ್ತ ಕುಳಿತ ನಾರದನು, "ಸಾವಿತ್ರಿ ಮನದಲ್ಲಿ ವರಿಸಿದ ಸತ್ಯವಂತನು, ಸೂರ್ಯನಂತೆ ತೇಜಸ್ವಿಯಾದರೂ ಅವನಿಗಿರುವ ಆಯುಷ್ಯ ಕೇವಲ ಒಂದೇ ವರ್ಷ"—ಎಂದು ಸ್ಪಷ್ಟಪಡಿಸಿದನು. ಸತ್ಯವಂತನನ್ನು ಬಿಟ್ಟು ಬೇರೊಬ್ಬನನ್ನು ವರಿಸಲು ಅಶ್ವಪತಿ ಸಲಹೆ ಮಾಡಿದನು. ಒಮ್ಮೆ ವರಿಸಿದ ಬಳಿಕ, ದೀರ್ಘಾಯುವಾಗಲಿ, ಅಲ್ಪಾಯುವಾಗಲಿ, ಅವನನ್ನು ಬಿಟ್ಟು ಮತ್ತೊಬ್ಬನನ್ನು ಮನಸ್ಸಿನಿಂದಲೂ ಆಶಿಸುವುದಿಲ್ಲ, ಇದು ನನ್ನ ನಿಶ್ಚಯ ಎಂದು ಸಾವಿತ್ರಿ ತನ್ನ ದೃಢ ಸಂಕಲ್ಪವನ್ನು ತಿಳಿಸಿದಳು. ಅವಳ ದೃಢನಿಶ್ಚಯವನ್ನು ಕಂಡ ನಾರದರೂ ಅಶ್ವಪತಿಯೂ ಅವಳ ವಿವಾಹಕ್ಕೆ ಸಮ್ಮತಿಸಿದರು.

ಸತ್ಯವಂತನ ತಂದೆ, ಸಾಲ್ವದೇಶದ ರಾಜನಾಗಿದ್ದ ದ್ಯುಮತ್ಸೇನನು ಕುರುಡನಾಗಿ, ರಾಜ್ಯದಿಂದ ವಂಚಿತನಾಗಿ ಅರಣ್ಯವಾಸಿ

ಯಾಗಿದ್ದನು. ಅಶ್ವಪತಿ ದ್ಯುಮತ್ಸೇನನನ್ನು ಸಂದರ್ಶಿಸಿ, ಅವರ ಒಪ್ಪಿಗೆಯನ್ನು ಪಡೆದು ಆಶ್ರಮದ ಪವಿತ್ರ ನಿರ್ಮಲ ಸನ್ನಿವೇಶದಲ್ಲಿ ಸಾವಿತ್ರಿ ಸತ್ಯವಂತರ ವಿವಾಹವನ್ನು ಗುರುಹಿರಿಯರ ಹಾಗೂ ಆಶ್ರಮವಾಸಿಗಳ ನೇತೃತ್ವದಲ್ಲಿ ನೆರವೇರಿಸಿದನು. ಅಶ್ವಪತಿ, ತಾನು ಕೊಡಬೇಕಾದ ಬಳುವಳಿಯನ್ನು ಮನಃಪೂರ್ವಕವಾಗಿ ಕೊಟ್ಟು ತನ್ನ ರಾಜ್ಯಕ್ಕೆ ಹಿಂತಿರುಗಿದನು.

ತಂದೆ ಹೊರಟುಹೋದ ಬಳಿಕ ಸಾವಿತ್ರಿ ತಾನು ಧರಿಸಿದ್ದ ಆಭರಣಗಳನ್ನು ತೆಗೆದಿಟ್ಟು, ಆಶ್ರಮಯೋಗ್ಯವಾದ ಉಡುಪನ್ನು ಧರಿಸಿದಳು. ತನ್ನ ಸ್ನೇಹಪೂರ್ಣ ಸರಳ ಆಚರಣೆಗಳಿಂದ ಅವಳು ಎಲ್ಲರಿಗೂ ಅಚ್ಚುಮೆಚ್ಚಾದಳು. ಅತ್ತೆ ಮಾವಂದಿರಿಗೆ ಸೇವೆ ಸಲ್ಲಿಸುತ್ತ, ಪತಿಗೆ ಅತ್ಯಂತ ಪ್ರಿಯಳಾದಳು. ನಾರದರು ಹೇಳಿದುದನ್ನು ಸಾವಿತ್ರಿ ಮರೆತಿರಲಿಲ್ಲ. ಪತಿಯ ಆಯುಃಕಾಲವು ಮುಗಿಯಲು ಇನ್ನು ನಾಲ್ಕು ದಿನಗಳಿವೆ ಎನ್ನುವಾಗ, ಪತಿಯ ಅನಿಷ್ಟ ನಿವಾರಣೆಗಾಗಿ ಮೂರು ದಿನಗಳ ಕಾಲ ಅಹೋರಾತ್ರಿ ಉಪವಾಸವಿದ್ದು ವ್ರತವನ್ನು ಆಚರಿಸಿದಳು. ಅದನ್ನು ಕಂಡ ದ್ಯುಮತ್ಸೇನನ ಹೃದಯ ಕರಗಿತು. ಇಷ್ಟಾದರೂ ಸತ್ಯವಂತನ ಮರಣದ ವಿಷಯವನ್ನು ಅವಳು ಯಾರಿಗೂ ತಿಳಿಸಲಿಲ್ಲ. ಸತ್ಯವಂತನು ಸಾಯುವ ದಿನವೂ ಬಂದಿತು. ರಾತ್ರಿ ಕಳೆದು ಬೆಳಗಾಯಿತು. ಸಾವಿತ್ರಿ ಒತ್ತಿ ಬರುವ ದುಃಖವನ್ನು ಕಷ್ಟದಿಂದ ತಡೆದುಕೊಂಡು, ಸ್ನಾನಾದಿಕಾರ್ಯಗಳನ್ನು ಮುಗಿಸಿ ಅತ್ತೆ ಮಾವಂದರಿಗೆ ನಮಸ್ಕರಿಸಿ ಕಂದಮೂಲ ಫಲಗಳನ್ನು ತರಲು ಹೊರಟ ಸತ್ಯವಂತನೊಡನೆ ಅರಣ್ಯಕ್ಕೆ ಹೊರಟಳು. ಮೂರು ದಿನಗಳ ವ್ರತನಿಯಮಗಳಿಂದ ಬಳಲಿದ ಸಾವಿತ್ರಿಯನ್ನು ಕರೆದೊಯ್ಯಲು ಸತ್ಯವಂತನು ಒಪ್ಪಲಿಲ್ಲ. "ನಿನ್ನೊಡನಿದ್ದರೆ

ಮನಸ್ಸು ಪ್ರಸನ್ನವಾಗುತ್ತದೆ" ಎಂದು ಹೇಳಿದಾಗ ಅವನ ತಾಯಿ ತಂದೆಯರ ಅನುಮತಿಯನ್ನು ಪಡೆದು ಬರುವಂತೆ ಸಾವಿತ್ರಿಗೆ ಸಲಹೆ ಮಾಡಿದನು. ಅತ್ತೆ ಮಾವಂದಿರ ಆಶೀರ್ವಾದ ಪಡೆದು ಸಾವಿತ್ರಿ ಪತಿಯೊಡನೆ ಅರಣ್ಯವನ್ನು ಪ್ರವೇಶಿಸಿದಳು.

ನವಿಲುಗಳ ಕೂಗಿನಿಂದ ಪ್ರತಿಧ್ವನಿಸುತ್ತಿದ್ದ ವನವನ್ನೂ ಪುಷ್ಪಿತ ಕಾನನವನ್ನೂ ಝುಳ ಝುಳ ನಿನಾದದಿಂದ ಹರಿಯುತ್ತಿದ್ದ ನದಿಯನ್ನೂ ಆಕಾಶಕ್ಕೆ ಕೈಮುಗಿವಂತೆ ನಿಂತ ಬೆಟ್ಟಗುಡ್ಡಗಳನ್ನೂ ಪ್ರಿಯೆಗೆ ತೋರಿಸುತ್ತ ಸತ್ಯವಂತನು ಮುಂದೆ ಸಾಗಿದನು. ಕ್ಷಣಕ್ಷಣಕ್ಕೂ ನಾರದರ ಮಾತು ಅವಳ ಹೃದಯದಲ್ಲಿ ಪ್ರತಿಧ್ವನಿಸುತ್ತಿತ್ತು. ಪ್ರತಿಕ್ಷಣವೂ ಪತಿಯನ್ನೇ ನೋಡುತ್ತ, ಅವಳು ಅವನನ್ನು ಹಿಂಬಾಲಿಸಿದಳು. ಹಲವು ಜಾತಿಯ ಫಲಗಳನ್ನು ಬುಟ್ಟಿಗೆ ತುಂಬಿದ ಸತ್ಯವಂತ, ಸೌದೆಯನ್ನು ಕಡಿಯಲು ತೊಡಗಿದನು. ಇದ್ದಕ್ಕಿದ್ದಂತೆಯೇ ಅವನಿಗೆ ಆಯಾಸವಾಗಿ, ಮೈ ಬೆವರಿತು, ತಲೆನೋವು ಆರಂಭವಾಯಿತು. ಸೌದೆ ಕಡಿಯುವುದನ್ನು ಬಿಟ್ಟು, ಸಾವಿತ್ರಿಯ ಬಳಿಗೆ ಬಂದು, "ತಲೆ ತುಂಬ ನೋಯುತ್ತಿದೆ, ಸಂಕಟವಾಗುತ್ತಿದೆ, ನಿಲ್ಲಲು ತ್ರಾಣವಿಲ್ಲ, ಸ್ವಲ್ಪ ಹೊತ್ತು ಮಲಗಿಕೊಳ್ಳುತ್ತೇನೆ ಎಂದನು.''

ಸಾವಿತ್ರಿ, ಪತಿಯ ತಲೆಯನ್ನು ತೊಡೆಯ ಮೇಲೆ ಇರಿಸಿಕೊಂಡು ಸಂತೈಸಿದಳು. ಅವಳಿಗೆ, ನಾರದರು ಹೇಳಿದ ಕಾಲ ಸನ್ನಿಹಿತವಾಯಿತೆಂದು ತಿಳಿದು, ದುಃಖ ಶೋಕಗಳು ಉಕ್ಕಿ ಭಯವಾಯಿತು. ಆಗ ಸತ್ಯವಂತನ ಬಳಿ ಪಾಶವನ್ನು ಹಿಡಿದು ನಿಂತ ಭಯಂಕರಾಕಾರದ ವ್ಯಕ್ತಿಯೊಬ್ಬನು ಅವಳಿಗೆ ಕಾಣಿಸಿದನು. ಅವನದು ಹಿರಿಯ ದೇಹ, ಧರಿಸಿದ್ದು ರಕ್ತವರ್ಣದ ವಸ್ತ್ರ,

ತಲೆಯಲ್ಲಿ ಕಿರೀಟ, ಸೂರ್ಯನಂತೆ ಪ್ರಜ್ವಲಿಸುವ ತೇಜಸ್ಸು, ಕಣ್ಣು ಕೆಂಪಗೆ ಹೊಳೆಯುತ್ತಿದ್ದವು. ಸತ್ಯವಂತನನ್ನು ದಿಟ್ಟಿಸಿ ನೋಡುತ್ತಿದ್ದ ಆ ಪುರುಷನನ್ನು ನೋಡಿ ಸಾವಿತ್ರಿ ನಡುಗಿದಳು. ಆದರೆ ಒಡನೆಯೇ ಧೈರ್ಯವನ್ನು ತಂದುಕೊಂಡು, ಪತಿಯ ತಲೆಯನ್ನು ನೆಲದ ಮೇಲಿರಿಸಿ, ಕೈಮುಗಿದು ಮಾತನಾಡಿಸಿದಳು. "ನೀನು ಯಾರು ? ಏತಕ್ಕಾಗಿ ಬಂದಿರುವೆ ?" — ಎಂದು ಪ್ರಶ್ನಿಸಿದಳು. "ನಾನು ಯಮ, ನಿನ್ನ ಪತಿಯ ಆಯುಸ್ಸು ಇಂದಿಗೆ ಮುಗಿಯಿತು. ಅವನ ಜೀವವನ್ನು ಪಾಶದಿಂದ ಕಟ್ಟಿಕೊಂಡು ಹೋಗಲು ಬಂದಿದ್ದೇನೆ". "ಪಾಶದಿಂದ ಕಟ್ಟಲು ನಿನ್ನ ದೂತರು ಬರುವರೆಂದು ಕೇಳಿದ್ದೇನೆ, ನೀನೇ ಆಗಮಿಸಲು ಕಾರಣವೇನು ?" ಎಂದು ಪ್ರಶ್ನಿಸಿದಳು ಸಾವಿತ್ರಿ. "ಪರಮಧಾರ್ಮಿಕರನ್ನು ಕರೆದೊಯ್ಯಲು ನಾನೇ ಬರುತ್ತೇನೆ" ಎಂದು ಹೇಳಿ, ಸತ್ಯವಂತನ ಜೀವವನ್ನು ಪಾಶದಲ್ಲಿ ಕಟ್ಟಿ ದಕ್ಷಿಣಾಭಿಮುಖವಾಗಿ ಯಮನು ಹೊರಟನು.

ಸಾವಿತ್ರಿಯೂ ಅವನನ್ನು ಹಿಂಬಾಲಿಸಿದಳು. ಪತಿಯ ಶವಕ್ಕೆ ಸಂಸ್ಕಾರ ಮಾಡಲು ಹಿತವಚನ ಹೇಳಿದ ಯಮನ ನುಡಿಗಳನ್ನು ಕೇಳದೆ, ಸಾವಿತ್ರಿ ಮುಂದೆ ಸಾಗಿದಳು. ಅವಳ ಪತಿಪ್ರೇಮವನ್ನು ಕಂಡು, ಪತಿಯ ಪ್ರಾಣವನ್ನು ಬಿಟ್ಟು ಯಾವುದಾದರೂ ವರವನ್ನು ಕೇಳಲು, ಅವನು ಹೇಳಿದಾಗ, "ಕುರುಡನಾದ ಮಾವನಿಗೆ ಕಣ್ಣುಗಳು ಕಾಣಿಸಲಿ, ಅವನು ಬಲಾಢ್ಯನಾಗಲಿ, ತೇಜಸ್ವಿಯಾಗಲಿ" ಎಂದು ಪ್ರಾರ್ಥಿಸಿದಳು.

'ತಥಾಸ್ತು' ಎಂದು ನುಡಿದು ಯಮನು ಅವಳನ್ನು ಹಿಂತಿರುಗಬೇಕೆಂದನು.

ಸಾವಿತ್ರಿ ಅದಕ್ಕೊಪ್ಪದೆ "ಪತಿ ಇದ್ದೆಡೆ ಶಾಶ್ವತ ಗತಿ, ನಿನ್ನಂತಹ ಮಹಾಪುರುಷನ ಆಶ್ರಯದಲ್ಲಿ ನನಗೆ ಭಯವಿಲ್ಲ" ಎಂದಳು.

ಸಾವಿತ್ರಿಯ ಪತಿಪ್ರೇಮವನ್ನು ಕಂಡು ಯಮನು ಮತ್ತೆ ಮೂರು ವರಗಳನ್ನು ಕರುಣಿಸಿದನು. ಸಾವಿತ್ರಿ ಕಳೆದುಹೋದ ರಾಜ್ಯ ಮಾವನಿಗೆ ದೊರಕಿ, ಅವನು ಸ್ವಧರ್ಮದಲ್ಲಿ ನಿಷ್ಠನಾಗಿರುವಂತೆ, ವರವನ್ನು ಪಡೆದಳು. ಅಶ್ವಪತಿಗೆ ಗಂಡುಮಕ್ಕಳಾಗುವಂತೆಯೂ, ಸತ್ಯವಂತನಿಂದ ತನಗೆ ಮಕ್ಕಳಾಗುವಂತೆಯೂ ವರಗಳನ್ನು ಪಡೆದಳು. ತಾನು ಕೊಟ್ಟ ವರಗಳು ಸಫಲವಾಗಲು ಸತ್ಯವಂತನ ಜೀವವನ್ನು ತನ್ನ ಪಾಶದಿಂದ ವಿಮುಕ್ತನನ್ನಾಗಿ ಮಾಡಿ, ಸಾವಿತ್ರಿಯನ್ನು ಹರಸಿ, ಯಮನು ತನ್ನ ಲೋಕಕ್ಕೆ ಹಿಂತಿರುಗಿದನು.

ಸತ್ಯವಂತನು ನಿದ್ದೆಯಿಂದ ಎಚ್ಚೆತ್ತವನಂತೆ ಎದ್ದನು. ಆಗಲೇ ಕತ್ತಲು ಕವಿದಿತ್ತು. ಕ್ರೂರ ಮೃಗಗಳ ಧ್ವನಿ ಕೇಳಿಬರುತ್ತಿತ್ತು. ಅವರು ಆಶ್ರಮದತ್ತ ಹೊರಟರು. ಆಗಲೇ ಅರ್ಧರಾತ್ರಿಯಾಗಿತ್ತು. ಎಲ್ಲರೂ ಅವರನ್ನೇ ಕಾಯುತ್ತ ಕುಳಿತಿದ್ದರು. ದ್ಯುಮತ್ಸೇನನ ಕಣ್ಣುಗಳು ಕಾಣಿಸತೊಡಗಿದ್ದವು. ನಡೆದುದೆಲ್ಲ ಸಾವಿತ್ರಿ ವಿವರಿಸಿದಳು. ಮರುದಿನ ದ್ಯುಮತ್ಸೇನನ ಮಂತ್ರಿಗಳು ಬಂದು ರಾಜನನ್ನು ರಾಜ್ಯಕ್ಕೆ ಕರೆದೊಯ್ದರು. ಸತ್ಯವಂತನು ಯುವರಾಜನಾದನು. ಸಾವಿತ್ರಿ ತಾಯಿಯಾದಳು. ಅತ್ತ ಅಶ್ವಪತಿ ಮಕ್ಕಳನ್ನು ಪಡೆದು ಸಂತುಷ್ಟನಾದನು. ಇಂಥ ಪುಣ್ಯವತಿ ಸಾವಿತ್ರಿಯು ಭಾರತೀಯರ ಹೃದಯದಲ್ಲಿ ಆರಾಧ್ಯ ದೇವತೆಯಾಗಿದ್ದಾಳೆ.

4. ಬೌದ್ಧ ಸಾಹಿತ್ಯದಲ್ಲಿ:

ಬುದ್ಧನು ಮಹಿಳೆಯರು ಪುರುಷರಿಗೆ ಸಮಾನವೆಂದು ತಿಳಿದು ಅವರಿಗೂ ಬೌದ್ಧ ಧರ್ಮವನ್ನು ಸ್ವೀಕರಿಸುವ ಸ್ವಾತಂತ್ರ್ಯವನ್ನು ನೀಡಿದನು. ಬೌದ್ಧ ಧರ್ಮಕ್ಕೆ ಎಲ್ಲ ವರ್ಗದವರೂ ಸೇರಿದರು. ವೇಶ್ಯೆಯರನ್ನೂ ಬೌದ್ಧ ಧರ್ಮಕ್ಕೆ ಸೇರಿಸಲು ಬುದ್ಧನು ಹಿಂದು ಮುಂದು ನೋಡಲಿಲ್ಲ. ಆದರೆ ಭಿಕ್ಷುಣಿಯರು ಸಂಘಾರಾಮಗಳಲ್ಲಿ ವಾಸಿಸುವುದನ್ನು ಅವನು ಮೊದಲು ಒಪ್ಪದಿದ್ದರೂ ಕಡೆಗೆ ಒಪ್ಪಿಗೆಯನ್ನಿತ್ತನು. ಕೆಲವು ನಿಯಮಗಳು ವಿಶೇಷವಾಗಿ ಭಿಕ್ಷುಣಿಯರಿಗೆ ನಿಯಮಿತವಾದವು.

ಥೇರಿಗಾಥದಲ್ಲಿ ನಿರ್ವಾಣದ ಆನಂದವನ್ನು ಭಿಕ್ಷುಣಿಯರು ವ್ಯಕ್ತಪಡಿಸಿದ್ದಾರೆ. ಇತರ ಬೌದ್ಧ ಗ್ರಂಥಗಳಲ್ಲಿ ಶ್ರಮಣಿಯರು ಹಾಗೂ ಉಪಾಸಿಕೆಯರ ಉಲ್ಲೇಖವಿದೆ. ಬುದ್ಧನ ತಾಯಿ ಮಾಯಾದೇವಿಯು ಮತ್ತು ಅವಳ ಸಹೋದರಿ ಮಹಾಪ್ರಜಾಪತಿ ಗೌತಮಿ ಇಬ್ಬರೂ ಶುದ್ಧೋಧನ ರಾಜನನ್ನು ವಿವಾಹವಾದರು. ಸಿದ್ಧಾರ್ಥನು ಹುಟ್ಟಿದ ಏಳನೆಯ ದಿನಕ್ಕೆ ಮಾಯಾದೇವಿ ಕಾಲ ವಶವಾದಳು. ಸಿದ್ಧಾರ್ಥನನ್ನು ರಕ್ಷಿಸಿ ಬೆಳಸಿದವಳು ಗೌತಮಿ.

ನಿರ್ವಾಣವನ್ನು ಪಡೆದು ಬುದ್ಧನಾಗಿ ಕಪಿಲವಸ್ತುವಿಗೆ ಸಿದ್ಧಾರ್ಥನು ಹಿಂತಿರುಗಿದ ಬಳಿಕ, ಅವನ ಪುತ್ರ ರಾಹುಲನು ಬೌದ್ಧಧರ್ಮಕ್ಕೆ ಸೇರಿದನು. ಗೌತಮಿ ಹಾಗೂ ಐನೂರು ಮಹಿಳೆಯರು ವಿರಕ್ತರಾಗಿ ಬೌದ್ಧ ಧರ್ಮಕ್ಕೆ ಸೇರಿ ಭಿಕ್ಷುಣಿಯರಾಗಲು ಅನುಮತಿ ಕೇಳಿದಾಗ ಮೊದಲು ಬುದ್ಧನು ಒಪ್ಪಲಿಲ್ಲ. ಕಡೆಗೆ ಶಿಷ್ಯನಾದ ಆನಂದನ ಪ್ರಾರ್ಥನೆಗೆ ಒಪ್ಪಿ ಅವರನ್ನು ಭಿಕ್ಷುಣಿಯರನ್ನಾಗಿ ಬುದ್ಧನು ಸ್ವೀಕರಿಸಿದನು. ಗೌತಮಿ ಭಿಕ್ಷುಣಿಯಾಗಿ

ಒಂದುನೂರ ಇಪ್ಪತ್ತೈದು ವರ್ಷಗಳ ಕಾಲ ಬದುಕಿದ್ದಳೆಂದು ಪ್ರತೀತಿ. ಅವಳು ಮಾಡಿದ ದೊಡ್ಡ ಕಾರ್ಯವೆಂದರೆ ಪುರುಷರಂತೆ ಮಹಿಳೆಯರೂ ಭಿಕ್ಷುಣಿಯರಾಗಲು ಬುದ್ಧನಿಂದ ಅಪ್ಪಣೆ ಪಡೆದುದು. ಭಿಕ್ಷುಣಿಯರಿಗಾಗಿ ಅವಳು "ಭಿಕ್ಷುಣೀ ಪ್ರತಿಮೋಕ್ಷ ಸೂತ್ರ" ಎಂಬ ನಿಯಮಗಳನ್ನು ರೂಪಿಸಿದಳು. ಬುದ್ಧನಲ್ಲಿ ಅವಳಿಗೆ ಅಪಾರ ಪ್ರೀತಿಯೂ ಗೌರವವೂ ನೆಲಸಿತ್ತು. ಮಾನವ ಕೋಟಿಯ ಉದ್ಧಾರಕ್ಕಾಗಿ ಅವನು ಜನ್ಮ ತಾಳಿದನೆಂದು ಅವಳು ಸಂಪೂರ್ಣವಾಗಿ ನಂಬಿದ್ದಳು. ಅವಳ ನಿರ್ಮಲ ಹೃದಯ ಸಾಧನೆಗಳು ಅಪ್ರತಿಮವಾದವು.

ಕ್ಷೇಮಾ:

ಅನುಪಮ ಸುಂದರಿಯಾದ ಕ್ಷೇಮಾ ಬಿಂಬಸಾರನ ಪಟ್ಟದ ರಾಣಿ. ಬುದ್ಧನು ಭೌತಿಕ ಸೌಂದರ್ಯಕ್ಕೆ ಗಮನ ಕೊಡುವುದಿಲ್ಲ ಎಂಬುದನ್ನು ಕೇಳಿ, ಬುದ್ಧನನ್ನು ಸಂದರ್ಶಿಸಲು ಅವಳು ಇಚ್ಛಿಸಲಿಲ್ಲ. ಬಿಂಬಸಾರನು ಆಗಲೇ ಬೌದ್ಧ ಧರ್ಮಾವಲಂಬಿಯಾಗಿದ್ದನು. ಬುದ್ಧನು ತನ್ನ ಶಿಷ್ಯರೊಡನೆ ವೇಲೂವನದಲ್ಲಿ ತಂಗಿದ್ದನು. ರಾಣಿ ವೇಲೂವನವನ್ನು ಸಂದರ್ಶಿಸಲು ರಾಜನ ಅನುಮತಿ ಕೇಳಿದಳು. ಕ್ಷೇಮಾ ವೇಲೂವನದಲ್ಲಿದ್ದ ಬುದ್ಧನ ಬಳಿಗೆ ಹೋದಳು. ಅತ್ಯಂತ ಸುಂದರಿಯಾದ ಮಹಿಳೆಯೊಬ್ಬಳು ಬುದ್ಧನಿಗೆ ಗಾಳಿ ಬೀಸುತ್ತಿದ್ದ ದೃಶ್ಯ ಅವಳಿಗೆ ಕಾಣಿಸಿತು. ಇದ್ದಕ್ಕಿದ್ದಂತೆ ಆ ಸುರಸುಂದರಿ ಮುದುಕಿಯಾಗಿ ನೆಲಕ್ಕೆ ಬೀಳುವ ದೃಶ್ಯ ಅವಳಿಗೆ ಕಾಣಿಸಿತು. ತಾನು ಕಟ್ಟಿದ ಬಲೆಯಲ್ಲಿ ಜೇಡನು ಸಿಕ್ಕಿಕೊಳ್ಳುವಂತೆ, ಸಂಗದಿಂದ ಪುನಃ ಪುನಃ ಜನ್ಮಚಕ್ರದಲ್ಲಿ ಸುತ್ತಬೇಕಾಗುತ್ತದೆ, ನಿಸ್ಸಂಗಿಗಳು ಬಲೆಯನ್ನು ಕಿತ್ತು ಮುಕ್ತರಾಗುತ್ತಾರೆ ಎಂದು ತಾನು ಕಂಡ

ದೃಶ್ಯ ಹಾಗೂ ಬುದ್ಧನ ಒಳ್ನುಡಿಗಳಿಂದ ಪರವಶಳಾದ ಅವಳು ಸಂಪೂರ್ಣವಾಗಿ ಪರಿವರ್ತಿತಳಾಗಿ ಬುದ್ಧನ ಶಿಷ್ಯೆಯಾದಳು. ರಾಜನ ಬಳಿಗೆ ಹೋಗಿ ಭಿಕ್ಷುಣಿಯಾಗಲು ಅಪ್ಪಣೆ ಕೇಳಿದಳು. ಬಿಂಬಸಾರನು, ಚಿನ್ನದ ಪಲ್ಲಕ್ಕಿಯಲ್ಲಿ ರಾಣಿಯನ್ನು ಕುಳ್ಳಿರಿಸಿ ಭಿಕ್ಷುಣಿಯರ ಸಂಘಾರಾಮಕ್ಕೆ ಕಳುಹಿಸಿದನು. ಅತಿ ಸುಂದರ ನಾದ ಯುವಕನೊಬ್ಬನು, ಅವಳನ್ನು ಆಕರ್ಷಿಸಲು ಯತ್ನಿಸಿದಾಗ, ಅವಳು, ನಿನ್ನಮಾತುಗಳು ಬಾಣದಂತೆ ಚುಚ್ಚುತ್ತಿವೆ. ಈ ದೇಹ ರೋಗಗಳ ಆಗರ, ಇದಕ್ಕಾಗಿ ಏಕೆ ಬಾಯಿ ಬಿಡುವೆ ಎಂದು ವಿವೇಕವನ್ನು ನುಡಿದು, ಅವನನ್ನು ಸನ್ಮತಿಯುತನನ್ನಾಗಿ ಮಾಡಿ ದಳು. ಅವಳು ಬೌದ್ಧ ಗ್ರಂಥಗಳನ್ನು ಚೆನ್ನಾಗಿ ಅಧ್ಯಯನ ಮಾಡಿ, ಜ್ಞಾನಿಯಾದಳು. ಪ್ರಸೇನಜಿತ್ ಎಂಬ ರಾಜನು, "ಬುದ್ಧನು ಮರಣ ಹೊಂದಿದ ಬಳಿಕ ಏನಾಗುತ್ತಾನೆ?" ಎಂದು ಕ್ಷೇಮಳನ್ನು ಪ್ರಶ್ನಿಸಿದಾಗ, ಅವಳು ಆ ವಿಚಾರ ಅಚಿಂತ್ಯ ಎಂದು ನೇರವಾಗಿ ಉತ್ತರ ಹೇಳಿದಳು. ಕ್ಷೇಮಾ ತನ್ನ ಅನುಪಮ ವಾದ ಸರಳತೆ ಹಾಗೂ ಜ್ಞಾನದಿಂದ ಎಲ್ಲರ ಗೌರವಕ್ಕೆ ಪಾತ್ರಳಾ ದಳು.

ಪಟಾಚಾರ:

ಶ್ರಾವಸ್ತಿಯ ಶ್ರೀಮಂತನ ಮನೆಯಲ್ಲಿ ಪಟಾಚಾರ ಹುಟ್ಟಿದಳು. ಯುವತಿಯಾಗಿ ಬೆಳೆದ ಅವಳು ತನ್ನ ತಂದೆಯ ಬಳಿ ಕೆಲಸದಲ್ಲಿದ್ದ ಯುವಕನನ್ನು ಪ್ರೀತಿಸಿದಳು. ಈ ಪ್ರೀತಿಯನ್ನು ಅವಳು ಗೋಪ್ಯ ವಾಗಿಟ್ಟಳು. ತಂದೆ ಯೋಗ್ಯನಾದ ವರಾನ್ವೇಷಣೆ ಮಾಡಿ, ಮದುವೆಗೆ ಸಿದ್ಧಗೊಳಿಸಿದನು. ಇದನ್ನು ತಿಳಿದ ಪಟಾಚಾರ ಒಂದು ರಾತ್ರಿ ತನ್ನ ಪ್ರಿಯನೊಡನೆ ಕದ್ದು ಓಡಿಹೋಗಿ, ಒಂದು ಹಳ್ಳಿ

ಯಲ್ಲಿ ವಾಸಮಾಡತೊಡಗಿದಳು. ಕೆಲವು ಕಾಲದ ಬಳಿಕ ಅವಳು ಗರ್ಭಿಣಿಯಾಗಿ, ತಂದೆಯ ಮನೆಗೆ ಹೋಗಲು ಆಶಿಸಿದಳು. ಆದಕ್ಕೆ ಅವಳ ಪ್ರಿಯನು ಒಪ್ಪಲಿಲ್ಲ. ಅವಳು ಒಂದು ಮಗುವಿಗೆ ಜನ್ಮ ವಿತ್ತಳು. ವರುಷಗಳು ಕಳೆದ ಬಳಿಕ ಅವಳು ಪುನಃ ಗರ್ಭಿಣಿ ಯಾದಳು. ಆಗಲೂ ಅವಳು ಪ್ರಿಯನ ಇಚ್ಛೆಗೆ ವಿರುದ್ಧವಾಗಿ ತೌರುಮನೆಗೆ ಹೋಗಲು ಇಚ್ಛಿಸಿದಳು. ದಾರಿಯಲ್ಲಿ ನಡೆಯು ತ್ತಿದ್ದಾಗ, ಅವಳು ಪ್ರಸವವೇದನೆಗೊಳಗಾಗಿ ಮಗುವಿಗೆ ಜನ್ಮ ವಿತ್ತಳು. ಆಗ ಪ್ರಿಯನು, ತಾಯಿಗೂ ಮಗುವಿಗೂ ಆಶ್ರಯವನ್ನು ಕಲ್ಪಿಸಲು ಹುಲ್ಲನ್ನೂ ಹುಲ್ಲುಕಡ್ಡಿಗಳನ್ನೂ ತರಲು ಹೋದನು. ದಾರಿಯಲ್ಲಿ ಸರ್ಪವೊಂದು ಅವನನ್ನು ಕಡಿಯಲು, ಅವನು ಪ್ರಜ್ಞಾ ಶೂನ್ಯನಾಗಿಬಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಅವನು ಗತ ಪ್ರಾಣನಾದನು. ಅತ್ತ ಪಟಾಚಾರ ಇಬ್ಬರು ಮಕ್ಕಳೊಡನೆ ಬಹು ಹೊತ್ತು ತನ್ನ ಪ್ರಿಯನಿಗಾಗಿ ಕಾದಳು. ಬಳಿಕ ಅವಳೇ ಹುಡುಕಿ ದಾಗ, ಅವನು ಸತ್ತುಬಿದ್ದಿರುವುದನ್ನು ಕಂಡು ಶೋಕದಿಂದ ಕಣ್ಣೀರು ಸುರಿಸಿದಳು. ಕಡೆಗೆ ಮಕ್ಕಳಿಬ್ಬರನ್ನೂ ಕರೆದುಕೊಂಡು ತನ್ನ ತೌರುಮನೆಗೆ ಹಿಂದಿರುಗಲು ಯೋಚಿಸಿ ದಾರಿಯಲ್ಲಿ ಅಡ್ಡ ಬಂದ ತೊರೆಯನ್ನು ದಾಟಲು, ದೊಡ್ಡ ಮಗುವನ್ನು ದಡದಲ್ಲಿ ಬಿಟ್ಟು, ಆಗ ಜನಿಸಿದ ಶಿಶುವಿನೊಡನೆ ನದಿಯ ಮತ್ತೊಂದು ದಡ ವನ್ನು ಸೇರಿ, ಶಿಶುವನ್ನು ಬಂಡೆಯ ಮೇಲೇರಿಸಿ, ಅದನ್ನು ಹುಲ್ಲಿ ನಿಂದ ಮುಚ್ಚಿದಳು. ಅವಳು ದೊಡ್ಡ ಮಗುವನ್ನು ಕರೆದೊಯ್ಯಲು ಹಿಂದಿರುಗುತ್ತಿದಾಗ, ರಣಹದ್ದೊಂದು ಆಕಾಶದಿಂದಿಳಿದು, ಶಿಶು ವನ್ನು ಕುಕ್ಕಿ ತಿನ್ನತೊಡಗಿತು. ಆದನ್ನು ಓಡಿಸಲೆಂದು ಎರಡು ಕೈಗಳನ್ನೂ ಎತ್ತಿ ಕೂಗಿದಾಗ, ಆ ದಡದಲ್ಲಿದ್ದ ದೊಡ್ಡ ಮಗು ತಾಯಿ ಬಳಿಗೆ ಓಡಿಬಂದು. ಹರಿವ ನೀರಿನಲ್ಲಿ ಕೊಚ್ಚಿ ಹೋಯಿತು.

ಎರಡು ಮಕ್ಕಳನ್ನೂ, ಪ್ರಿಯನನ್ನೂ, ಕಳೆದುಕೊಂಡ ಪಟಾಚಾರ ತನ್ನ ತಂದೆಯ ಮನೆಗೆ ಹಿಂತಿರುಗಿದಾಗ, ಹಿಂದಿನ ದಿನ ತಾಯಿ ತಂದೆಯರೂ ಅಣ್ಣನೂ ಮನೆಯು ಕುಸಿದುಬಿದ್ದುದರಿಂದ ಮರಣ ವಾದರೆಂದು ತಿಳಿದಳು. ಅವಳಿಗೆ ತಡೆಯಲಾರದ ದುಃಖವಾಯಿತು. ಅವಳಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಅನಾಥೆಯಾದ ಅವಳಿಗೆ ಆಶಾಜ್ಯೋತಿಯೇ ಕಾಣಲಿಲ್ಲ. ಆಗ ಅವಳು ಬುದ್ಧನ ಪ್ರವಚನವನ್ನು ಕೇಳಿದಳು. ಕಡೆಗೆ ಭಿಕ್ಷುಣಿಯಾಗಿ ಆಚಾರದಲ್ಲಿ ಪಟುವಾಗಿ, ನಿಜವಾದ ಪಟಾಚಾರ ಆದಳು. ಮೂವತ್ತು ಮಂದಿ ಭಿಕ್ಷುಣಿಯರಿಗೆ ಅವಳು ಶಿಕ್ಷಣವಿತ್ತು, ಕಡೆಗೆ ಅವಳು ನಿರ್ವಾಣ ಸಿದ್ಧಿಯನ್ನು ಪಡೆದಳು.

ಆಮ್ರಪಾಲಿ, ಇಸಿದಾಸೀ–ಇಂತಹ ಅನೇಕ ಮಹಿಳೆಯರು ಧರ್ಮಮಾರ್ಗದಿಂದ ಮುಕ್ತರಾದ ವೃತ್ತಾಂತ ಬೌದ್ಧ ಸಾಹಿತ್ಯ ದಲ್ಲಿ ಉಲ್ಲೇಖವಾಗಿದೆ. ಇಂತಹ ಮಹಿಳೆಯರ ಪ್ರತಿಭಾ ಬೋಧೆ, ಸಾಧನೆ, ಪವಿತ್ರ ಜೀವನ ಇವೆಲ್ಲವೂ ಇಂದಿಗೂ ಸ್ಫೂರ್ತಿಯನ್ನು ನೀಡುವ ವೃತ್ತಾಂತಗಳು.

5. ಜೈನ ಸಾಹಿತ್ಯದಲ್ಲಿ :

ಜೈನ ಧರ್ಮಾವಲಂಬಿಗಳಾದ ಹಲವು ಮಹಿಳೆಯರು ಧರ್ಮಮಾರ್ಗದಲ್ಲಿ ಮುನ್ನಡೆದು ತಮ್ಮ ವರ್ಚಸ್ಸಿನಿಂದ ಇತಿ ಹಾಸದಲ್ಲಿ ಖ್ಯಾತರಾಗಿದ್ದಾರೆ. ಜೈನ ಸಾಹಿತ್ಯದಲ್ಲಿ ಇಂತಹ ಆದರ್ಶ ಮಹಿಳೆಯರ ಉಲ್ಲೇಖವಿದೆ. ಜೈನ ಧರ್ಮದಲ್ಲಿ ಮಹಿಳೆಯರ ರಕ್ಷಣೆಗೆ ಆದ್ಯತೆ ಇದೆ. ಕ್ರಿ.ಶ. ಆರನೆಯ ಶತಮಾನ ದಲ್ಲಿ ಬದುಕಿದ್ದ ಕೊನೆಯ ತೀರ್ಥಂಕರ ಮಹಾವೀರನ ತಾಯಿ

ತ್ರಿಶಲಾ. ಆಕೆಗೆ ಪ್ರಿಯಕಾರಣೀ ಎಂಬ ಹೆಸರಿತ್ತು. ಇವಳೂ ಜೈನ ಧರ್ಮವನ್ನು ಸ್ವೀಕರಿಸಿ, ಶ್ರಮಣಿಯಾಗಿ ಖ್ಯಾತಳಾದಳು.

ಆದಿ ತೀರ್ಥಂಕರ ಋಷಭನಾಥನ ತಾಯಿ ಮರೂದೇವಿ. ಋಷಭನಾಥನು ಸಮವಸರಣ ಮಂಟಪದಲ್ಲಿದ್ದುದನ್ನು ಕಂಡೊಡನೆ ಮರುದೇವಿ ಧ್ಯಾನಸ್ಥಳಾದಳು. ಕೂಡಲೇ ಅವಳು ಕೇವಲ ಜ್ಞಾನ ಪಡೆದು ಮುಕ್ತಿಯನ್ನು ಪಡೆದಳು.

ಮಿಥಿಲಾನಗರದಲ್ಲಿ ಕುಂಭನೆಂಬ ರಾಜನು ಆಳುತ್ತಿದ್ದನು. ಅವನ ಮಗಳು ಮಲ್ಲಿ. ಅವಳು ಅನುಪಮ ಸುಂದರಿ. ಅವಳ ಸೌಂದರ್ಯದ ಖ್ಯಾತಿ ಕೋಸಲ, ಅಂಗ, ಕುರು, ಕಾಶಿ, ಪಾಂಚಾಲ ಮೊದಲಾದ ದೇಶಗಳಲ್ಲಿಯೂ ಹಬ್ಬಿತ್ತು. ಅಲ್ಲಿ ರಾಜರೆಲ್ಲರೂ ಮಲ್ಲಿಯನ್ನು ವಿವಾಹವಾಗಲು ಕುಂಭನನ್ನು ಕೇಳಿದರು. ಕುಂಭನು ಅವರ ಬೇಡಿಕೆಗಳನ್ನು ಈಡೇರಿಸಲಿಲ್ಲ. ಆಗ ಅತೃಪ್ತರಾದ ರಾಜರೆಲ್ಲರೂ ಸೇರಿ ಮಿಥಿಲಾ ನಗರವನ್ನು ಮುತ್ತಿದರು. ಯುದ್ಧ ಭಯಂಕರವಾಗಿ ನಡೆಯಿತು. ಕುಂಭನು ಇನ್ನೇನು ಸೋಲನೊಪ್ಪಬೇಕೆನ್ನುವಾಗ ತಂದೆಗೆ ತನ್ನನ್ನು ವರಿಸಲು ಹಾತೊರೆಯುತ್ತಿದ್ದ ರಾಜರೆಲ್ಲರನ್ನೂ ತನ್ನ ಬಳಿಗೆ ಕಳುಹಿಸಬೇಕೆಂದು ಪ್ರಾರ್ಥಿಸಿಕೊಂಡಳು. ರಾಜರೆಲ್ಲರೂ ಅವಳ ಅಂತಃಪುರಕ್ಕೆ ಬಂದು ಅಲ್ಲಿದ್ದ ಮಲ್ಲಿಯ ವಿಗ್ರಹದ ಸೌಂದರ್ಯವನ್ನು ಕಂಡು ಬೆರಗಾದರು. ಆ ವಿಗ್ರಹಕ್ಕಿಂತ ಸುಂದರವಾದ ಮಲ್ಲಿ ಅಲ್ಲಿಗೆ ಬಂದು, ಸುಂದರ ವಿಗ್ರಹದ ಮೇಲಣ ಮುಚ್ಚಳವನ್ನು ತೆಗೆದಳು. ಕೂಡಲೇ ದುರ್ವಾಸನೆ ಆ ಕೊಠಡಿಯ ಸುತ್ತಲೂ ಹಬ್ಬಿತು. ಹಲವು ದಿನಗಳಿಂದ ಹಾಲು, ಭಕ್ಷ, ಭೋಜ್ಯ ಇತ್ಯಾದಿ ಆಹಾರ ವಸ್ತುಗಳಿಂದ ತುಂಬಿದ್ದ ಆ ವಿಗ್ರಹದಿಂದ ಆ ವಸ್ತುಗಳು ಕೊಳೆತು ದುರ್ವಾಸನೆ

ಬರುತ್ತಿತ್ತು. ಆ ಸಾದೃಶ್ಯವನ್ನು ತೋರಿ, ತನ್ನ ಸುಂದರವಾದ ರೂಪದೊಳಗೆ ಮಾಂಸ, ಅಮೇಧ್ಯ ಇತ್ಯಾದಿ ವಸ್ತುಗಳು ಸೇರಿವೆ. ಇಂಥ ದೇಹ ಅಸ್ಥಿರ, ಶಾಶ್ವತವಾದ ಸುಖಕ್ಕೆ ಆಶಿಸಬೇಕೆಂದು ಅವಳು ಹಿತವಚನಗಳನ್ನು ನುಡಿದಳು. ತಾನು ಜಗತ್ತನ್ನು ತ್ಯಜಿಸಿ, ವಿರಕ್ತಳಾಗುವುದಾಗಿ ತನ್ನ ನಿರ್ಧಾರವನ್ನು ತಿಳಿಸಿದಳು. ಅಲ್ಲಿಗೆ ಬಂದ ರಾಜರಿಗೂ ಹೃದಯ ಪರಿವರ್ತನೆಯಾಗಿ ಅವರೂ ತಮ್ಮ ರಾಜ್ಯಗಳನ್ನು ಉತ್ತರಾಧಿಕಾರಿಗಳಿಗೆ ವಹಿಸಿ, ಅವರೆಲ್ಲರೂ ವಿರಕ್ತರಾಗಿ ಜೈನ ಮುನಿಗಳಾದರು.

ಜೈನ ಧರ್ಮದಲ್ಲಿ ಪಾವಿತ್ರ್ಯಕ್ಕೆ ಹೆಚ್ಚು ಪ್ರಾಶಸ್ತ್ಯ. ರಾಜೀಮತಿ ಎಂಬ ಮಹಿಳೆ ತಾನು ವಿವಾಹವಾಗಲಿದ್ದ ವರನು ವಿರಕ್ತನಾದುದನ್ನು ಕಂಡು ತಾನೂ ವಿರಕ್ತಳಾದಳು. ಇಪ್ಪತ್ತೆರಡನೇ ತೀರ್ಥಂಕರನಾಗಬೇಕಾಗಿದ್ದ ನೇಮಿನಾಥನು ತಾನು ವಿವಾಹವಾಗ ಬೇಕಾಗಿದ್ದ ವಧುವಾದ ರಾಜೀಮತಿಯ ಗೃಹಕ್ಕೆ ಮೆರವಣಿಗೆಯಲ್ಲಿ ಬರುತ್ತಿರುವಾಗ, ಅನೇಕ ಪಶುಗಳನ್ನು ವಿವಾಹದ ಔತಣಕ್ಕಾಗಿ ಒಂದು ಕಡೆ ಕೂಡಿ ಹಾಕಿದುದನ್ನು ಕಂಡನು. ಕಂಡೊಡನೆ ಅವನು ವಿರಕ್ತನಾದನು. ಅತ್ತ ಈ ವೃತ್ತಾಂತವನ್ನು ಕೇಳಿದ ರಾಜೀ ಮತಿಯೂ ಶ್ರಮಣಿಯಾದಳು. ನೇಮಿನಾಥನೂ ರಾಜೀಮತಿಯೂ ಸಾಧಕರಾಗಿ ಗಿರ್‌ನಾರ್ ಪ್ರದೇಶದ ಬೆಟ್ಟಗಳಲ್ಲಿ ವಾಸಿಸುತ್ತಿ ದ್ದಾಗ ನೇಮಿನಾಥನ ಸಹೋದರ ರಥನೇಮಿಯು, ರಾಜೀಮತಿಯ ಸೌಂದರ್ಯದಿಂದ ಆಕರ್ಷಿತನಾಗಿ ಅತ್ತಿಗೆಯನ್ನೇ ಮೋಹಿಸಲು ಯತ್ನಿಸಿದಾಗ, ರಾಜೀಮತಿಯು, ಇನ್ನೊಬ್ಬರು ವಾಂತಿಮಾಡಿದ ವಸ್ತುವನ್ನು ತಿನ್ನಬಾರದೆಂದು ವಿವೇಕವನ್ನು ನುಡಿದು, ಅವನನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದಳು. ರಾಜೀಮತಿಯು ಮಹತ್ತರ ಸಾಧನೆಯಿಂದ ಆದರ್ಶ ಮಹಿಳೆಯಾದಳು.

ಅಸಂಖ್ಯ ಮಹಿಳೆಯರು ಜೈನಧರ್ಮವನ್ನು ಸ್ವೀಕರಿಸಿ ಪ್ರಸೀತರಾದ ವೃತ್ತಾಂತ ಜೈನಸಾಹಿತ್ಯದಲ್ಲಿ ಬರುತ್ತದೆ. ಯಾವ ಮಾತೆಯೂ ತನ್ನ ಮಗುವನ್ನು ಪರರಿಗೆ ದಾನಮಾಡಲಾರಳು. ಆದರೆ ಧರ್ಮಕ್ಕಾಗಿ ಮಗನನ್ನು ದಾನಮಾಡಿದ ವೃತ್ತಾಂತ ಜೈನ ಸಾಹಿತ್ಯದಲ್ಲಿ ನಿರೂಪಿತವಾಗಿದೆ. ಉತ್ತರ ಗುಜರಾತಿನ ಧಂಡುಕ ಎಂಬ ನಗರದಲ್ಲಿ ಛಾಚಿಗನೆಂಬ ಶ್ರೀಮಂತನು ವಾಸಿಸುತ್ತಿದ್ದನು. ಅವನ ಪತ್ನಿ ಪಾಹಿಣಿಯು ಜೈನ ಧರ್ಮದಲ್ಲಿ ಶ್ರದ್ಧೆಯನ್ನಿಟ್ಟಿದ್ದಳು. ಅವಳಿಗೆ ಚಾಂಗದೇವನೆಂಬ ಪುತ್ರನು ಜನಿಸಿದನು. ಚಾಂಗದೇವ ಐದು ವರ್ಷದ ಬಾಲಕನಾದಾಗ, ಅವನನ್ನು ತನ್ನ ಗುರುವಾದ ದೇವಚಂದ್ರನ ಬಳಿಗೆ ಕರೆದೊಯ್ದಳು. ಆ ಮಗು ನೇರವಾಗಿ ಹೋಗಿ ಆಚಾರ್ಯನ ಪೀಠದ ಮೇಲೆ ಕುಳಿತುಕೊಂಡಿತು. ಆಗ ದೇವಚಂದ್ರನು ಆ ಮಗುವನ್ನು ತನಗೇ ಅರ್ಪಿಸಬೇಕೆಂದು ಕೇಳಿಕೊಂಡಾಗ, ತನ್ನ ಪತಿಯ ಅಪ್ಪಣೆ ಇಲ್ಲದೆ ಹೇಗೆ ಕೊಡುವುದೆಂದು ಅವಳು ಚಲಿತ ಮನಸ್ಕಳಾದಳು. ಕಡೆಗೆ, ಪತಿಯ ಅಪ್ಪಣೆ ದೊರಕುವುದು ದುರ್ಲಭವೆಂದು ತಿಳಿದು, ಗುರುವಿನ ಮನಸ್ಸಿಗೆ ನೋವಾಗಬಾರದೆಂದು ಆ ಮಗುವನ್ನು ಗುರುವಿಗೆ ದಾನ ಮಾಡಿದಳು. ಚಾಂಗದೇವನು ಬೆಳೆದು ಕಡೆಗೆ ಕಲಿಕಾಲ ಸರ್ವಜ್ಞನೆಂದು ಖ್ಯಾತನಾದ ಹೇಮಚಂದ್ರ ಆಚಾರ್ಯನಾದನು.

ಅನೇಕ ಮಹಿಳೆಯರು ಜೈನ ಧರ್ಮದ ಉತ್ತುಂಗ ಶಿಖರಕ್ಕೇರಿದ್ದನ್ನು ಜೈನ ಸಾಹಿತ್ಯ ಹೃದಯಸ್ಪರ್ಶಿಯಾಗುವಂತೆ ಚಿತ್ರಿಸಿದೆ.

6. ಉತ್ತರ ಭಾರತದಲ್ಲಿ :

ಉತ್ತರ ಭಾರತದ ಧಾರ್ಮಿಕ ಮಹಿಳೆಯರಲ್ಲಿ ಕೇವಲ ಮೀರಾಬಾಯಿ ಮತ್ತು ಶ್ರೀ ಶಾರದಾದೇವಿ—ಇವರಿಬ್ಬರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಅವರ ಜೀವನದ ಸಂಕ್ಷಿಪ್ತ ಪರಿಚಯ ಮಾಡಿಕೊಡಲು ಇಲ್ಲಿ ಯತ್ನಿಸಿದೆ.

ಮೀರಾ :

ಮೀರಾ ಹುಟ್ಟಿದ್ದು ರಾಜಾಸ್ಥಾನದಲ್ಲಿ. ಆಕೆಯ ಜನನ ಕಾಲದ ವಿಚಾರವಾಗಿ ಭಿನ್ನಾಭಿಪ್ರಾಯಗಳಿವೆ. ಆದರೆ ಬಹುಜನ ವಿದ್ವಾಂಸರು ಕ್ರಿ. ಶ. 1506 ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ರಾಜವಂಶಕ್ಕೆ ಸೇರಿದ ರತ್ನಸಿಂಹನ ಏಕಮಾತ್ರ ಪುತ್ರಿ ಮೀರಾ. ಮೀರಾ ಇನ್ನೂ ಹುಡುಗಿಯಾಗಿದ್ದಾಗ ಸಾಧುವೊಬ್ಬನು ಅರಮನೆಗೆ ಬಂದನು. ಅವನ ಬಳಿ ಗಿರಿಧರಲಾಲನ ಸುಂದರ ವಿಗ್ರಹವಿತ್ತು. ಅದನ್ನು ಕಂಡೊಡನೆ ಮೀರಾ ಆಕರ್ಷಿತಳಾದಳು. ಆದರೆ ಆ ಸಾಧು ಕೊಡಲೊಪ್ಪಲಿಲ್ಲ. ಆ ಸುಂದರ ವಿಗ್ರಹವನ್ನು ಪಡೆಯದ ಮೀರಾಳಿಗೆ ಊಟ ನಿದ್ರೆ ಅಪ್ರಿಯವಾದವು. ಕೆಲವು ದಿನಗಳಲ್ಲಿ ಆ ಸಾಧುವಿಗೆ, ಆ ವಿಗ್ರಹವನ್ನು ಮೀರಾಳಿಗೆ ಕೊಡ ಬೇಕೆಂಬ ಆದೇಶ ಕನಸಿನಲ್ಲಾಯಿತು. ಅವನು ಅರಮನೆಗೆ ಹಿಂದಿರುಗಿ ಬಂದು ವಿಗ್ರಹವನ್ನು ಮೀರಾಳಿಗೆ ಪ್ರೀತಿಯಿಂದ ನೀಡಿದನು. ಅಂದಿನಿಂದ ಗಿರಿಧರಲಾಲನ ವಿಗ್ರಹ ಮೀರಾಳ ಪಾಲಿಗೆ ಜೀವಂತ ವಿಗ್ರಹವಾಯಿತು. ಆ ವಿಗ್ರಹವನ್ನು ಬಿಟ್ಟಿರಲು ಅವಳಿಗೆ ಸಾಧ್ಯವಾಗಲಿಲ್ಲ.

ಮುಗ್ಧ ಹುಡುಗಿಯಾದ ಮೀರಾ, ಒಂದು ದಿನ ಮದುವೆಯ ಮೆರವಣಿಗೆಯನ್ನು ನೋಡಿದಳು. ಬಾಲ್ಯ ಸಹಜವಾದ ಮನಸ್ಸಿನಿಂದ, ತಾಯಿಯನ್ನು ಕುರಿತು, "ಅಮ್ಮಾ ನನ್ನ ಗಂಡನಾರು ?" ಎಂದು ಕೇಳಿದಳು. ಆಗ ಆ ತಾಯಿ ಗಿರಿಧರಲಾಲನ ವಿಗ್ರಹವನ್ನು ತೋರಿ, "ಅವನೇ ನಿನ್ನ ಗಂಡ" ಎಂದಳು. ಅಂದಿನಿಂದ ಮೀರಾಳ ಮನಸ್ಸು ಗಿರಿಧರಲಾಲನಲ್ಲಿಯೇ ಸಂಪೂರ್ಣವಾಗಿ ಲೀನವಾಯಿತು. ಆರು ಏಳು ವರ್ಷದ ಹುಡುಗಿಯಾಗಿದ್ದಾಗ ಮೀರಾಳ ತಾಯಿ ದೈವಾಧೀನಳಾದಳು. ಬಳಿಕ ಅವಳು ತಾತನ ಮನೆಯಲ್ಲಿಯೇ ಬೆಳೆದಳು. ಅವಳು ಯುವತಿಯಾದ ಬಳಿಕ ಅವಳನ್ನು ಮೇವಾಡದ ಪ್ರಸಿದ್ಧ ರಾಜನಾದ ಮಹಾರಾಣಾ ಸಿಂಗನ ಹಿರಿಯ ಮಗ ಭೋಜರಾಜನಿಗೆ ಕೊಟ್ಟು ಮದುವೆ ಮಾಡಿದರು. ಅವಳ ವಿವಾಹಿತ ಜೀವನ ಸುಖವಾಗಿತ್ತು. ಕೆಲವು ವರ್ಷಗಳು ಕಳೆದ ಮೇಲೆ ಭೋಜರಾಜನು ಅಕಾಲ ಮರಣಕ್ಕೆ ತುತ್ತಾದನು. ಅವಳಿಗೆ ಇನ್ನೂ ಇಪ್ಪತ್ತೈದು ವರ್ಷಗಳೂ ಕೂಡ ತುಂಬಿರಲಿಲ್ಲ. ಅವಳಿಗೆ ಬಂದೊದಗಿದ ವೈಧವ್ಯದ ದುಃಖದಿಂದ ಅವಳು ಕ್ರಮೇಣ ಚೇತರಿಸಿಕೊಂಡು, ಗಿರಿಧರಲಾಲನ ಪೂಜೆಯಲ್ಲಿ ಆಸಕ್ತಳಾದಳು. ಆ ಕಾಲದಲ್ಲಿ ರಾಜಮನೆತನದ ಸ್ತ್ರೀಯರು ಪರದೆಯ ಹಿಂದೆಯೇ ಬದುಕಬೇಕಾಗಿತ್ತು. ಆಗ ಅವಳು ಧೈರ್ಯದಿಂದ ಸಾಧು ಸಂತರೊಡನೆ ಭಗವದ್ವಿಷಯವಾಗಿ ಚರ್ಚೆ ಮಾಡಿದಳು. ಅವಳು ಭಕ್ತಿಭಾವದಿಂದ ತುಂಬಿದವಳಾಗಿ ಕೀರ್ತನೆಗಳನ್ನು ರಚಿಸುತ್ತ ನೃತ್ಯ ಮಾಡತೊಡಗಿದಳು. "ಪಗಘುಂಗರು ಬಾಂಧಕರ ನಾಚೀರೇ" ಎಂಬ ಗೀತೆಯಲ್ಲಿ ಅವಳ ಭಾವ ಸ್ಫುಟವಾಗಿ ಮೂಡಿದೆ.

ಭಕ್ತ ಮೀರಾಳ ಖ್ಯಾತಿ ಸುತ್ತಲೂ ಹಬ್ಬಿತು. ಹಲವರು

ಅವಳ ಸಂದರ್ಶನಾರ್ಥವಾಗಿ ಆಗಮಿಸತೊಡಗಿದರು. ಮೀರಾಳ ಖ್ಯಾತಿಯನ್ನು ಕಂಡು ರಾಜ ಪರಿವಾರದವರು ಅವಳನ್ನು ಟೀಕಿಸಿದರು. ಅವಳಿಗೆ ನಾನಾ ರೀತಿಯ ಕಷ್ಟವನ್ನು ಅವರು ಕೊಡಲಾರಂಭಿಸಿದರು. ಅವಳನ್ನು ಕೊಲ್ಲಬೇಕೆಂದು ವಿಷದ ಬಟ್ಟಲನ್ನೂ, ನಾಗರ ಹಾವಿನ ಬುಟ್ಟಿಯನ್ನು ಕಳುಹಿಸಿದರು. ವಿಷವನ್ನು ತೀರ್ಥವೆಂದು ಅವಳು ಕುಡಿದಳು. ಸರ್ಪವನ್ನು ತುಲಸೀಮಾಲೆಯಂತೆ ಧರಿಸಿದಳು. ಮೇವಾಡದ ಕಷ್ಟ ಪರಂಪರೆಗಳಿಂದ ದೂರವಿರಲು, ಮೇಡತಾಗೆ ಅವಳು ಹೋದಳು. ಅಲ್ಲಿ ಅವಳ ಭಕ್ತಿ ಸಾಧನೆಗೆ ಯಾವ ತೊಂದರೆಯೂ ಇರಲಿಲ್ಲ. ಆದರೆ 4-5 ವರ್ಷಗಳಲ್ಲಿ ಅವಳ ಚಿಕ್ಕಪ್ಪ ರಾಜಾ ವೀರಮದೇವನು ಶತ್ರುಗಳಿಗೆ ಬಲಿಯಾದನು. ಅಲ್ಲಿಂದ ಮೀರಾ ಬೃಂದಾವನಕ್ಕೆ ಹೊರಟಳು. ಆಗ ಅಲ್ಲಿ ಜೀವ ಗೋಸ್ವಾಮಿಯವರನ್ನು ಸಂದರ್ಶಿಸಿದಳು. ಮೊದಲು ಅವರು ಮೀರಾಳನ್ನು ಸಂದರ್ಶಿಸಲು ಒಪ್ಪಲಿಲ್ಲ. ಏಕೆಂದರೆ ಅವರು ಸ್ತ್ರೀಯರನ್ನು ಸಂದರ್ಶಿಸುತ್ತಿರಲಿಲ್ಲ. ಆಗ ಮೀರಾ, “ ಇದುವರೆಗೆ ಶ್ರೀ ಕೃಷ್ಣನೊಬ್ಬನೇ ಪುರುಷ, ಉಳಿದವರೆಲ್ಲರೂ ಗೋಪಿಯರೆಂದು ತಿಳಿದಿದ್ದೆ. ಈಗ ಶ್ರೀ ಕೃಷ್ಣನೊಬ್ಬನಿಗೆ ಪ್ರತಿಸ್ಪರ್ಧಿ ಇರುವುದು ತಿಳಿದಂತಾಯಿತು ” ಎಂದು ನುಡಿದಳು. ಆಗ ಜೀವಗೋಸ್ವಾಮಿಯವರು ತಮ್ಮ ಅಜ್ಞಾನದಿಂದ ಎಚ್ಚೆತ್ತು ತಾವೇ ಬಂದು ಮೀರಾಳಿಗೆ ಗೌರವಾರ್ಪಣೆ ಮಾಡಿದರು.

ಬೃಂದಾವನದಲ್ಲಿ ಭಕ್ತಳಾದ ಮೀರಾಳಿಗೆ ತುಂಬ ಉತ್ತಮ ವಾತಾವರಣ ದೊರಕಿತು. ಕ್ರಿ. ಶ. 1600ರ ಹೊತ್ತಿಗೆ ಅವಳು ದ್ವಾರಕೆಗೆ ಹೊರಟಳು. ಸುಮಾರು ಕ್ರಿ. ಶ. 1630ರ ವರೆಗೆ

ಅವಳು ಅಲ್ಲಿಯೇ ನೆಲಸಿ, ತನ್ನ ಭಕ್ತಿಯ ಪರಿಮಳವನ್ನು ಸುತ್ತಲೂ ಬೀರಿದಳು. ಭಗವದ್ಭಕ್ತಳಾದ ಮೀರಾ ಕಡೆಗೆ ತನ್ನ ಪಾರ್ಥಿವ ಶರೀರವನ್ನು ತ್ಯಜಿಸಿ ಮುಕ್ತಳಾದಳು

ಮೀರಾಳ ಗೀತೆಗಳಲ್ಲಿ ಅವಳ ಸಾಧನೆಯ ಹಂತಗಳನ್ನು ಗುರುತಿಸಬಹುದು. ಶ್ರೀ ಕೃಷ್ಣನೆ ಪತಿ, ಜೀವಾತ್ಮ ಸತಿ — ಎಂಬ ಭಾವ ಆ ಗೀತೆಗಳಲ್ಲಿ ಓತಪ್ರೋತವಾಗಿದೆ. ಅದಲ್ಲದೆ ಕೃಷ್ಣನಲ್ಲಿ ಅವಳು ಸಂಪೂರ್ಣ ಶರಣಾಗತಳು. ಅವಳ ಭಕ್ತಿ ಭಾವನೆ, ಅವಳ ಜೀವನದ ಸಂಪೂರ್ಣ ಆಶಾಜ್ಯೋತಿ. ಅವಳು ಬಾಹ್ಯಾಚಾರಗಳಿಗಿಂತ ಅಂತರಂಗಿಕವಾದ ನಿರ್ಮಲ ಸ್ವಭಾವಕ್ಕೆ ಹೆಚ್ಚಿನ ಪುರಸ್ಕಾರ ಬೇಕೆನ್ನುತ್ತಾಳೆ. ಅವಳ ಗೀತೆಗಳು ಅವಳ ಭಕ್ತಿ ಭಾವದಿಂದ ಮಾಡಿದ ಹೃದಯಾಂಜಲಿ. ಅವುಗಳ ಸರಳತೆ, ನಿಷ್ಕಪಟ ಭಾವನೆ ಇಂದಿಗೂ ಭಕ್ತ ಹೃದಯವನ್ನು ರಸಾವೇಶಗೊಳಿಸುತ್ತವೆ.

ಶ್ರೀ ಶಾರದಾ ದೇವಿ :

ಶ್ರೀ ರಾಮಕೃಷ್ಣ ಪರಮಹಂಸರ ಧರ್ಮಪತ್ನಿ ಶ್ರೀ ಶಾರದಾ ದೇವಿ, ತಪಸ್ವಿನಿ. ಧೀರಯೋಗಿನಿ, ಹಾಗೂ ತ್ಯಾಗಮಯಿ. ಆ ಮಹಾಮಾತೆಯ ಜೀವನ, ಆರಣ್ಯದಲ್ಲಿ ಹರಿಯುವ ನಿರ್ಝರಿಣಿಯಂತೆ. ಗಂಭೀರ ಹಾಗೂ ಪವಿತ್ರ. ಅವರ ತಪೋಮಯ ಸರಳ ಜೀವನದ ಆದರ್ಶ, ನಾರಿಯರಿಗೆ ನವ ಚೈತನ್ಯ ತುಂಬುವ ಸಂಜೀವಿನಿ. ವಿರಕ್ತರಾದ ಶ್ರೀ ರಾಮಕೃಷ್ಣರನ್ನು ವಿವಾಹವಾಗಿ ಪತಿಯ ಸಾನ್ನಿಧ್ಯದಲ್ಲಿ ಪರಮ ಸಾಕ್ಷಾತ್ಕಾರ ಪಡೆದ ದಿವ್ಯ ಮಹಿಳೆ ಅವರು.

ಶ್ರೀ ಶಾರದಾದೇವಿಯವರು 1853ನೇ ಡಿಸೆಂಬರ್ 22ರಂದು ಕಲ್ಕತ್ತೆಗೆ ಅರವತ್ತು ಮೈಲಿ ದೂರದಲ್ಲಿರುವ ಜಯರಾಂಬಟಿ ಎಂಬ ಹಳ್ಳಿಯಲ್ಲಿ ಹುಟ್ಟಿದರು. ಅವರ ತಂದೆ ರಾಮಚಂದ್ರಮುಖರ್ಜಿ, ತಾಯಿ ಶ್ಯಾಮಸುಂದರೀದೇವಿ. ಶ್ರೀ ಶಾರದಾದೇವಿ ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಲಿಲ್ಲ. ತಾಯಿ ತಂದೆಯವರು ಹೇಳುತ್ತಿದ್ದ ರಾಮಾಯಣ, ಮಹಾಭಾರತ, ಪುರಾಣ—ಇವುಗಳ ಅರಿವೇ ಅವರಿಗೆ ದೊರೆತ ವಿದ್ಯಾಭ್ಯಾಸ. ಮುಂದೆ ಅವರು ಓದನ್ನು ಕಲಿತದ್ದು ಶ್ರೀ ರಾಮಕೃಷ್ಣ ಪರಮಹಂಸರನ್ನು ವಿವಾಹವಾದ ಬಳಿಕ. ಐದು ವರ್ಷದ ಶ್ರೀ ಶಾರದಾದೇವಿಗೆ ಅವರಿಗಿಂತಲೂ ಇಪ್ಪತ್ತುಮೂರು ವರ್ಷ ದೊಡ್ಡವರಾದ ಶ್ರೀ ರಾಮಕೃಷ್ಣ ಪರಮಹಂಸರೊಡನೆ ವಿವಾಹವಾಯಿತು. ಪರಮಹಂಸರು ದಕ್ಷಿಣೇಶ್ವರದಲ್ಲಿ ತಮ್ಮ ಕಠೋರ ಸಾಧನೆಯಲ್ಲಿ ಮಗ್ನರಾದರು. ಶ್ರೀ ಶಾರದಾದೇವಿಯವರಿಗೆ ಪುನಃ ಪತಿಯ ಸಂದರ್ಶನವಾದುದು ಅವರ ಹದಿನಾಲ್ಕನೆಯ ವರ್ಷದಲ್ಲಿ. ಆಗ ಪರಮಹಂಸರು ತಮ್ಮ ಹಳ್ಳಿಯಾದ ಕಾಮರಪುಕುರಕ್ಕೆ ಹೋಗಿ ಪತ್ನಿಯನ್ನು ಕರೆಸಿಕೊಂಡು ಬಹು ಪ್ರೀತಿಯಿಂದ ಅವರಿಗೆ ಪ್ರಾರ್ಥನೆ ಮತ್ತು ಧ್ಯಾನಗಳನ್ನು ಮಾಡುವ ರೀತಿಯನ್ನು ಹೇಳಿಕೊಟ್ಟರು. ಪತಿಯ ಸಾನ್ನಿಧ್ಯದಲ್ಲಿ ಶ್ರೀ ಶಾರದಾದೇವಿಗೆ ಹೊಸ ಅನುಭವಗಳಾದವು. ಅವರ ಜೀವನದಲ್ಲಿ ಹೊಸ ಶಕ್ತಿ ಸಂಚಾರವಾಯಿತು.

ಶ್ರೀ ರಾಮಕೃಷ್ಣರು ಕಾಮಾರಪುಕುರದಿಂದ ದಕ್ಷಿಣೇಶ್ವರಕ್ಕೆ ಪುನಃ ಹೊರಟುಹೋದರು. ಅವರಿಂದ ತಮಗೆ ಕರೆ ಬರಬಹುದೆಂದು ತಿಳಿದ ಶ್ರೀಮಾತೆಗೆ ಪತಿ ಹುಚ್ಚನಾಗಿದ್ದಾನೆ ಎಂಬ ಸುದ್ದಿ ತಿಳಿಯಿತು. ಪತಿಯ ದುಃಖದಲ್ಲಿ ಸಹಭಾಗಿನಿಯಾಗಿ, ಅವರ ಬಳಿ ಇದ್ದು ಶುಶ್ರೂಷೆ ಮಾಡುವುದೇ ತನ್ನ ಧರ್ಮವೆಂದು ತಿಳಿದ

ಶ್ರೀಮಾತೆ ಪತಿಯ ಬಳಿಗೆ ಹೋಗಲು ಕಾತರಿಸಿದರು. ಇಂದಿನಂತೆ ಅಂದು ರೈಲಾಗಲೀ, ಇತರ ವಾಹನ ಸೌಕರ್ಯವಾಗಲೀ ಇರಲಿಲ್ಲ.

ಒಂದು ದಿನ ಕೆಲವು ಯಾತ್ರಿಕರು ಜಯರಾಂವಟಿಯಿಂದ ಕಲ್ಕತ್ತೆಗೆ ಹೊರಟರು. ಅವರ ಜೊತೆಯಲ್ಲಿ ತಾನೂ ಹೊರಡುವ ಇಚ್ಛೆಯನ್ನು ಶ್ರೀಮಾತೆ ಪ್ರಕಟಿಸಿದಾಗ, ತಂದೆಗೆ ಮಗಳ ಮನಸ್ಸು ಅರ್ಥವಾಗಿ ಮಗಳನ್ನು ಕರೆದುಕೊಂಡು ಹೊರಟರು. ಕಾಲು ನಡಿಗೆಯ ಪ್ರಯಾಣಮಾಡಿದುದರಿಂದ ಶ್ರೀಮಾತೆ ದಾರಿಯಲ್ಲಿ ಅಸ್ವಸ್ಥರಾದರು. ದೈವಕೃಪೆಯಿಂದ ಅವರು ಬೇಗನೆ ಗುಣಮುಖರಾಗಿ ಶ್ರೀ ರಾಮಕೃಷ್ಣ ಪರಮಹಂಸರ ಬಳಿಗೆ ಹೋದರು. ಶ್ರೀಮಾತೆಯನ್ನು ಆದರದಿಂದ ಸ್ವಾಗತಿಸಿದ ಪರಮಹಂಸರು ವೈದ್ಯರನ್ನು ಬರಮಾಡಿಕೊಂಡು ಔಷಧೋಪಚಾರ ಮಾಡಿಸಿ, ಶ್ರೀಮಾತೆ ಸಂಪೂರ್ಣವಾಗಿ ಆರೋಗ್ಯವಾಗುವಂತೆ ಮಾಡಿದರು.

ಕೆಲವು ಕಾಲ ಕಳೆಯಿತು. ಒಂದು ದಿನ ಪರಮಹಂಸರು ಶ್ರೀಮಾತೆಯವರಿಗೆ, 'ನೋಡು ಶಾರದೆ. ನೀವು ನನ್ನನ್ನು ವಿವಾಹವಾದ ಬಳಿಕ ಪತಿಯಾದ ನನ್ನ ಮೇಲೆ ನಿಮಗೆ ಅಧಿಕಾರವಿದೆ. ನನಗೆ ಜಗತ್ತಿನ ಮಹಿಳೆಯರೆಲ್ಲ ಜಗನ್ಮಾತೆಯ ಪ್ರತಿರೂಪದಂತೆ ಕಾಣುತ್ತಿದ್ದಾರೆ. ನೀವು ಸಾಮಾನ್ಯ ಪತ್ನಿಯಂತೆ ಪ್ರಾಪಂಚಿಕ ಸುಖವನ್ನು ಬಯಸಿದರೆ, ಅದನ್ನು ನಾನು ನಿಮಗೆ ಕೊಡಬಲ್ಲೆ. ಆದರೆ ನಾವಿಬ್ಬರೂ ಸಾಧಕರಾಗಿ ಸಾಕ್ಷಾತ್ಕಾರ ಪಡೆಯುವುದು ಉತ್ತಮವಲ್ಲವೇ ? ನಿಮ್ಮ ಇಚ್ಛೆಯನ್ನು ತಿಳಿಸಿರಿ''—ಎಂದು ಮನವಿ ಮಾಡಿಕೊಂಡರು.

" ನಿಮ್ಮನ್ನು ಪ್ರಾಪಂಚಿಕ ಸುಖಕ್ಕೆ ಎಳೆಯುವುದಿಲ್ಲ. ನಿಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ನಾನೂ ಭಾಗಿಯಾಗುವ ಸೌಭಾಗ್ಯ ದೊರಕಿದರೆ ನಾನು ಕೃತಾರ್ಥಳು " ಎಂದರು ಶ್ರೀಮಾತೆ.

ಒಂದು ದಿನ ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಶಿಷ್ಯ ರೊಡನೆ ಮಾತಾಡುತ್ತ, "ಶ್ರೀಮಾತೆ ಪವಿತ್ರರಾಗಿರದಿದ್ದರೆ ನನ್ನ ಸಾಧನೆ ಸಫಲವಾಗುತ್ತಿರಲಿಲ್ಲ" ಎಂದು ಹೇಳಿ ಶ್ರೀಮಾತೆಯಲ್ಲಿ ಅಪಾರ ಗೌರವವನ್ನು ವ್ಯಕ್ತ ಪಡಿಸಿದರು.

ಶ್ರೀಮಾತೆ ಪತಿದೇವನ ಬಳಿ ದಕ್ಷಿಣೇಶ್ವರದಲ್ಲಿ ಹತ್ತು ವರ್ಷಗಳ ಕಾಲ ನೆಲಸಿ, ತಮ್ಮ ಪತಿಯ ಆಧ್ಯಾತ್ಮಿಕ ಜೀವನದಲ್ಲಿ ತಮ್ಮ ಬದುಕನ್ನು ಅರಳಿಸಿದರು. ಅವರ ಪಾಲಿಗೆ ಪರಮಹಂಸರು ತಾಯಿ, ತಂದೆ, ಪತಿ, ಗುರು, ಕಡೆಗೆ ಅವರ ಪಾಲಿನ ದೇವರೂ ಆಗಿದ್ದರು. ಶ್ರೀಮಾತೆ ದಕ್ಷಿಣೇಶ್ವರದಲ್ಲಿ ಪ್ರಾತಃಕಾಲ ಮೂರು ಘಂಟೆಗೆ ಎದ್ದು ಧ್ಯಾನ ಮಾಡಲು ಕುಳಿತುಕೊಳ್ಳುತ್ತಿದ್ದರು. ಆಗ ಅವರು ಅಂತರ್ಮುಖಿಗಳಾಗಿ ಬಾಹ್ಯವನ್ನು ಮರೆಯು ತ್ತಿದ್ದರು. ಅವರ ಮನಸ್ಸು ಅತಿಮಾನಸಕ್ಕೆ ಏರುತ್ತಿತ್ತು. ಪತಿಯ ಸಮಾಧಿಸ್ಥಿತಿಯ ಎತ್ತರಕ್ಕೆ ಏರಬೇಕೆಂಬ ಅಭೀಪ್ಸೆ ಅವರದು. ಪರಮಹಂಸರ ಕೃಪೆ ಹಾಗೂ ಶ್ರೀಮಾತೆಯ ನಿರಂತರ ಸಾಧನೆ ಗಳಿಂದ ಆ ಸ್ಥಿತಿ ಕಡೆಗೆ ಅವರಿಗೆ ಲಭಿಸಿತು. ಆ ಎತ್ತರಕ್ಕೆ ಏರಿ ದ್ದರೂ ಶ್ರೀಮಾತೆ ಸಾಮಾನ್ಯರಂತೆ ಅಡಿಗೆಯ ಕೆಲಸ, ಅತಿಥಿಗಳ ಸೇವೆ, ಪತಿಯ ಶುಶ್ರೂಷೆ— ಈ ಕೆಲಸಗಳಲ್ಲಿ ಮಗ್ನರಾಗು ತ್ತಿದ್ದರು.

ಶ್ರೀಮಾತೆಯವರಲ್ಲಿ ತಾಯ್ತನದ ಮೃದು ಸ್ವಭಾವವೂ, ಪಾವಿತ್ರ್ಯವೂ, ನೆಲಸಿದ್ದವು. ಪರಮಹಂಸರ ದೃಷ್ಟಿಗೆ ಅವರು ಜಗನ್ಮಾತೆಯೇ ಆಗಿದ್ದರು. 1872ರ ಜೂನ್ 5ರಂದು ಪರಮ ಹಂಸರು ತಮ್ಮ ಕೋಣೆಯಲ್ಲಿ ಪೂಜೆಗಾಗಿ ಸಕಲ ಸಿದ್ಧತೆಗಳನ್ನು ಮಾಡಿ, ರಾತ್ರಿ 9 ಘಂಟೆಗೆ ಶ್ರೀಮಾತೆಯನ್ನು ಬರಮಾಡಿಕೊಂಡು, ದೇವಿಯ ಪೀಠದಲ್ಲಿ ಅವರನ್ನು ಕುಳ್ಳಿರಿಸಿ, ಪೂಜೆಮಾಡಿ,

ಸಾಷ್ಟಾಂಗ ಪ್ರಣಾಮ ಮಾಡಿದರು. ಬಳಿಕ ಇಬ್ಬರೂ ಸಮಾಧಿಯಲ್ಲಿ ಮಗ್ನರಾದರು. ಈ ಪೂಜೆಯೇ ಪರಮಹಂಸರ ಸಾಧನೆಯ ಶಿಖರವಾಗಿತ್ತು. ಪತ್ನಿಯೊಡನೆ ಇದ್ದು ಆಧ್ಯಾತ್ಮಿಕ ಸಾಧನೆಯಲ್ಲಿ ಮಹತ್ತರ ಪ್ರಗತಿಯನ್ನು ಸಾಧಿಸುವುದು ಸಾಧ್ಯವೆಂಬುದನ್ನು ತೋರಿದ ದಿವ್ಯಾತ್ಮರು ಶ್ರೀ ರಾಮಕೃಷ್ಣರು.

ಪರಮಹಂಸರು ತಮ್ಮ ಇಹಲೋಕದ ಕಾರ್ಯ ಮುಗಿಸಿ, ತಮ್ಮ ಶರೀರವನು ತ್ಯಜಿಸುವ ಮೊದಲು ಶ್ರೀಮಾತೆಗೆ, "ನನ್ನ ಬಳಿಕ ಯಾರ ಮುಂದೂ ಕೈಯೊಡ್ಡಬೇಡಿ ನಿಮ್ಮ ಜೀವನಕ್ಕೆ ಬೇಕಾಗುವ ಆಹಾರ ಮತ್ತು ಬಟ್ಟೆಗಳಿಗೆ ಕೊರತೆ ಇರುವುದಿಲ್ಲ. ಯಾರ ಹಂಗಿಗೂ ಸಿಕ್ಕದೆ, ಕಾಮಾರಪುಕುರದ ಗುಡಿಸಲಿನಲ್ಲಿ ಸ್ವತಂತ್ರವಾಗಿರಿ"—ಎಂದು ಹಿತವಚನವನ್ನು ನುಡಿದರು.

ಜಗದ್ವಿಖ್ಯಾತ ಪರಮಹಂಸರ ಪತ್ನಿ ಶ್ರೀಮಾತೆ ಲೌಕಿಕ ಸುಖಭೋಗಗಳಲ್ಲಿ ತೇಲಾಡಿದವರಲ್ಲ. ಅವರ ಬಾಳು ದುಃಖ, ಕಷ್ಟ, ಕ್ಲೇಶ, ತ್ಯಾಗ ಹಾಗೂ ಸೇವೆಗಳ ಮಧ್ಯೆ ಅರಳಿತು. ಅವರು ತಮ್ಮ ಕಷ್ಟಗಳನ್ನು ಯಾರ ಮುಂದೆಯೂ ಹೇಳಿದವರಲ್ಲ. ಪರಮಹಂಸರ ಕೆಲವು ಶಿಷ್ಯರಿಗೆ ಮಾತ್ರ ಶ್ರೀಮಾತೆಯ ಕಷ್ಟ ತಿಳಿದಿತ್ತು. ದಕ್ಷಿಣೇಶ್ವರದಲ್ಲಿದ್ದಾಗ ಶ್ರೀಮಾತೆ ತಮ್ಮ ಪತಿಗೂ ಶಿಷ್ಯವೃಂದಕ್ಕೂ ಅಡಿಗೆ ಮಾಡಬೇಕಾಗಿತ್ತು. ಎಷ್ಟೇ ಕೆಲಸವಿದ್ದರೂ ಅವರು ಗೊಣಗುತ್ತಿರಲಿಲ್ಲ. ಅವರು ವಾಸಮಾಡುತ್ತಿದ್ದ ಹಾಗೂ ಅಡಿಗೆ ಮಾಡುತ್ತಿದ್ದ ಸ್ಥಳ ತುಂಬ ಕಿರಿದು. ನೆಟ್ಟಗೆ ನಿಲ್ಲುವಷ್ಟು ಕೂಡ ಎತ್ತರವಾಗಿರಲಿಲ್ಲ. ಅಂತಹ ಸ್ಥಳ ಅವರಿಗೆ ಪತಿದೇವನ ಮಾರ್ಗದರ್ಶನದಿಂದ ತಪೋಭೂಮಿಯಾಯಿತು. ಪರಮಹಂಸರ ಬಳಿಕ, ಮಾತೆಯ ಬಳಿಗೆ ಅನೇಕ ಶಿಷ್ಯರು ಬಂದರು. ಅವರಲ್ಲಿ ಕೆಲವರು ಹುಚ್ಚರೂ, ದರೋಡೆಕೋರರೂ ಇದ್ದರು.

ಶ್ರೀಮಾತೆಯ ಪ್ರೇಮಮಯ ಹೃದಯದಲ್ಲಿ ಎಲ್ಲರಿಗೂ ಸ್ಥಾನವಿತ್ತು. ಅವರ ತಾಯಿ, "ನನ್ನ ಶಾರದೆಗೆ, 'ತಾಯಿ' ಎನಿಸಿಕೊಳ್ಳುವ ಭಾಗ್ಯವಿಲ್ಲದೆ ಹೋಯಿತಲ್ಲ" ಎಂದು ದುಃಖಿಸಿದಾಗ ಪರಮಹಂಸರು, "ಶಾರದೆ ಒಂದು ಮಗುವಿನ ತಾಯಿಯಲ್ಲ, ಸಹಸ್ರಾರು ಶಿಷ್ಯರು ಅವರನ್ನು 'ಮಾತೆ, ಮಾತೆ' ಎಂದು ಕರೆಯುವ ದಿನ ಬರುತ್ತದೆ" ಎಂದು ಸಮಾಧಾನ ಹೇಳಿದ್ದರು. ಆ ನುಡಿಯಂತೆಯೇ ಶ್ರೀಮಾತೆಯ ಹಲವು ಸಹಸ್ರ ಶಿಷ್ಯರು "ಶ್ರೀಮಾತೆ, ಶ್ರೀಮಾತೆ" ಎಂದು ಅವರನ್ನು ಗೌರವದಿಂದ ಕರೆದರು. ಶ್ರೀಮಾತೆಯೂ ತಮ್ಮ ಶಿಷ್ಯರನ್ನು ಮಕ್ಕಳಂತೆಯೆ ವಾತ್ಸಲ್ಯದಿಂದ ಕಂಡರು.

ಶ್ರೀಮಾತೆಯಿಂದ ಮಂತ್ರೋಪದೇಶ ಪಡೆದ ಶಿಷ್ಯನೊಬ್ಬನು, ತಾನು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರೆದಿಲ್ಲವೆಂದು ತಿಳಿದು, ಮಾತೆಯ ಬಳಿಗೆ ಹೋಗುವುದನ್ನೇ ನಿಲ್ಲಿಸಿ ಕಡೆಗೆ, "ನಿಮ್ಮ ಮಂತ್ರವನ್ನು ಹಿಂತಿರುಗಿಸಿದ್ದೇನೆ" ಎಂದು ಪತ್ರ ಬರೆದನು. ಆಗ ಮಾತೆ ಆ ಶಿಷ್ಯನನ್ನು ಕರೆಸಿ, "ಮಗು, ಸೂರ್ಯ ಎತ್ತರದ ಆಕಾಶದಲ್ಲಿ ಪ್ರಕಾಶಿಸುತ್ತಾನೆ. ಅವನು ನೀರನ್ನು ಆವಿಯಾಗಿ ಸ್ವೀಕರಿಸುವುದು ನೀರಿಗೆ ಕಾಣುತ್ತದೆಯೆ? ನಿನ್ನ ಕರ್ತವ್ಯವನ್ನು ನೀನು ಮಾಡು. ಫಲ ತನ್ನ ಕಾಲಕ್ಕೆ ತಾನು ಬರಲಿ. ಫಲಾಪೇಕ್ಷಿಯಾಗಬೇಡ" ಎಂದು ಸದ್ಬುದ್ಧಿಯನ್ನು ಹೇಳಿಕಳುಹಿಸಿದರು.

ಕೆಲವು ಶಿಷ್ಯರಿಂದ ಶ್ರೀಮಾತೆಗೆ ತೊಂದರೆಯೂ ಆಗುತ್ತಿತ್ತು. ಸ್ತ್ರೀಭಕ್ತಳೊಬ್ಬಳು ಶ್ರೀಮಾತೆಯನ್ನು ಬೀಳ್ಕೊಡುವಾಗ, ಅವರ ಪಾದದ ಹೆಬ್ಬೆರಳನ್ನು ಕಚ್ಚಿ ನಮಸ್ಕಾರ ಮಾಡಿದಳು. ನೋವನ್ನುಂಟುಮಾಡಿದ ಆ ಮಹಿಳೆಯನ್ನು "ಏಕೆ ಬೆರಳನ್ನು ಕಚ್ಚಿದೆ?"

ಎಂದು ಪ್ರಶ್ನಿಸಿದಾಗ, “ ಬೆಟ್ಟದ ನೋವಿರುವವರಿಗೆ ನಿಮಗೆ ನನ್ನ ಜ್ಞಾಪಕವಿರುತ್ತದೆ, ಅದಕ್ಕಾಗಿ ಹಾಗೆ ಮಾಡಿದೆ ” ಎಂದು ಹುಚ್ಚು ಉತ್ತರ ಕೊಟ್ಟಳು. ಇಂತಹ ಶಿಷ್ಯರನ್ನೂ ಅವರು ಪಡೆದಿದ್ದರು.

ಪರಮಹಂಸರು ತಮ್ಮ ಭೌತಿಕ ಶರೀರವನ್ನು ತ್ಯಜಿಸಿದ ಬಳಿಕ, ಶ್ರೀಮಾತೆ ಪತಿಯ ಹಿತವಚನದಂತೆ ಕಾಮಾರಪುಕುರಕ್ಕೆ ಹೊರಟುಹೋದರು. ಕೆಲವು ದಿನಗಳ ಬಳಿಕ ಅವರಿಗೆ ಆರ್ಥಿಕವಾಗಿ ಬಹು ಕಷ್ಟ ಬಂದಿತು. ಉಪ್ಪುಕೊಳ್ಳಲು ಕಾಸು ಇರಲಿಲ್ಲ. ಅವರ ಬಳಿ ಚಿಂದಿಯಲ್ಲದೆ ಉಡಲು ಬೇರೆ ಸೀರೆಯೂ ಇರಲಿಲ್ಲ. ಆದರೂ ಶ್ರೀಮಾತೆ ಧೃತಿಗೆಡಲಿಲ್ಲ. ತಮ್ಮ ಕಷ್ಟವನ್ನು ಯಾರಿಗೂ ತಿಳಿಸಲಿಲ್ಲ. ಕಡೆಗೆ ಪರಮಹಂಸರ ಶಿಷ್ಯರಿಗೆ ಶ್ರೀಮಾತೆಯ ಕಷ್ಟಗಳು ತಿಳಿದು ಅವರನ್ನು ಕಲ್ಕತ್ತೆಗೆ ಕರೆತಂದರು. ಅವರು ಕಾಮಾರಪುಕುರವನ್ನು ಬಿಟ್ಟು ಬರುವುದೇ ಇಲ್ಲವೆಂದು ನಿಶ್ಚಯ ಮಾಡಿದ್ದರು. ಕಡೆಗೆ ಶಿಷ್ಯರ ಮೇಲಣ ವಾತ್ಸಲ್ಯದಿಂದ ಅವರು ಕಲ್ಕತ್ತೆಗೆ ಬಂದು ನೆಲಸಿದರು.

ಶ್ರೀಮಾತೆಯ ಬಳಿಗೆ ಅವರ ಬಂಧುಗಳು ಬಂದು ನಾನಾ ಹಿಂಸೆ ಕೊಡುತ್ತಿದ್ದರು. ಶ್ರೀಮಾತೆ ಅವೆಲ್ಲವನ್ನೂ ಶಾಂತಿ, ಕ್ಷಮಾಗುಣ, ಪ್ರೀತಿ, ಸ್ನೇಹಗಳಿಂದ ಎದುರಿಸಿದರು. ಎಂತಹ ಸಂದರ್ಭಗಳಲ್ಲಿಯೂ ಅವರು ತಾಳ್ಮೆಗೆಡಲಿಲ್ಲ. ಅವರ ತಾಯ್ತನದೊಲುಮೆ ಸದಾಕಾಲವೂ ಪ್ರಶಾಂತವಾಗಿ, ನಿಶ್ಚಲವಾಗಿ, ಭಾಗೀರಥಿಯಂತೆ ಹರಿಯಿತು. ಅವರಿಗೆ ಜಾತಿಭೇದವಿರಲಿಲ್ಲ. ಸೋದರಿ ನಿವೇದಿತಾ, ಸೋದರಿ ಕ್ರಿಸ್ಟೀನ್, ಶ್ರೀಮತಿ ಬುಲ್ ಮೊದಲಾದ ಪಾಶ್ಚಿಮಾತ್ಯ ಮಹಿಳೆಯರು ಅವರ ಶಿಷ್ಯರಾಗಿದ್ದರು. ಅವರಿಗೆ ಶ್ರೀಮಂತರು, ಬಡವರು, ವಿದ್ಯಾವಂತರು, ಅವಿದ್ಯಾವಂತರು,

ಸಾತ್ವಿಕರು, ದುಷ್ಟರು—ಎಂಬ ಭೇದವಿರಲಿಲ್ಲ. ಯಾರು ಅವರ ಬಳಿಗೆ ಹೋದರೂ ಅವರಿಗೆ ಸಿಗುತ್ತಿದ್ದುದು ಸ್ನೇಹ, ಪ್ರೀತಿ ಮತ್ತು ವಾತ್ಸಲ್ಯ.

ಒಂದು ದಿನ ಅಹಮದ್‌ಜಾನ್ ಎಂಬ ಶಿಷ್ಯನಿಗೆ ಬಡಿಸಲು ಶ್ರೀಮಾತೆ ತಮ್ಮ ತಮ್ಮನ ಮಗಳಿಗೆ ಹೇಳಿದರು. ಆಕೆ ಮಹಮ್ಮದೀಯನ ಬಳಿಗೆ ಹೋದರೆ ಎಲ್ಲಿ ತನ್ನ ಬ್ರಾಹ್ಮಣ ಜಾತಿಗೆ ಕಲಂಕ ಬರುತ್ತದೆಯೋ ಎಂದು ಹಿಂದೆ ಮುಂದೆ ನೋಡುತ್ತ ದೂರದಿಂದಲೇ ಆಹಾರವನ್ನು ಅವನ ಎಲೆಗೆ ಬಡಿಸುತ್ತಿದ್ದಳು. ಆಗ ಶ್ರೀಮಾತೆ ತಾವೇ ಹೋಗಿ ಅತ್ಯಾದರದಿಂದ ಬಡಿಸಿ, ಕಡೆಗೆ ಅತಿಥಿಯ ಎಲೆಯನ್ನೂ ತಾವೇ ತೆಗೆದು ಶುಚಿಮಾಡಿ, ಆತ ತನ್ನ ಮಗನೆಂಬಂತೆ ತಮ್ಮ ಉದಾರ ಹೃದಯವನ್ನು ತೋರಿದರು.

ಶ್ರೀಮಾತೆ ತಮ್ಮ ಶಿಷ್ಯರೊಡನೆ ನಡೆಸಿದ ಕೆಲವು ಸಂಭಾಷಣೆಗಳಿಂದ ಅವರ ದಿವ್ಯ ಸಂದೇಶದ ಬೆಳಕನ್ನು ಕಾಣಬಹುದು.

ಒಬ್ಬ ಗೃಹಿಣಿ ಭಕ್ತೆ ಮಾತೆಯವರ ಬಳಿಗೆ ಬಂದು, "ತಾಯಿ ನನಗೆ ಐದು ಮಂದಿ ಹೆಣ್ಣು ಮಕ್ಕಳಿದ್ದಾರೆ, ಅವರಲ್ಲಿ ಒಬ್ಬರಿಗೂ ಮದುವೆಯಾಗಿಲ್ಲ. ನನಗೆ ತುಂಬ ಚಿಂತೆಯಾಗಿದೆ" ಎಂದರು.

"ವಿವಾಹವಾಗದಿದ್ದರೆ ಏಕೆ ಚಿಂತೆ? ಅವರನ್ನು ನಿವೇದಿತಾ ಶಾಲೆಗೆ ಕಳುಹಿಸು. ಓದಿ ವಿದ್ಯಾವಂತರಾಗಲಿ"—ಎಂದರು.

ಮತ್ತೊಬ್ಬ ಭಕ್ತ ಮಹಿಳೆ—"ಈಗಿನ ಕಾಲದ ಹುಡುಗರು ಕನ್ಯೆಯ ಮಾತಾಪಿತೃಗಳಿಂದ ತುಂಬ ಹಣ ಬಯಸುತ್ತಾರೆ" ಎಂದರು.

"ಆದುದರಿಂದಲೇ ಈಗಿನ ಕಾಲದ ಹುಡುಗಿಯರಿಗೂ ಜ್ಞಾನೋದಯವಾಗಿ, ಮದುವೆಯಿಲ್ಲದಿದ್ದರೂ, ಇರಬಲ್ಲೆವು ಎನ್ನುತ್ತಿದ್ದಾರೆ. ಪ್ರಾಪಂಚಿಕ ಸುಖ ಕ್ಷಣಿಕ ಎಂಬ ಅರಿವು ಅವರಲ್ಲಿ

ಮೂಡುತ್ತಿದೆ"—ಎಂದು ವಿನೋದವಾಗಿ ನುಡಿದು ಭಕ್ತೆಳನ್ನು ನಗಿಸಿದರು ಶ್ರೀಮಾತೆ.

ಒಂದು ದಿನ ಭಕ್ತರಾದ ಅತ್ತೆ ಸೊಸೆಯರು ಶ್ರೀಮಾತೆಯ ಬಳಿಗೆ ಬಂದು, "ಪ್ರಾಪಂಚಿಕ ಆಸೆಗಳಿಂದ ನಾವಿನ್ನೂ ದೂರವಾಗಿಲ್ಲ; ಏನು ಮಾಡೋಣ? ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಶ್ರೀಮಾತೆ "ನಾವು ಸದಾ ಸತ್ಕರ್ಮದಲ್ಲಿ ತೊಡಗಿದ್ದರೆ ಕ್ರಮೇಣ ನಿಸ್ಸಂಗತೆ ಬರುತ್ತದೆ." ನಿಸ್ಸಂಗತೆಯಿಂದ ಆಶೆ ದೂರವಾಗುತ್ತದೆ ಎಂದರು.

ಶ್ರೀಮಾತೆಯ ಸೋದರ ಸೊಸೆ ನಳಿನಿಗೆ ಅಸಾಧಾರಣವಾದ ಕೋಪವಿತ್ತು. ಅದನ್ನು ಕಂಡು ಶ್ರೀಮಾತೆ "ನೋಡು, ಹೆಂಗಸರು ಕೋಪ ಮಾಡಬಾರದು, ಸಹನೆ ಮತ್ತು ತಾಳ್ಮೆ ಸ್ತ್ರೀಗೆ ಭೂಷಣ. ಬಾಲ್ಯದಲ್ಲಿ ತಂದೆ ತಾಯಿ, ಯೌವನದಲ್ಲಿ ಪತಿ, ವೃದ್ಧಾಪ್ಯದಲ್ಲಿ ಮಕ್ಕಳ ಮನಸ್ಸನ್ನು ಅರಿತು ನಡೆಯಬೇಕು. ಎಷ್ಟೇ ಕಷ್ಟ ಬಂದರೂ ಸ್ತ್ರೀ ಧೃತಿಗೆಡಬಾರದು" ಎಂದು ಹಿತವಚನಗಳನ್ನು ನುಡಿಯುತ್ತಿದ್ದರು.

ಸನ್ಯಾಸಿನಿಯೊಬ್ಬಳು ಶ್ರೀಮಾತೆಯ ಬಳಿಗೆ ಬಂದು "ನಮ್ಮ ಗುರು ವಿಗ್ರಹರಾಧಕರಲ್ಲ, ಅವರು ಅಗ್ನಿ ಮತ್ತು ಸೂರ್ಯರ ಉಪಾಸಕರು. ಇದರಲ್ಲಿ ತಪ್ಪಿದೆಯೆ? ಎಂದು ಪ್ರಶ್ನಿಸಿದಳು.

"ಗುರುಗಳ ಮಾತಿನಲ್ಲಿ ನಂಬಿಕೆ ಇರಬೇಕು. ನನ್ನ ಅಭಿಪ್ರಾಯ ಕೇಳಿರುವುದರಿಂದ ಹೇಳುತ್ತೇನೆ. ಬ್ರಹ್ಮ ಸರ್ವವ್ಯಾಪಿ. ಆವನ ಸಾಕ್ಷಾತ್ಕಾರಕ್ಕೆ ಹಲವು ಪಥಗಳಿವೆ. ನಿರ್ಗುಣೋಪಾಸನೆ, ಸಗುಣೋಪಾಸನೆ" ಎರಡರಿಂದಲೂ ಸಿದ್ಧಿ ಪಡೆದವರಿದ್ದಾರೆ ಎಂದು ನುಡಿದರು ಶ್ರೀಮಾತೆ.

ಒಂದು ದಿನ ಭಗವಂತನ ಸಾಕ್ಷಾತ್ಕಾರದ ವಿಷಯವಾಗಿ ಪ್ರಶ್ನೆ

ಬಂತು. ಆ ವಿಷಯವನ್ನು ಕುರಿತು ಶ್ರೀಮಾತೆ, "ಭಗವಂತನ ಸಾಕ್ಷಾತ್ಕಾರ ಹೇಗೆ ಗೊತ್ತೇ? ಅದು ಮಗುವಿನ ಕೈಯಲ್ಲಿ ಇರುವ ತಿಂಡಿಯಂತೆ! ಕೆಲವರು ಒಂದು ಚೂರು ತಿಂಡಿ ಕೊಡು ಎಂದು ಕಾಡಿದರೂ ಅದು ಕೊಡುವುದಿಲ್ಲ. ಆದರೆ ಅದಕ್ಕೆ ಯಾರ ಮೇಲೆ ಪ್ರೀತಿ ಉಕ್ಕುತ್ತದೆಯೋ ಅವರಿಗೆ ಎಲ್ಲವನ್ನು ಕೊಟ್ಟುಬಿಡುತ್ತದೆ. ಹೆಚ್ಚು ಜಪ ಮಾಡಿದರೆ, ಹೆಚ್ಚು ಸಾಕ್ಷಾತ್ಕಾರ, ಕಡಿಮೆ ಮಾಡಿದರೆ ಕಡಿಮೆ ಎನ್ನುವಂತಿಲ್ಲ. ಎಲ್ಲವೂ ಭಗವಂತನ ಕೃಪೆ. ಅವನು ನೋಡುವುದು ಸಾಧಕನ ಹೃದಯವನ್ನು, ಅವನ ಬಾಹ್ಯವನ್ನಲ್ಲ" ಎಂದು ವಿವರಿಸಿದರು.

ಸನ್ಯಾಸಿಯೊಬ್ಬನು ಶ್ರೀಮಾತೆಯ ಬಳಿಗೆ ಹೋಗಿ, "ತಾಯಿ, ನಾನು ಸಾಧಕ ಆದರೆ ಮನಸ್ಸು ತುಂಬಾ ಚಂಚಲ, ಧ್ಯಾನದ ವೇಳೆಯಲ್ಲಿ ಅನೇಕ ಯೋಚನೆಗಳು ಬಂದು ಹಿಂಸೆಪಡಿಸುತ್ತವೆ. ನನ್ನ ಜೀವನ ವ್ಯರ್ಥ" ಎಂದು ಮರುಗಿದನು.

"ಮಗು ಅಧೀರನಾಗಬೇಡ. ಮೀನು ಹಿಡಿಯುವ ಬೆಸ್ತನಿಗೆ ಯಾವಾಗಲೂ ಮೀನು ಸಿಗುತ್ತದೆಯೆ? ನಿರಾಶೆಯನ್ನು ಬಿಡು. ದೃಢಚಿತ್ತನಾಗಿ ಸಾಧನೆ ಮಾಡು. ಮೊದಲು ಮೊದಲು ಮನಸ್ಸು ಏಕಾಗ್ರವಾಗುವುದು ಕಷ್ಟ. ಕ್ರಮೇಣ ಸಿದ್ಧಿ ಲಭಿಸುತ್ತದೆ, ದುಃಖಿಸಬೇಡ" ಎಂದು ಸಂತೈಸಿದರು.

ಭಕ್ತನೊಬ್ಬನು ಮಾತೆಯ ಬಳಿಗೆ ಬಂದು, "ಹಿಂದೂಶಾಸ್ತ್ರದಂತೆ ಸತಿಗೆ ಪತಿಯೇ ಪೂಜನೀಯ ವ್ಯಕ್ತಿ. ಅವನ ಸೇವೆಯಿಂದಲೇ ಅವಳ ಜೀವನ ಪಾವನ. ಆದರೆ ಪತಿ ಕಡು ಲೌಕಿಕನಾಗಿದ್ದಾಗ, ಸತಿ ಅವನ ಬಯಕೆಗೆ ವಿರುದ್ಧವಾಗಿ ಆಧ್ಯಾತ್ಮಿಕ ಸಾಧನೆ ಮಾಡಿ, ಸಂಯಮಿಯಾದರೆ ಅದು ಪಾಪವೆ?" ಎಂದು ಪ್ರಶ್ನಿಸಿದನು.

"ಖಂಡಿತ ಪಾಪವಿಲ್ಲ. ಆತ್ಮ ಸಾಕ್ಷಾತ್ಕಾರಕ್ಕಾಗಿ ಯಾವ ಸಾಧನೆ ಮಾಡಿದರೂ ಪಾಪವಿಲ್ಲ. ಸ್ತ್ರೀಯರಿಗೆ ಸಂಯಮವೇ ಭೂಷಣ" ಎಂದರು ಶ್ರೀಮಾತೆ.

"ಜಗತ್ತಿನಲ್ಲಿ ಕಷ್ಟವೇಕಿದೆ?" ಎಂದು ಭಕ್ತನೊಬ್ಬನು ಪ್ರಶ್ನಿಸಿದನು.

"ಕಷ್ಟವೂ ದೇವರ ಕೃಪೆ. ಆ ಕಷ್ಟ ಸೇತುವೆಯ ಕೆಳಗಡೆ ಹರಿವ ನೀರಿನಂತೆ. ಯಾರು ಸದಾ ಕಷ್ಟದಲ್ಲಿರುವುದಿಲ್ಲ. ವ್ಯಕ್ತಿಗೆ ತಿಳಿಯದಂತೆ ಸುಖವೂ ತನ್ನ ಸರದಿಯಲ್ಲಿ ಬರುತ್ತದೆ" ಎಂದರು ಶ್ರೀಮಾತೆ.

"ದೇವರ ಕೃಪೆ ಸೂರ್ಯನ ಬೆಳಕಿನಂತೆ ಎಲ್ಲರ ಮೇಲೂ ಬೀಳುತ್ತದೆಯಲ್ಲವೆ?" ಹೀಗಿರುವಾಗ ಜಪತಪಗಳೇಕೆ?" ಎಂದು ಪ್ರಶ್ನಿಸಿದಾಗ—

"ಪದಾರ್ಥಗಳು ಇದ್ದರೆ, ಆಹಾರ ಸಿದ್ಧವಾಗುತ್ತದೆಯೆ? ಪದಾರ್ಥಗಳನ್ನು ಉಪಯೋಗಿಸಿ, ಅಡುಗೆ ಮಾಡಿದವರು ಊಟ ಮಾಡಿ ಸಂತೋಷವಾಗಿರುತ್ತಾರೆ. ಅಡುಗೆ ಮಾಡದವರು ಹಸಿವಿನಿಂದ ಇರಬೇಕಾಗುತ್ತದೆ" ಎಂದರು ಶ್ರೀಮಾತೆ.

ಕಷ್ಟದಲ್ಲಿ ಬೆಂದು ನೊಂದು ತಮ್ಮ ಬಳಿಗೆ ಬರುತ್ತಿದ್ದ ಅನೇಕ ತಪ್ತ ಹೃದಯಕ್ಕೆ ತಮ್ಮ ಆಧ್ಯಾತ್ಮಿಕ ತಪಸ್ಸಿನ ಅದ್ಭುತ ಶಕ್ತಿಯಿಂದ ಸಾಂತ್ವನ ನೀಡಿದರು ಶ್ರೀಮಾತೆ. ಅವರು 1920, ಜುಲೈ 20ರಂದು ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿದರು.

ದೇಹವನ್ನು ತ್ಯಜಿಸುವ ಕೆಲವು ದಿನಗಳ ಮೊದಲು, ಶ್ರೀಮಾತೆ ಸ್ತ್ರೀ ಭಕ್ತರೊಬ್ಬರಿಗೆ ಹೇಳಿದ ನುಡಿಗಳಿವು :

"ಈ ಜಗತ್ತೆಲ್ಲ ನಿಮ್ಮದೆಂದೇ ಭಾವಿಸಿ. ಜಗತ್ತಿನ ಅಭ್ಯುದಯಕ್ಕಾಗಿ ಸೇವೆ ಮಾಡಿ. ಈ ಜಗತ್ತಿನ ಸರ್ವರನ್ನೂ ಪ್ರೀತಿಸಿ."

ವಿಶ್ವಪ್ರೇಮವೇ ಉಸಿರಾಗಿ, ಮಾನವ ಕಲ್ಯಾಣವನ್ನೇ ತಮ್ಮ ಜೀವನದ ಆದರ್ಶವಾಗಿಟ್ಟುಕೊಂಡು ಬಾಳಿದ ಶ್ರೀಮಾತೆಯ ಜೀವನ ಹಾಗೂ ಅವರ ಸಂಭಾಷಣೆಗಳ ಅಧ್ಯಯನದಿಂದ ಸ್ಫೂರ್ತಿ ದೊರಕುವುದಲ್ಲದೆ, ಜೀವನದಲ್ಲಿ ಹೊಸ ಸೀಮಾರೇಖೆ ಗೋಚರಿಸುತ್ತದೆ.

7. ಕರ್ಣಾಟಕದಲ್ಲಿ:

ಕರ್ಣಾಟಕದಲ್ಲಿ ಅನೇಕ ಮಹಿಳೆಯರು ಧಾರ್ಮಿಕ ಜೀವನದಿಂದ ಪುನೀತರಾದರು. ಅವರಲ್ಲಿ ಕೇವಲ ಅಕ್ಕಮಹಾದೇವಿ ಮತ್ತು ಅತ್ತಿಮಬ್ಬೆ—ಇವರ ಜೀವನದ ರೂಪರೇಖೆಗಳನ್ನು ಚಿತ್ರಿಸಲು ಇಲ್ಲಿ ಯತ್ನಿಸಿದೆ.

ಅಕ್ಕಮಹಾದೇವಿ:

ಕರ್ಣಾಟಕದಲ್ಲಿ ಹನ್ನೆರಡನೆಯ ಶತಮಾನವನ್ನು ಕ್ರಾಂತಿಯುಗವೆಂದು ಕರೆಯುವುದುಂಟು. ಈ ಕಾಲದ ಸಾಮಾನ್ಯರಲ್ಲಿಯೂ ಧಾರ್ಮಿಕ ಜಾಗೃತಿಯುಂಟಾಯಿತು. ಅನೇಕ ಶಿವಶರಣರೂ, ಶರಣೆಯರೂ ತಮ್ಮ ಬದುಕನ್ನು ಪಾವನಮಾಡಿಕೊಂಡು, ಸಮಾಜವನ್ನು ಎಚ್ಚರಿಸಿದರು. ಅಲ್ಲಮ, ಬಸವಣ್ಣ ಮೊದಲಾದ ಮಹಾಪುರುಷರು ತಮ್ಮ ಸಾಧನೆಯ ಬೆಳಕಿನಿಂದ ಅನೇಕರಿಗೆ ಬೆಳಕನ್ನು ತೋರುವ ಬೆಳಕಾದರು.

ಅಕ್ಕಮಹಾದೇವಿ ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ಉಡುತಡಿ ಎಂಬ ಗ್ರಾಮದಲ್ಲಿ. ತಂದೆ ನಿರ್ಮಲಶೆಟ್ಟಿ, ತಾಯಿ ಸುಮತಿ. ಅಪೂರ್ವ ಸೌಂದರ್ಯದಿಂದ ವಿರಾಜಿಸುವ ಅಕ್ಕಮಹಾದೇವಿ ಯುವತಿಯಾದಳು. ಯೌವನದೊಡನೆ ಅವಳ ಭಗವದ್ಭಕ್ತಿಯೂ ಬೆಳೆಯಿತು. ಒಂದು ದಿನ ರಾಜನಾದ ಕೌಶಿಕನು ಮೆರವಣಿಗೆಯಲ್ಲಿ ಆನೆಯ ಮೇಲೆ ಕುಳಿತು ಹೋಗುತ್ತಿದ್ದಾಗ, ಸುರಸುಂದರಿಯಾದ ಅಕ್ಕಮಹಾದೇವಿಯನ್ನು ಕಂಡು ಚಕಿತನಾದನು. ಮಂತ್ರಿಗಳನ್ನು ಕರೆದು ಆ ಕನ್ಯೆಯನ್ನು ಮದುವೆಯಾಗುವ ಅಭಿಲಾಷೆಯನ್ನು ವ್ಯಕ್ತಪಡಿಸಿದನು. ಮಂತ್ರಿಗಳು ಅಕ್ಕಮಹಾದೇವಿಯ ತಂದೆಯ ಹತ್ತಿರ ಸಂಧಾನಕ್ಕೆ ಹೊರಟರು. ಅದನ್ನು ಕೇಳಿದ ಮಹಾದೇವಿ, ಭಕ್ತನಲ್ಲದ ಕೌಶಿಕನೊಡನೆ ವಿವಾಹವಾಗುವುದು ಸಲ್ಲದು ಎಂದಳು. ಕಡೆಗೆ ಮಂತ್ರಿಗಳ ಬಲಾತ್ಕಾರಕ್ಕೆ ಮಣಿದು, ತಂದೆ ಮಗಳನ್ನು ಕೌಶಿಕನಿಗೆ ಕೊಟ್ಟು ವಿವಾಹಮಾಡಬೇಕಾಯಿತು. ವಿವಾಹಕ್ಕೆ ಮೊದಲು, "ಧಾರ್ಮಿಕ ಚರ್ಚೆಗಳಲ್ಲಿ ಭಾಗವಹಿಸಲು ಸ್ವಾತಂತ್ರ್ಯವಿರಬೇಕು. ಶಿವಭಕ್ತರಿಗೆ ದಾನಧರ್ಮ ಮಾಡಲು ಸ್ವಾತಂತ್ರ್ಯವಿರಬೇಕು" ಎಂಬ ನಿಯಮ ಮಾಡಿಕೊಂಡು ಮಹಾದೇವಿಯಕ್ಕ ಕೌಶಿಕನನ್ನು ಮದುವೆಯಾದಳು. ಕ್ರಮೇಣ ಕೌಶಿಕನು ಆ ನಿಯಮವನ್ನು ಉಲ್ಲಂಘಿಸಲು, ನೊಂದ ಮಹಾದೇವಿಯಕ್ಕ ಅರಮನೆಯನ್ನು ತೊರೆದು ವಿರಕ್ತಳಾದಳು. ನಿರ್ಭೀತಳಾಗಿ ಸಂಚರಿಸುತ್ತ ಕಡೆಗೆ ಕಲ್ಯಾಣಕ್ಕೆ ಹೋಗಿ, ಬಸವಣ್ಣ ಮತ್ತು ಅಲ್ಲಮಪ್ರಭುಗಳನ್ನು ಸಂದರ್ಶಿಸಿದಳು. ಅನುಭವದಿಂದ ಪ್ರೇರಿತಳಾಗಿ ಹಲವು ವಚನಗಳನ್ನು ಹಾಡಿದಳು. ಕಡೆಗೆ ಶ್ರೀಶೈಲಕ್ಕೆ ಹೋಗಿ ಅಲ್ಲಿ ಲಿಂಗೈಕ್ಯಳಾದಳು.

ಮಹಾದೇವಿಯಕ್ಕನ ವಚನಗಳಲ್ಲಿ ಸರಳತೆ, ಗಾಂಭೀರ್ಯ,

ಅನುಭವ, ಕಾವ್ಯ ಸೌಂದರ್ಯ ಎಲ್ಲವೂ ಮಿಳಿತವಾಗಿವೆ. ನಿದರ್ಶನಕ್ಕಾಗಿ ಒಂದು ವಚನವನ್ನು ಇಲ್ಲಿ ಕೊಟ್ಟಿದೆ.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ ?
ಸಮುದ್ರದ ತಡಿಯಲ್ಲಿ ಮನೆಯ ಮಾಡಿ
ನೆರೆತೊರೆಗಳಿಗಂಜಿದೊಡೆಂತಯ್ಯ ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದೊಡೆ
ಮನದಲ್ಲಿ ಸಮಾಧಾನಿಯಾಗಿರದಿರ್ದೊಡೆಂತಯ್ಯ ?

ಮಹಾದೇವಿಗೆ ಲೋಕ ಪರಿಜ್ಞಾನ ಪಾರಮಾರ್ಥಿಕ ಜ್ಞಾನ— ಎರಡೂ ಕರತಲಾಮಲಕ. ಅವಳ ಸೂಕ್ಷ್ಮ ಗ್ರಹಣ ಶಕ್ತಿ ಹಾಗೂ ಲೋಕಾತೀತವಾದ ಪರಮಜ್ಞಾನ, — ಎಲ್ಲವೂ ಅವಳ ಕಾವ್ಯಕ್ಕೆ ಶೋಭೆಯನ್ನುಂಟುಮಾಡಿವೆ. ಅವಳ ವಿರಕ್ತ ಮನಸ್ಸು, ಒಂದು ವಚನದಲ್ಲಿ ಸುಂದರವಾಗಿ ಪ್ರತಿಬಿಂಬಿತವಾಗಿದೆ:

ಹಸಿವಾದೆಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆಹಳ್ಳಬಾವಿಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಚೆನ್ನಮಲ್ಲಿಕಾರ್ಜುನಯ್ಯ,
ಆತ್ಮಸಂಗಾತಕ್ಕೆ ನೀನೆನಗುಂಟು

ಅಕ್ಕಮಹಾದೇವಿಯ ಸಂಪೂರ್ಣ ಸಮರ್ಪಣಭಾವ ಇಲ್ಲಿ ಸುಪ್ರಕಟ. ಅವಳು ಯಾವ ಬಂಧನಕ್ಕೂ ಒಳಗಾಗದೆ, ಎಲ್ಲವನ್ನೂ ಇಷ್ಟದೇವತೆಗೆ ಅರ್ಪಿಸಿದ ಮುಕ್ತಳು. ಕರ್ಣಾಟಕದ ಮಹಿಳಾ ಭಕ್ತ ಅನುಭಾವಿಗಳಲ್ಲಿ ಅವಳು ಅಗ್ರಗಣ್ಯಳು. ಅವಳ ವಚನಗಳು ಇಂದಿಗೂ ಅವಳ ಧಾರ್ಮಿಕ ದೃಷ್ಟಿಯನ್ನು ಸುಪ್ರಕಟಗೊಳಿಸುವ ಸಾಕ್ಷಿಗಳು.

ಅತ್ತಿಮಬ್ಬೆ :

ಕ್ರಿ. ಶ. ಹತ್ತನೆಯ ಶತಮಾನದಲ್ಲಿ ಚಾಲುಕ್ಯ ಚಕ್ರವರ್ತಿ ಎರಡನೆ ತೈಲಪನು ಆಳುತ್ತಿದ್ದಾಗ, ಅವನ ಆಸ್ಥಾನದಲ್ಲಿ ಮಲ್ಲಪಯ್ಯನೆಂಬ ಸೈನ್ಯಾಧಿಕಾರಿಯು, ವಿದ್ವಾಂಸನೂ, ಧರ್ಮಿಷ್ಠನೂ ಆಗಿದ್ದನು. ಅವನ ಪುತ್ರಿಯರು ಅತ್ತಿಮಬ್ಬೆ ಮತ್ತು ಗುಂಡಮಬ್ಬೆ. ಈ ಇಬ್ಬರು ಕನ್ಯೆಯರು ಧಲ್ಲಪನ ಮಗನಾದ ನಾಗದೇವನನ್ನು ಮದುವೆಯಾದರು. ತೈಲಪನ ಬಳಿ ಸೈನ್ಯಾಧಿಕಾರಿಯಾದ ನಾಗದೇವನು ಯುದ್ಧದಲ್ಲಿ ಭಾಗವಹಿಸಿದಾಗ ಅಕಾಲ ಮರಣಕ್ಕೆ ಗುರಿಯಾದನು. ಗುಂಡಮಬ್ಬೆ ಸತಿಯನ್ನು ಆಚರಿಸ ಬಾರದೆಂದು ಎಲ್ಲರೂ ಬಲಾತ್ಕಾರ ಮಾಡಿದುದರಿಂದ,. ಚಿಕ್ಕ ಮಗುವಿನ ರಕ್ಷಣೆಗಾಗಿ ಅವಳು ಬದುಕಿದಳು. ಅತ್ತಿಮಬ್ಬೆಗೆ, ಜೈನ ಧರ್ಮದಲ್ಲಿ ಅತಿಶಯವಾದ ಭಕ್ತಿ ಗೌರವಗಳಿದ್ದವು, ಪೊನ್ನಕವಿ ರಚಿಸಿದ ಶಾಂತಿ ಪುರಾಣದ ಸಹಸ್ರ ಪ್ರತಿಗಳನ್ನು ಮಾಡಿಸಿ, ಎಲ್ಲರಿಗೂ ಉಚಿತವಾಗಿ ನೀಡಿ, ಧರ್ಮಪ್ರಸಾರ ಮಾಡಿದಳು. ರನ್ನಕವಿಗೆ ಪ್ರೋತ್ಸಾಹ ನೀಡಿ, ಅವನಿಂದ ಅಜಿತ ಪುರಾಣವನ್ನು ಬರೆಸಿದಳು. ಆಗ ಚಕ್ರವರ್ತಿಯಾದ ತೈಲನೂ ಅತ್ತಿಮಬ್ಬೆಯ ವಿಚಾರದಲ್ಲಿ ಗೌರವ ತೋರಿದನು. ಅವಳಿಗೆ "ದಾನಚಿಂತಾಮಣಿ"

ಎಂಬ ಬಿರುದು ಬಂದಿತು. ಆ ಬಿರುದಿಗೆ ಅವಳು ಯೋಗ್ಯಳಾಗಿದ್ದಳು. ಅವಳು ಒಂದು ಸಾವಿರದ ಐನೂರು ಚಿನ್ನದ ಜಿನ ವಿಗ್ರಹಗಳನ್ನು ಮಾಡಿಸಿ ದಾನ ಮಾಡಿದಳು. ಅವಳು ಹಲವು ಜೈನ ಬಸದಿಗಳನ್ನೂ ಕಟ್ಟಿಸಿದಳೆಂದು ತಿಳಿದು ಬರುತ್ತದೆ. ಅತ್ತಿಮಬ್ಬೆ ಜೀವನದ ಕಷ್ಟಕ್ಲೇಶಗಳನ್ನು ಧೈರ್ಯವಾಗಿ ಎದುರಿಸಿ, ಸಾಧಕಳಾಗಿ ಜೀವನವನ್ನು ಪಾವನ ಮಾಡಿಕೊಂಡಳು.

8. ತಮಿಳುನಾಡಿನಲ್ಲಿ :

ತಮಿಳುನಾಡಿನಲ್ಲಿಯೂ ಅನೇಕ ಮಹಿಳೆಯರು ಧರ್ಮಮಾರ್ಗದಲ್ಲಿ ಸಾಧಕರಾಗಿ ಇಂದಿಗೂ ಜನಮನದಲ್ಲಿ ಗೌರವಕ್ಕೆ ಭಾಜನರಾಗಿದ್ದಾರೆ. ಇಲ್ಲಿ ಕಾರೈಕ್ಕಾಲ್ ಅಮ್ಮೈಯಾರ್ ಮತ್ತು ಆಂಡಾಳ್, ಇವರಿಬ್ಬರ ಜೀವನದ ರೂಪರೇಖೆಗಳನ್ನು ಮಾತ್ರ ಚಿತ್ರಿಸಿದೆ.

ಕಾರೈಕ್ಕಾಲ್ ಅಮ್ಮೈಯಾರ್ :

ಕಾರೈಕ್ಕಾಲ್ ಪ್ರದೇಶದಲ್ಲಿ ಶ್ರೀಮಂತ ವೈಶ್ಯರ ಮನೆಯಲ್ಲಿ ಪುನೀತಮತಿ ಎಂಬ ಹೆಣ್ಣು ಮಗು ಜನಿಸಿತು. ಚಿಕ್ಕಂದಿನಿಂದಲೂ ಅವಳು ದೈವಭಕ್ತೆ. ಅವಳು ಪ್ರಾಪ್ತ ವಯಸ್ಸಿನಲ್ಲಿ ವರ್ತಕನೊಬ್ಬನನ್ನು ವಿವಾಹವಾದಳು. ಒಂದು ದಿನ ಅವಳ ಪತಿ ಎರಡು ಮಾವಿನ ಹಣ್ಣುಗಳನ್ನು ತಂದು ಕೊಟ್ಟನು. ಆಗ ಶೈವ ಪಂಥಕ್ಕೆ ಸೇರಿದ ಸನ್ಯಾಸಿಯೊಬ್ಬನು ಭಿಕ್ಷೆಗಾಗಿ ಬಂದಾಗ, ಪುನೀತಮತಿ ಒಂದು ಹಣ್ಣನ್ನು ಅವನಿಗೆ ದಾನ ಮಾಡಿದಳು. ಪತಿಯು ಮನೆಗೆ ಬಂದಾಗ, ಒಂದು ಮಾವಿನ ಹಣ್ಣನ್ನು ಕೊಟ್ಟಳು. ಇನ್ನೊಂದು ಹಣ್ಣನ್ನು ಅವನು ಕೇಳಿದಾಗ, ಅವಳಿಗೆ ಭಯವಾಗಿ ಈಶ್ವರನನ್ನು

ಪ್ರಾರ್ಥಿಸಿದಾಗ, ಇನ್ನೊಂದು ಹಣ್ಣು ಗೋಚರಿಸಿತು. ಆ ಹಣ್ಣನ್ನು ಪತಿಗೆ ಕೊಟ್ಟಳು. ಆ ಹಣ್ಣಿನ ರುಚಿಯಲ್ಲಿ ವಿಶೇಷತೆ ಇದ್ದುದರಿಂದ ಅದು ಎಲ್ಲಿಯದು? ಎಂದು ಅವನು ಪ್ರಶ್ನಿಸಿದಾಗ, ಅವಳು ನಡೆದುದೆಲ್ಲವನ್ನೂ ನೇರವಾಗಿ ವಿವರಿಸಿದಳು. ಆಗ ಅವನು ಮತ್ತೊಂದು ಹಣ್ಣು ಬೇಕೆಂದು ಕೇಳಿದನು. ಅವಳು ಪುನಃ ಪ್ರಾರ್ಥಿಸಿ ಮತ್ತೊಂದನ್ನು ಪತಿಗೆ ತಂದು ಕೊಟ್ಟಳು. ಆಗ ಅವನಿಗೆ ತನ್ನ ಪತ್ನಿ ಅಸಾಮಾನ್ಯಳೆಂದು ಗೋಚರವಾಗಿ, ಅವಳೊಡನೆ ಸಂಸಾರ ಮಾಡವುದು ಯೋಗ್ಯವಲ್ಲವೆಂದು ತಿಳಿದು ಪಾಂಡ್ಯರಾಜ್ಯಕ್ಕೆ ಹೋಗಿ ನೆಲಸಿದನು. ಅಲ್ಲಿ ಅವನು ಬೇರೊಬ್ಬಳನ್ನು ಮದುವೆಯಾದನು.

ಪುನೀತಮತಿ ತನ್ನ ಗಂಡನಿಗಾಗಿ ಪರಿತಪಿಸುತ್ತ, ಕಡೆಗೆ ಅವನ ವೃತ್ತಾಂತವನ್ನು ತಿಳಿದು ಪಾಂಡ್ಯರಾಜ್ಯಕ್ಕೆ ಹೋಗಿ, ತನ್ನ ಪತಿಯೊಡನೆ ವಾಸಿಸಲು ಅನುಮತಿ ಬೇಡಿದಳು. ಆಗ ಅವನೂ, ಅವನ ಪತ್ನಿಯೂ, ಅವರ ಮಗಳೂ, ಪುನೀತಮತಿಗೆ ಪ್ರಣಾಮ ಮಾಡಿ, ಅವಳು ದೇವತೆಯೆಂದು ಸಾರಿದರು. ಆಗ ಪುನೀತಮತಿ ಸರ್ವಸಂಗ ಪರಿತ್ಯಾಗಿಯಾಗಿ, ದೈವಭಕ್ತಳಾಗಿ ಸಂಚರಿಸತೊಡಗಿದಳು. ತನ್ನ ಸೌಂದರ್ಯವೆಲ್ಲ ಲುಪ್ತವಾಗಲೆಂದು ದೇವರನ್ನು ಪ್ರಾರ್ಥಿಸಿದಳು. ಅವಳು ಶಿವನನ್ನು ಸ್ತುತಿಸುತ್ತ ಎಲ್ಲೆಡೆ ಸಂಚರಿಸಿ, ಕಾರೈಕ್ಕಾಲ್ ಅಮ್ಮೈಯಾರ್ ಎಂಬ ಹೆಸರಿನಲ್ಲಿ ಖ್ಯಾತಳಾದಳು. ಏಳನೆಯ ಶತಮಾನದಲ್ಲಿ ಖ್ಯಾತರಾದ ಸಂಬಂಧರ್ ಕೂಡ ಈ ಮಹಿಳೆಯನ್ನೂ ಆಕೆ ರಚಿಸಿದ ಗೀತೆಗಳನ್ನೂ ಜ್ಞಾಪಿಸಿದ್ದಾರೆ. ಅವಳ ಹೆಸರು ಇಂದಿಗೂ ತಮಿಳುನಾಡಿನಲ್ಲಿ ಜನಜನಿತವಾಗಿದೆ.

ಆಂಡಾಳ್ :

ವಿಲ್ಲಿಪುತ್ತೂರಿನಲ್ಲಿ ವಿಷ್ಣುಚಿತ್ತರೆಂಬ ಭಕ್ತರು ವಾಸಿಸುತ್ತಿದ್ದರು. ಅವರು ದಿನವೂ ವಿಷ್ಣುವಿಗೆ ಮಾಲೆಗಳನ್ನು ಕಟ್ಟಿ ಅರ್ಪಿಸುತ್ತಿದ್ದರು. ಒಂದು ದಿನ ಅವರಿಗೆ ತುಲಸಿಯ ಗಿಡದ ಬುಡದಲ್ಲಿ ಬುಟ್ಟಿಯೊಂದರಲ್ಲಿ ಸುಂದರವಾದ ಹೆಣ್ಣುಮಗು ಗೋಚರವಾಯಿತು. ಮಕ್ಕಳಿಲ್ಲದ ವಿಷ್ಣುಚಿತ್ತರು ಆ ಮಗುವನ್ನು ತಮ್ಮ ಮಗಳಂತೆಯೇ ಬೆಳೆಸಿದರು. ಶಿಶುವಿಗೆ ಕೋಡ್ಡೈ, (ಗೋದಾ) ಎಂದು ನಾಮಕರಣ ಮಾಡಿದರು. ಕೋಡ್ಡೈ ಪದಕ್ಕೆ ತಮಿಳಿನಲ್ಲಿ ಚೆಲುವಾದ ಕೂದಲು, ಹಾರ, ಸುಂದರ ಕಣ್ಣಿನ ಹೆಣ್ಣು ಇತ್ಯಾದಿ ಅರ್ಥವಿದೆ. ಗೋದಾ ಎಂಬ ಸಂಸ್ಕೃತ ಪದಕ್ಕೆ ಭೂಮಿಯಿಂದ ದತ್ತಳಾಗಿ ಬಂದವಳು ಎಂಬ ಅರ್ಥವಿದೆ. ಭಗವದ್ಭಕ್ತರಾದ ವಿಷ್ಣುಚಿತ್ತರ ಮನೆಯಲ್ಲಿ ಕೋಡ್ಡೈ ಅವರ ಸಾಕು ಮಗಳಾಗಿ ಬೆಳೆದು ಭಗವದ್ಭಕ್ತಳಾದಳು. ಚಿಕ್ಕ ವಯಸ್ಸಿನಲ್ಲಿಯೇ ಅವಳಿಗೆ ಭಗವಂತನಾದ ಶ್ರೀ ಕೃಷ್ಣನನ್ನು ವಿವಾಹವಾಗಬೇಕೆಂಬ ಆಶಯ ಅವಳ ಮನಸ್ಸಿನಲ್ಲಿ ಬೇರೂರಿತು. ಅವನನ್ನೇ ತಾನು ಮದುವೆಯಾದಂತೆ ಕನಸು ಕಂಡಳು.

ವಿಷ್ಣುಚಿತ್ತರು ದಿನವೂ ವಿಷ್ಣುವಿಗೆ ಅರ್ಪಿಸಲು ತುಳಸಿಯ ಮಾಲೆಯನ್ನು ಕಟ್ಟಿ ಸಿದ್ಧಮಾಡುತ್ತಿದ್ದರು. ಆಗ ಬಾಲಕಿಯಾದ ಕೋಡ್ಡೈ, ತಂದೆಗೆ ಕಾಣದಂತೆ ಆ ಮಾಲೆಯನ್ನು ಧರಿಸಿ, ಕನ್ನಡಿಯಲ್ಲಿ ನೋಡಿಕೊಂಡು, ತಾನು ಶ್ರೀ ಕೃಷ್ಣನಿಗೆ ಯುಕ್ತ ವಧುವೆಂದು ಆನಂದಪರವಶಳಾಗುತ್ತಿದ್ದಳು. ಬಳಿಕ ಆ ಹಾರವನ್ನು ಮೊದಲ ಸ್ಥಾನದಲ್ಲಿ ಇಡುತ್ತಿದ್ದಳು. ವಿಷ್ಣುಚಿತ್ತರು ಕೋಡ್ಡೈ ಮುಡಿದುಬಿಟ್ಟ ಹಾರವನ್ನೇ ವಿಷ್ಣುವಿಗೆ ಅರ್ಪಿಸಿ ಪೂಜಿಸು

ತ್ತಿದ್ದರು. ಒಂದು ದಿನ ಮಗಳ ಚೆಲ್ಲಾಟವನ್ನು ನೋಡಿ, ಮಗಳಿಗೆ ಅಂಥ ಅವಿವೇಕ ಮಾಡಬಾರದೆಂದು ಬುದ್ಧಿ ಹೇಳಿದರು. ಅಂದು ಆ ಹಾರವನ್ನು ಅವರು ವಿಷ್ಣುವಿಗೆ ಅರ್ಪಿಸಲಿಲ್ಲ. ಅಂದಿನ ರಾತ್ರಿ ವಿಷ್ಣು ಅವರಿಗೆ ಕನಸಿನಲ್ಲಿ ಕಾಣಿಸಿಕೊಂಡು, ಕೋಡೈ ಮುಡಿದ ಮಾಲೆಯೇ ತನಗೆ ಪ್ರಿಯವೆಂದನು. ಬಳಿಕ ಅವರು ಕೋಡೈ ಮುಡಿದು ಬಿಟ್ಟ ಹಾರವನ್ನೇ ಅರ್ಪಿಸಿದರು. ಅವಳಿಗೆ ಶೂಡಿ ಕೊಡುತ್ತ ನಾಚ್ಚಿಯಾರ್ (ಮುಡಿದುಕೊಟ್ಟ ನಾಯಕಿ) ಎಂಬ ಹೆಸರಾಯಿತು. ತಂದೆಗೆ ಮಗಳಲ್ಲಿ ಭಕ್ತಿ ಬೆಳೆಯಿತು. ಭಗವಂತನಿಗೆ ಆಂಡವನ್, ಆಂಡಾನ್ (ಆಳುವವನು) ಎಂಬ ಹೆಸರಿದೆ. ಆಂಡಾನ್, ಅವನ ರಾಣಿ ಆಂಡಾಳ್. ಆಂಡಾಳ್ ಎಂದರೆ ಆಳುವವಳು. ಕೋಡೈ, ಆಂಡಾಳ್ ಆದಳು.

ಆಂಡಾಳ್ ಬೆಳೆದಂತೆ ಅವಳ ಜ್ಞಾನವೂ ಬೆಳೆಯಿತು. ಅವಳ ಭಕ್ತಿ ಜ್ಞಾನಗಳು ಅವಳು ರಚಿಸಿದ ತಿರುಪ್ಪಾವೈ, ನಾಚ್ಚಿಯಾರ್ ತಿರುಮೊೞಿ— ಇವುಗಳಲ್ಲಿ ಸುಂದರವಾಗಿ ಅಭಿವ್ಯಕ್ತವಾಗಿದೆ. ಕಡೆಗೆ ಆಂಡಾಳ್ ಶ್ರೀರಂಗದ ರಂಗನಾಥ ವಿಗ್ರಹಗಳಲ್ಲಿ ಐಕ್ಯಳಾದಳೆಂದು ಉಲ್ಲೇಖವಿದೆ.

9. ಮಹಾರಾಷ್ಟ್ರದಲ್ಲಿ :

ಮುಕ್ತಾಬಾಯಿ, ಜನಾಬಾಯಿ, ಕಾನ್ಹೋಪಾತ್ರ, ಬಹಿಣಾಬಾಯಿ, ವೇಣಾಬಾಯಿ, ಅಕ್ಕಾಬಾಯಿ—ಮೊದಲಾದ ಅನೇಕ ಮಹಿಮಾನ್ವಿತರಾದ ಮಹಿಳೆಯರು ಮಹಾರಾಷ್ಟ್ರದಲ್ಲಿ ಜನ್ಮತಾಳಿ, ಜೀವನದಲ್ಲಿ ಹೊಸಬೆಳಕನ್ನು ಗೋಚರಿಸುವಂತೆ ಮಾಡಿದರು. ಅವರ ಜೀವನ ವೃತ್ತಾಂತ ಇಂದಿಗೂ ಸ್ಫೂರ್ತಿದಾಯಕವಾಗಿದೆ. ಅವರ ಬಾಳಿನ ಆದರ್ಶ ಹಲವರಿಗೆ ದೀಪಧಾರಿ.

ಮುಕ್ತಾಬಾಯಿ :

ನಿವೃತ್ತಿನಾಥ, ಜ್ಞಾನೇಶ್ವರ, ಸೋಪಾನ, ಮುಕ್ತಾಬಾಯಿ, ಏಕನಾಥ, ನಾಮದೇವ, ಮತ್ತು ತುಕಾರಾಂ—ಇವರು ಮಹಾರಾಷ್ಟ್ರದಲ್ಲಿ ಪ್ರಾತಃಸ್ಮರಣೀಯರು. ಈಗಲೂ ವಾರಕರಿ ಸಂಪ್ರದಾಯದ ಭಕ್ತರು ಪಂಡರಪುರದಲ್ಲಿ ಈ ಮಹಿಮಾನ್ವಿತರ ಅಭಂಗಗಳನ್ನೂ, ಗೀತೆಗಳನ್ನೂ ಭಕ್ತಿಪೂರ್ಣವಾಗಿ ಹಾಡುತ್ತಾರೆ. ಹದಿಮೂರನೆಯ ಶತಮಾನದ ಆದಿಯಲ್ಲಿ ನಿವೃತ್ತನಾಥ, ಜ್ಞಾನೇಶ್ವರ, ಸೋಪಾನ, ಮುಕ್ತಾಬಾಯಿ–ಇವರು ಮಹಾರಾಷ್ಟ್ರದಲ್ಲಿ ಬದುಕಿದರು. ಅವರ ತಂದೆ ಸಿದ್ಧೋಪಂತ ವಿವಾಹವಾದ ಬಳಿಕ ಸನ್ಯಾಸಿಯಾಗಿ ಅನಂತರ ಗೃಹಸ್ಥನಾಗಿ ಮಕ್ಕಳನ್ನು ಪಡೆದು ಸಮಾಜದಿಂದ ತಿರಸ್ಕೃತನಾದ ವ್ಯಕ್ತಿ. ತಾಯಿ ರಖುಮಾಬಾಯಿ. ನಾಲ್ವರು ಮಕ್ಕಳು ಸಮಾಜದ ಅವಹೇಳನವನ್ನು ತಮ್ಮ ವರ್ಚಸ್ಸಿನಿಂದಲೇ ಎದುರಿಸಿ ಮಹಾತ್ಮರಾದರು. ಈ ನಾಲ್ವರಲ್ಲಿ ಕಿರಿಯವಳು ಮುಕ್ತಾಬಾಯಿ. ಜ್ಞಾನೇಶ್ವರ, ಮಹಾರಾಷ್ಟ್ರದಲ್ಲಿ ಚಿರದಿನವೂ ಗೌರವಿಸಲ್ಪಡುವ ಮಹಾನ್‌ವ್ಯಕ್ತಿ. ಆತನಿಗೆ ಇನ್ನೂ ಇಪ್ಪತ್ತೈದು ವರ್ಷಗಳು ತುಂಬುವ ಮೊದಲೇ ಮಹಾಜ್ಞಾನಿಯಾಗಿ ಕಡೆಗೆ ಸದೇಹ ಸಮಾಧಿಯಲ್ಲಿ ಲೀನವಾದನು. ಅವನ ಶ್ರೇಷ್ಠ ಕೃತಿಗಳೆಂದರೆ ಜ್ಞಾನೇಶ್ವರಿ ಮತ್ತು, ಅಮೃತಾನುಭವ. ಭಗವದ್ಗೀತೆಯ ವ್ಯಾಖ್ಯಾನವೇ ಜ್ಞಾನೇಶ್ವರಿ. ಜ್ಞಾನದೇವ ಅಮೃತಾನುಭವದಲ್ಲಿ ತನ್ನ ಅನುಭೂತಿಯನ್ನು ಅಭಿವ್ಯಕ್ತಗೊಳಿಸಿದ್ದಾನೆ. ಜ್ಞಾನದೇವನಿಗೆ ಸಹೋದರಿಯಾದ ಮುಕ್ತಾಬಾಯಿಯಲ್ಲಿ ಅನುಪಮವಾದ ವಾತ್ಸಲ್ಯ. ತಮ್ಮೆಲ್ಲರ ಕಷ್ಟಗಳೊಡನೆ ಎಲ್ಲರನ್ನೂ ಹರ್ಷದಿಂದ ಸ್ವಾಗತಿಸಿದ ಸಹೋದರಿಯಲ್ಲಿ ಪ್ರೀತಿಯಲ್ಲದೆ ಗೌರವವೂ ಆ ಎಲ್ಲ ಸಹೋದರರಲ್ಲಿ ನೆಲಸಿತ್ತು.

ಮುಕ್ತಾಬಾಯಿ ಹಲವು ಅಭಂಗಗಳನ್ನು ರಚಿಸಿದಳು. ಒಂದು ಅಭಂಗದಲ್ಲಿ ಅವಳು "ಜನರು ಕೊಡುವ ಕಷ್ಟಗಳಿಗೆ ಸಂತನಾದವನು ಹೆದರಬಾರದು. ಜನರ ತಪ್ಪುಗಳನ್ನು ಕ್ಷಮಿಸಿ ಧೀರನಾಗುವವನೇ ಸಂತ. ಜಗತ್ತು ಕೋಪದ ಬೆಂಕಿಯಾದರೆ ಸಂತನಾದವನು ಅದನ್ನು ಆರಿಸುವ ನೀರಾಗಬೇಕು" ಎಂದು ಹಾಡಿದ್ದಾಳೆ. ಅವಳು ಕೇವಲ ಹದಿನೆಂಟು ವರ್ಷದ ಯುವತಿಯಾದಾಗ ಸಿಡಿಲಿಗೆ ಆಹುತಿಯಾಗಿ ತನ್ನ ಭೌತಿಕ ಶರೀರವನ್ನು ತ್ಯಜಿಸಿದಳು.

ಕವಯಿತ್ರಿ ಬಹಿಣಾಬಾಯಿ :

ಕೊಲ್ಹಾಪುರದಲ್ಲಿ ಹುಟ್ಟಿದ ಇವಳ ವಿವಾಹ ಬಾಲ್ಯದಲ್ಲಿಯೇ ಆಯಿತು. ವೈವಾಹಿಕ ಜೀವನದಲ್ಲಿ ಆಸಕ್ತಿ ವಹಿಸದೆ ತನ್ನ ಮನಸ್ಸನ್ನು ಸದಾ ಕೀರ್ತನೆಯಲ್ಲಿ ಹರಿಸಿದಳು. ಕೊನೆಗೆ ತನ್ನ ಪ್ರೇಮದಿಂದ ಎಲ್ಲರ ಮನಸ್ಸನ್ನೂ ಪರಿವರ್ತಿಸಿದಳು. ಇವಳು ದೇಹುಗ್ರಾಮಕ್ಕೆ ಹೋಗಿ ಅಲ್ಲಿ ಸಂತ ತುಕಾರಾಮರ ಸೇವೆಯಲ್ಲಿ ನಿರತಳಾದಳು. ಅವರ ಸಂಪರ್ಕದಿಂದ ಅವಳ ಕಾವ್ಯ ಪ್ರತಿಭೆ ಜಾಗ್ರತವಾಗಿ ಅವಳೂ ಅನೇಕ ಅಭಂಗಗಳನ್ನು ರಚಿಸಿದಳು ಅವಳು ಸುಮಾರು 400 ಅಭಂಗಗಳನ್ನು ರಚಿಸಿರುವುದಾಗಿ ತಿಳಿದು ಬಂದಿದೆ. ಅವುಗಳಲ್ಲಿನ 53 ಅಭಂಗಗಳಲ್ಲಿ ತನ್ನ ಆತ್ಮ ಕಥೆಯನ್ನು ಆಕರ್ಷಕ ಶೈಲಿಯಲ್ಲಿ ರಚಿಸಿದ್ದಾಳೆ. ತುಕಾರಾಮರ ಮರಣದ ನಂತರ ಅವರನ್ನು ಕುರಿತು 35 ಅಭಂಗಗಳನ್ನು ರಚಿಸಿರುವಳು. ಅವುಗಳಿಂದ ತುಕಾರಾಮರನ್ನು ತಿಳಿಯಲು ಅನುಕೂಲವಾಗಿದೆ. ಅನಂತರ ಸಮರ್ಥ ರಾಮದಾಸರ ಬಳಿಗೆ ಹೋಗಿ ಅವಳು ಕೊನೆಯವರೆಗೂ ಅವರ ಶಿಷ್ಯೆಯಾಗಿದ್ದಳು. ಶ್ರೀ ಕೃಷ್ಣನನ್ನು ಕುರಿತು ಅವಳು ಅನೇಕ ರಚನೆಗಳನ್ನು ರಚಿಸಿದ್ದಾಳೆ.

ಆದರಲ್ಲಿ “ ಗೌಳಣ ” ಬಹು ಪ್ರಸಿದ್ಧವಾದವು. ಗೋಪಿಯರು ಶ್ರೀ ಕೃಷ್ಣನನ್ನು ಕುರಿತು ಅವನನ್ನು ಸಂದರ್ಶಿಸಲು ತಮ್ಮ ಕಾತರತೆಯನ್ನು ಪ್ರದರ್ಶಿಸುವ ಗೀತೆಗಳೇ “ ಗೌಳಣ ”. ಅವಳು ಮರಾಠಿ ಭಾಷೆಯಲ್ಲಿ ರಚಿಸಿರುವ ಅಭಂಗಗಳಂತೆ ಹಿಂದಿಯಲ್ಲಿಯೂ ಗೀತೆಗಳನ್ನು ರಚಿಸಿದ್ದಾಳೆ.

ಕಾನ್ಹೋಪಾತ್ರ :

ಫಂಡರಪುರದ ಹತ್ತಿರವಿರುವ ಮಂಗಳವೇಡದಲ್ಲಿ ಶ್ಯಾಮಾ ಎಂಬ ನರ್ತಕಿ ವಾಸಿಸುತ್ತಿದ್ದಳು. ಅವಳ ಮಗಳು ಕಾನ್ಹೋಪಾತ್ರ, ತುಂಬ ಸುಂದರಿಯೆಂದು ಖ್ಯಾತಳಾದಳು. ತಾಯಿ ಅವಳಿಗೆ ಸಂಗೀತ ಹಾಗೂ ನೃತ್ಯವನ್ನು ಕಲಿಸಿ, ಅವಳ ನೆರವಿನಿಂದ ತುಂಬ ಹಣ ಸಂಪಾದನೆ ಮಾಡಲು ಇಚ್ಛಿಸಿದಳು. ಆದರೆ ಕಾನ್ಹೋಪಾತ್ರ ಹಣಕ್ಕಾಗಿ ದೇಹವನ್ನು ಮಾರುವುದಿಲ್ಲವೆಂದು ಹಠ ಹಿಡಿದು, ತಾನು ಅನುರೂಪನಾದ ವರನನ್ನು ವಿವಾಹವಾಗುವುದಾಗಿ ತಾಯಿಗೆ ಹೇಳಿದಳು.

ಒಂದು ದಿನ ವಾರಕರಿ ಸಂಪ್ರದಾಯದ ಭಕ್ತರು ವಿಠ್ಠಲನನ್ನು ಸ್ತುತಿಸುತ್ತ ಮಂಗಳವೇಡದ ಮೂಲಕ ಫಂಡರಪುರಕ್ಕೆ ಹೋಗುತ್ತಿದ್ದರು. ಅವರು ಯಾರನ್ನು ಸ್ತುತಿಸುವುದೆಂದು ಯುವತಿಯಾದ ಕಾನ್ಹೋಪಾತ್ರ ಕೇಳಿದಳು. “ಸ್ತುತಿಸುತ್ತಿರುವುದು ವಿಠ್ಠಲನನ್ನು ಕುರಿತು” ಎಂದು ಅವರು ಉತ್ತರ ಹೇಳಿದರು. “ನಾನು ಅವನ ಬಳಿಗೆ ಹೋದರೆ, ಅವನು ನನ್ನನ್ನು ಸ್ವೀಕರಿಸುವನೆ?” ಎಂದು ಕಾನ್ಹೋಪಾತ್ರ ಕೇಳಿದಳು. ಅದಕ್ಕೆ ಆ ಭಕ್ತರು “ನಿಜವಾಗಿಯೂ ಸ್ವೀಕರಿಸುತ್ತಾನೆ” ಎಂದರು. ಆಗ ಅವಳು ಹಿಂದು ಮುಂದು ನೋಡದೆ, ಆ ಭಕ್ತರೊಡನೆ ಫಂಡರಪುರಕ್ಕೆ ಪ್ರಯಾಣ ಮಾಡಿ

ದಳು. ವಿಠ್ಠಲನನ್ನು ನೋಡಿದೊಡನೆಯೆ, ಅವಳು ರೋಮಾಂಚನ ಗೊಂಡಳು. ಇವನೇ ತನ್ನ ಆರಾಧ್ಯ ದೈವವೆಂದು, ಅವನಲ್ಲಿ ಸರ್ವಸಮರ್ಪಣೆ ಮಾಡಿ, ಅವನ ಸೇವೆಗೆಂದು ತನ್ನನ್ನು ಅರ್ಪಿಸಿ ಕೊಂಡಳು. ಆ ದಿವ್ಯ ವಿಗ್ರಹದ ಮುಂದೆ ಅವಳು ದಿನವೂ ನೃತ್ಯಮಾಡುತ್ತ ಸಂಕೀರ್ತನೆ ಮಾಡತೊಡಗಿದಳು.

ಕಾನ್ಹೋಪಾತ್ರಳ ನರ್ತನ ಹಾಗೂ ಅವಳ ಸೌಂದರ್ಯವನ್ನು ಕೇಳಿದ ಬಿದರೆಯ ರಾಜನು ಅವಳನ್ನು ಕರೆತರಲು ಸಿಪಾಯಿಗ ಳನ್ನು ಕಳುಹಿಸಿದನು. ಆಗ ಸಿಪಾಯಿಗಳೊಡನೆ ಹೊರಡುವ ಮೊದಲು, ವಿಠ್ಠಲನನ್ನು ಕಾಣಲೆಂದು ಗರ್ಭಗುಡಿಗೆ ಹೋದಳು. ಅಲ್ಲಿ ಅವಳು ಭಕ್ತಿಭಾವದಿಂದ, ತನ್ನನ್ನು ಪರರ ಕೈಗೆ ನೀಡಬಾರ ದೆಂದು ಪ್ರಾರ್ಥಿಸಿದಳು. ಅವಳ ಪ್ರಾರ್ಥನೆಯ ಅಭಂಗ ಈ ರೀತಿ ಇದೆ.

ನಕೋ ದೇವರಾಯ ಅಂತ ಆತ ಪಾಹೂ,
ಪ್ರಾಣ ಹ ಸರ್ವಥಾ ಪಾವು ಪಾಹೆ ॥
ಹರಿಣೀಚಿ ಪಾಡಸ ವ್ಯೇಘ್ರ ಧರಿ ಏಲೆ,
ಮಜಲಾಗಿ ಜಾಹಲೇ ತೈಸೆ ದೇವಾ ॥
ತುಝು ವಿಣ ಠಾವ ನ ದಿಸೆ ತ್ರಿಭುವನ,
ಧಾವೆ ಓ ಜನನಿ ವೀಠಾಬಾಯಿ ॥
ಮೊಕಲೂನಿ ಆಸ ಜಾಹಲೆ ಉದಾಸ ॥
ಘೇಯ ಕಾನ್ಹೋ ಪಾತ್ರೇಚ ಹೃದಯಾಂತ ॥

"ಹೇ ಭಗವಂತ! ಇಂದು ನಾನು ವಿಪತ್ತುಗಳಿಂದ ಪೀಡಿತಳು. ಹುಲಿಯ ಕೈಯಲ್ಲಿ ಸಿಕ್ಕಿರುವ ಜಿಂಕೆಯ ಮರಿಯಂತಾಗಿದೆ ನನ್ನ ಸ್ಥಿತಿ. ಈ ತ್ರಿಭುವನದಲ್ಲಿ ನಿನ್ನನ್ನು ಬಿಟ್ಟು ಬೇರೆ ಯಾರೂ

ನನ್ನನ್ನು ರಕ್ಷಿಸುವವರಿಲ್ಲ. ಎಲ್ಲ ಆಶೆಗಳನ್ನೂ ಬಿಟ್ಟು ನಿನ್ನಲ್ಲಿ ಶರಣಾಗಿದ್ದೇನೆ. ಈಗ ನೀನೆ ನನ್ನ ರಕ್ಷಕ. ಹೇಮಾತೆ ವಿಠಾಬಾಯಿ, ನಿನ್ನ ಹೃದಯದಲ್ಲಿ ನನಗೆ ಸ್ಥಾನವನ್ನು ಕೊಡು" —ಹೀಗೆ ಬೇಡಿ ಕಾನ್ಹೋಪಾತ್ರ ಭಗವಂತನ ಕಾಲಿಗೆರಗಿದಳು. ಆ ಸ್ಥಿತಿಯಲ್ಲಿರುವಾಗಲೇ ಅವಳ ಪ್ರಾಣಪಕ್ಷಿ ಹಾರಿಹೋಯಿತು. ಕಾನ್ಹೋಪಾತ್ರ ಭಕ್ತಳಾಗಿ ಅಮರಳಾಗಿದ್ದಾಳೆ. ಅನೇಕ ಉತ್ತಮ ಅಭಂಗಗಳನ್ನು ರಚಿಸಿ ಸಂತ ಸಾಹಿತ್ಯವನ್ನು ಸಮೃದ್ಧವಾಗಿ ಮಾಡಿದ್ದಾಳೆ ಕಾನ್ಹೋಪಾತ್ರ.

3. ಭಾರತದಲ್ಲಿ ವಿದೇಶೀಯ ಮಹಿಳೆಯರ ಸಾಧನೆ

ಹಲವು ವಿದೇಶೀಯ ಮಹಿಳೆಯರು ಭಾರತದ ಆಧ್ಯಾತ್ಮಿಕ ಪ್ರಭಾವದಿಂದ ಪ್ರಭಾವಿತರಾಗಿ ಬಂದು ಧರ್ಮಮಾರ್ಗದಲ್ಲಿ ಮುನ್ನಡೆದು ಯಶಸ್ಸು ಪಡೆದಿದ್ದಾರೆ. ಅವರಲ್ಲಿ ಇಬ್ಬರನ್ನು ಕುರಿತ ನಿರೂಪಣೆ ಇಲ್ಲಿದೆ.

ಸೋದರಿ ನಿವೇದಿತಾ :

ಮಾರ್ಗರೆಟ್ ಎಲಿಜಬೆತ್ ನೋಬಲ್ ಜನ್ಮತಾಳಿದ್ದು ಕ್ರಿ.ಶ. 1867ನೇ ಅಕ್ಟೋಬರ್ 28ರಂದು. ಅವಳ ತಂದೆ ಸ್ಯಾಮ್ಯುಯಲ್, ತಾಯಿ ಮೇರಿ ಹ್ಯಾಮಿಲ್ಟನ್. ಅವರು ಯೌವನಕ್ಕೆ ಕಾಲಿಟ್ಟೊಡನೆ ಶಿಕ್ಷಕಿಯಾಗಿ ಕೆಲಸ ಮಾಡಲು ಆರಂಭಿಸಿದರು. ಸ್ವಾಮಿ ವಿವೇಕಾನಂದರಿಂದ ಆಧ್ಯಾತ್ಮಿಕ ಜೀವನಕ್ಕೆ ಪ್ರವೇಶಿಸಿ, ಕ್ರಿ.ಶ. 1898 ಜನವರಿ 28ರಂದು ಅವರು ಭಾರತಕ್ಕೆ ಬಂದು ಕಲ್ಕತ್ತೆಯ ಬೇಲೂರು ಮಠದಲ್ಲಿ ನೆಲಸಿದರು.

ಅಲ್ಲಿ ಅವರಿಗೆ ಸ್ವಾಮಿ ವಿವೇಕಾನಂದರು ಭಾರತೀಯ ತತ್ವಶಾಸ್ತ್ರ. ಯೋಗ, ಉಪನಿಷತ್ತು ಇತ್ಯಾದಿ ಹಲವು ವಿಷಯಗಳಲ್ಲಿ ಶಿಕ್ಷಣ ಕೊಟ್ಟರು. ಅವರು ಶ್ರೀ ರಾಮಕೃಷ್ಣ ಪರಮಹಂಸರ ಧರ್ಮ ಪತ್ನಿಯಾದ ಶ್ರೀ ಶಾರದಾ ಮಾತೆಯನ್ನು ಸಂದರ್ಶಿಸಿ ಅವರ ಆಶೀರ್ವಾದವನ್ನು ಪಡೆದುಕೊಂಡರು. 1898 ಮಾರ್ಚ್ 25ನೇ ದಿನ ಸ್ವಾಮಿ ವಿವೇಕಾನಂದರು ಅವರಿಗೆ ಬ್ರಹ್ಮಚರ್ಯ ದೀಕ್ಷೆಯನ್ನಿತ್ತು, ಅವರಿಗೆ 'ನಿವೇದಿತಾ' ಎಂಬ ಹೆಸರನ್ನಿಟ್ಟರು.

ನಿವೇದಿತಾ ಅವರಿಗೆ ಭರತಖಂಡದ ಪರಿಚಯ ಮಾಡಿಕೊಡ ಬೇಕೆಂದು ತಮ್ಮ ಪರಿವಾರದೊಂದಿಗೆ ನಿವೇದಿತಾರನ್ನು ಕರೆದು ಕೊಂಡು ಆಲ್ಮೋರಾ, ಕಾಶ್ಮೀರ, ಅಮರನಾಥಗಳನ್ನು ತೋರಿಸಿ ಅನಂತರ ಸ್ವಾಮಿ ವಿವೇಕಾನಂದರು ತಾವು ಕಲ್ಕತ್ತೆಗೆ ಹಿಂದಿರುಗಿ ದರು. ನಿವೇದಿತಾ ಪರಿವಾರದೊಂದಿಗೆ ಲಾಹೋರ್, ದೆಹಲಿ, ಆಗ್ರಾಗಳನ್ನು ನೋಡಿಕೊಂಡು ಕಲ್ಕತ್ತೆಗೆ ಹಿಂದಿರುಗಿದರು. ಸ್ವಾಮಿ ವಿವೇಕಾನಂದರು ನಿವೇದಿತಾಗೆ ಹೆಣ್ಣುಮಕ್ಕಳ ಶಾಲೆ ಯನ್ನು ಆರಂಭಿಸಬೇಕೆಂದು ಹೇಳಿದರು. ಅವರ ಆದೇಶದಂತೆ ಅವರು ಬಾಗ್‌ಬಜಾರಿನಲ್ಲಿ ಒಂದು ಮನೆಯನ್ನು ಮಾಡಿ ಕೊಂಡರು. ಅಲ್ಲಿ ಅಡಿಗೆಯವಳೊಬ್ಬಳು ದೊರಕಿದಳು. ಅವಳು ಇಂಗ್ಲಿಷ್ ಮಹಿಳೆಯನ್ನು ಮುಟ್ಟಿದರೆ ಸಚೇಲ ಸ್ನಾನ ಮಾಡು ತ್ತಿದ್ದಳು. ಅಂದಿನ ಕಾಲದಲ್ಲಿ ಶಾಲೆಗೆ ಹೆಣ್ಣುಮಕ್ಕಳನ್ನು ಕಳುಹಿಸುವುದು ಮಹಾಪಾಪ ಎಂದು ಜನರು ಭಾವಿಸಿದ್ದರು. ಕಡೆಗೆ ನಿವೇದಿತಾ ಶಾಲೆಯನ್ನು ಆರಂಭಿಸಿದರು.

ಸ್ವಾಮಿ ವಿವೇಕಾನಂದರು ತಮ್ಮ ಶಿಷ್ಯೆಗೆ ಮಾರ್ಗದರ್ಶನ ಮಾಡುತ್ತಿದ್ದ ರೀತಿ ಇದು:

"ಎಷ್ಟು ಕೆಲಸಗಳಿದ್ದರೂ ಆಧ್ಯಾತ್ಮಿಕ ಸಾಧನೆಯನ್ನು ಮಾತ್ರ ಬಿಡಬಾರದು. ಈಗ ಭಾರತದಲ್ಲಿ ಮಹಿಳೆಯರ ಜಾಗೃತಿಯಾಗಬೇಕು. ಅದಕ್ಕಾಗಿ ಸರ್ವಭಾವದಿಂದ ಕ್ರಿಯಾಶೀಲರಾಗಿ ಸೇವೆ ಸಲ್ಲಿಸಬೇಕು".

ಗುರುವಿನ ಮಾತುಗಳನ್ನು ಅನುಷ್ಠಾನಕ್ಕೆ ತರಲು ನಿವೇದಿತಾ ಸರ್ವ ಪ್ರಯತ್ನ ಮಾಡಿದರು. ಉಪನ್ಯಾಸಗಳಿಂದ ಮಹಿಳೆಯರಲ್ಲಿ ಜಾಗೃತಿಯನ್ನುಂಟುಮಾಡಲು ಅವರು ಯತ್ನಿಸಿದರು. ಅವರ ಉಪನ್ಯಾಸಗಳನ್ನು ಕೇಳಲು ಕೇಶವಚಂದ್ರಸೇನರ ಮಕ್ಕಳಾದ ಸುನೀತಿದೇವಿ ಮತ್ತು ಸುಚಾರುದೇವಿ, ರವಿಂದ್ರನಾಥ ಠಾಕೂರರ ಮನೆತನಕ್ಕೆ ಸೇರಿದ ಇಂದಿರಾದೇವಿ, ಚೌಧುರಾಣಿ ಮತ್ತು ಸರಳಾದೇವಿ ಘೋಷಾಲ್, ಜಗದೀಶಚಂದ್ರಬೋಸರ ಸಹೋದರಿ ಲಾವಣ್ಯಪ್ರಭಾ ಬಸು—ಮೊದಲಾದವರು ಬರುತ್ತಿದ್ದರು. ಕರೆದಲ್ಲಿಗೆ ಹೋಗಿ ನಿವೇದಿತಾ ಅವರು ಭಾಷಣ ಮಾಡಲು ಆರಂಭಿಸಿದರು.

ಕಲ್ಕತ್ತೆಯಲ್ಲಿ ಪ್ಲೇಗ್ ರೋಗದ ಹಾವಳಿ ಆರಂಭವಾದಾಗ, ಸ್ವಾಮಿ ವಿವೇಕಾನಂದರ ನೇತೃತ್ವದಲ್ಲಿ ಸನ್ಯಾಸಿಗಳೂ, ನಿವೇದಿತಾ ಅವರೂ ಸೇವಾಕಾರ್ಯಕ್ಕೆ ಆರಂಭಿಸಿದರು. ಸ್ವಯಂ ಸೇವಕರ ತಂಡದೊಡನೆ ನಿವೇದಿತಾ ಕಾರ್ಯಶೀಲರಾದರು. ರಸ್ತೆಗಳನ್ನೂ, ಗಲ್ಲಿಗಳನ್ನೂ ಈ ತಂಡ ಸ್ವಚ್ಛ ಮಾಡಲಾರಂಭಿಸಿತು. ನಿವೇದಿತಾ ತಾವೇ ಗುಡಿಸುವ ಕಾರ್ಯದಲ್ಲಿ ಕೊಳಚೆ ಪ್ರದೇಶಗಳನ್ನು ಶುಚಿಗೊಳಿಸುವ ಕಾರ್ಯದಲ್ಲಿಯೂ ಮಗ್ನರಾದರು. "ಪ್ಲೇಗ್ ಮತ್ತು ವಿದ್ಯಾರ್ಥಿಗಳ ಕರ್ತವ್ಯ"—ಎಂಬ ಭಾಷಣವನ್ನು ಅವರು ಮಾಡಿದಾಗ, ಅನೇಕ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಲು ಮುಂದೆ ಬಂದರು. ಅಲ್ಲಲ್ಲಿ ರೋಗಿಗಳ ಶುಶ್ರೂಷೆಗಾಗಿ ಹುಲ್ಲು

ಗುಡಿಸಲುಗಳು ನಿರ್ಮಿತವಾದವು. ನಿವೇದಿತಾ ಸರ್ವಭಾವದಿಂದ ಸೇವಾ ಕಾರ್ಯದಲ್ಲಿ ನಿರತರಾದರು. ದಿನಕ್ಕೆ ಹದಿನೆಂಟು ಘಂಟೆ ಅವಿರತ ಸೇವಕಾರ್ಯದಲ್ಲಿ ಅವರೂ, ಅವರ ಸ್ವಯಂಸೇವಕರೂ ನಿರತರಾದರು. ಕಡೆಗೆ ಮೃತ್ಯುವಿನ ಹಿಡಿತ ಸಡಿಲವಾಗಿ ಕಲ್ಕತ್ತ ನಗರ ರೋಗ ವಿಮುಕ್ತವಾಯಿತು. ಕಲ್ಕತ್ತೆಯಲ್ಲಿ ನಿವೇದಿತಾರ ಹೆಸರು ಮನೆಮಾತಾಯಿತು. ಎಲ್ಲರೂ ಸೋದರಿ ನಿವೇದಿತಾ ಎಂದು ಅವರನ್ನು ಗೌರವಿಸತೊಡಗಿದರು. ಅವರನ್ನು ಮೊದಲು ಪಾಶ್ಚಿಮಾತ್ಯ ಮಹಿಳೆಯೆಂದು ತಿರಸ್ಕರಿಸುತ್ತಿದ್ದವರೂ ಅವರನ್ನು ಮಾರ್ಯಾದೆಯಿಂದ ಕಾಣತೊಡಗಿದರು.

"ದ್ವೇಷವನ್ನು ದ್ವೇಷದಿಂದ ಗೆಲ್ಲುವುದು ಪ್ರಕೃತಿಯ ನಿಯಮಕ್ಕೆ ವಿರೋಧ. ಪ್ರೇಮದಿಂದಲೇ ದ್ವೇಷವನ್ನು ಗೆಲ್ಲುವುದು ಸಾಧ್ಯ'' ಎಂಬುದನ್ನು ನಿವೇದಿತಾ ಕಾರ್ಯದಲ್ಲಿ ಮಾಡಿ ತೋರಿಸಿದರು.

ಗುರುವಾದ ಸ್ವಾಮಿ ವಿವೇಕಾನಂದರಿಂದ ಬ್ರಹ್ಮಚರ್ಯದ ದೀಕ್ಷೆಯನ್ನು ಪಡೆದ ಅವರಿಗೆ ಸನ್ಯಾಸಿನಿಯಾಗಬೇಕೆಂಬ ಅಭಿಲಾಷೆ. ಗುರುವು ಅದಕ್ಕೆ ಒಪ್ಪಲಿಲ್ಲ. ಅವರು ಕಾವಿಯನ್ನು ಧರಿಸದೆ ಮಾನಸಿಕವಾಗಿ ಸನ್ಯಾಸಿನಿಯಾದರು. ಸ್ವಾಮಿ ವಿವೇಕಾನಂದರು ಆಗಾಗ ಅವರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಅದರ ರೀತಿ ಹೀಗಿದೆ :

''ಯಾವ ದೇಶದಲ್ಲಿ ಮಹಿಳೆಯರಿಗೆ ಗೌರವವಿಲ್ಲವೋ, ಎಲ್ಲಿ ಅವರು ದುಃಖದಿಂದ ಬಳಲುತ್ತಾರೋ ಅಂತಹ ದೇಶಕ್ಕೆ, ಅಂತಹ ಕುಟುಂಬಕ್ಕೆ ಏಳ್ಗೆ ಇಲ್ಲ"

''ಮಹಿಳೆಯರ ಉದ್ಧಾರಕ್ಕೆ ಬೇಕಾದುದು ವಿದ್ಯಾಭ್ಯಾಸ.

ಅವರು ವಿದ್ಯಾವಂತರಾದರೆ ಸುಧಾರಣೆಗಳನ್ನು ಅವರೇ ಮಾಡಿ ಕೊಳ್ಳುತ್ತಾರೆ."

ಗುರುವಿನ ಈ ವಾಣಿಯನ್ನು ಕಾರ್ಯರೂಪಕ್ಕೆ ತರಲು ನಿವೇದಿತಾ ಸರ್ವಪ್ರಯತ್ನ ಮಾಡಿದರು. ಅವರು ಪ್ರಾರಂಭಿಸಿದ ಶಾಲೆಗೆ ಮೊದಲ ಬಾರಿ ಬಂದವರು ಮೂರು ವಿದ್ಯಾರ್ಥಿನಿಯರು ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವುದೂ ಹೀನ ಕೃತ್ಯವೆಂಬ ಭಾವನೆ ಭಾರತೀಯರಲ್ಲಿದ್ದ ಕಾಲವದು. ನಿವೇದಿತಾರ ನಿಷ್ಠೆ ಯಿಂದ ಕ್ರಮೇಣ ಈ ಸಂಖ್ಯೆ ಮೂವತ್ತಕ್ಕೇರಿತು. ಮಕ್ಕಳ ಓದಿಗೆ ಶುಲ್ಕವಿಲ್ಲ. ಅವರಿಗೆ ಬಟ್ಟೆ ಔಷಧಿಗಳನ್ನೂ ಅವರೇ ಒದಗಿಸಬೇಕಾಗಿತ್ತು. ಬಹು ಕಷ್ಟದಿಂದ ಅವರು ಜೀವನ ನಿರ್ವಹಿಸುತ್ತಾ, ಗುರುವಿನ ಆದೇಶದಂತೆ ಅವರು ಕಾರ್ಯನಿರತ ರಾದರು. ಇದರೊಡನೆ ಉಪನ್ಯಾಸ, ಬರವಣಿಗೆಗಳಲ್ಲಿಯೂ ಅವರು ನಿರತರಾದರು. ಅವರು ಏಕಾಂಗಿನಿಯಾಗಿ ನಿಂತು ಭಗ ವಂತನಲ್ಲಿಯೇ ಸರ್ವವನ್ನೂ ಅರ್ಪಿಸಿ ಕೆಲಸಮಾಡಲು ಗುರುವಿನ ಆದೇಶ ಪಡೆದರು. ಸ್ವಾಮಿ ವಿವೇಕಾನಂದರು, ತನ್ನನ್ನು ಆಶ್ರಯಿಸದೆ, ತಮ್ಮ ಕಾಲಮೇಲೆ ಅವರು ನಿಲ್ಲಬೇಕೆಂದು ಅವರಿಗೆ ಮಾರ್ಗದರ್ಶನ ಮಾಡಿದರು.

1899 ಜೂನ್ 20ನೇ ತಾರೀಖು ಸ್ವಾಮಿ ವಿವೇಕಾನಂದರು ಸ್ವಾಮಿ ತುರಿಯಾನಂದ ಮತ್ತು ಸೋದರಿ ನಿವೇದಿತಾ – ಇವರೊ ಡನೆ ಅಮೇರಿಕಾಕ್ಕೆ ಹೊರಟರು. ದಾರಿಯಲ್ಲಿ ಲಂಡನ್ನಿನಲ್ಲಿ ತನ್ನ ತಾಯಿ ಹಾಗೂ ತಂಗಿಯರನ್ನು ಸಂದರ್ಶಿಸಿ, ಸ್ವಾಮಿಜಿಯವ ರೊಡನೆ ಅಮೇರಿಕಾಕ್ಕೆ ನಿವೇದಿತಾ ಹೊರಟರು. ಗುರುವಿನ ಆದೇಶದಂತೆ ಅವರು ಚಿಕಾಗೋ ನಗರದಲ್ಲಿ ''ಭಾರತ'', "ಭಾರ ತೀಯ ಮಹಿಳೆಯರ ಸ್ಥಿತಿಗತಿಗಳು'', " ಭಾರತದ ಆಧ್ಯಾತ್ಮಿಕ

ಜೀವನ'' ಎಂಬ ಉಪನ್ಯಾಸಗಳನ್ನು ನೀಡಿದರು. ಅವರ ನಿರೀಕ್ಷೆಗೆ ಮೀರಿದ ಧನಸಹಾಯ ದೊರಕಿತು.

1900 ಜೂನ್ ತಿಂಗಳಲ್ಲಿ ಅವರು ಪ್ಯಾರಿಸ್‌ಗೆ ಹೋಗಿ, ಅಲ್ಲಿಂದ ಕೆಲವು ಕಾಲ ಬ್ರಿಟನ್ನಿನಲ್ಲಿ ಕೆಲಸಮಾಡಲು ಇಚ್ಛಿಸಿದರು. ಸ್ವಾಮಿಜಿ ಅವರನ್ನು ಬೀಳ್ಕೊಡುವಾಗ ಒಂದು ಮಾತನ್ನು ಹೇಳಿದರು. "ನಾನು ನಿಮ್ಮನ್ನು ರೂಪಿಸಿಲ್ಲ. ಜಗನ್ಮಾತೆಯೇ ನಿಮ್ಮನ್ನು ರೂಪಿಸಿದ್ದು" ಈ ಮಾತನ್ನು ಕೇಳಿ ಮೊದಲು ನಿವೇದಿತಾ ಚಕಿತರಾದರೂ ಒಡನೆಯೇ ಆ ಮಾತಿನ ಅರ್ಥ ಗೋಚರಿಸಿದಾಗ ಗುರುವಿನ ವಾಣಿಯು ಬೋಧೆ ಅರ್ಥವಾಗಿ ಅವರಿಗೆ ಗುರುವಿನಲ್ಲಿ ಮತ್ತಷ್ಟು ಗೌರವ ಬೆಳೆಯಿತು. ಗುರು ತನ್ನ ಮಾತಿನಲ್ಲಿ ಅಹಂಕಾರವನ್ನು ಸಂಪೂರ್ಣ ಅಳಿಸಿಹಾಕಿ, ಕೇವಲ ಜಗನ್ಮಾತೆಯೇ ಎಲ್ಲವನ್ನೂ ಮಾಡುವಳೆಂಬ ಅರ್ಥ ತುಂಬಿದ್ದುದನ್ನು ನೆನೆದು, ಅವರ ಕಣ್ಣಿನಲ್ಲಿ ನೀರು ತುಂಬಿತು. ತನ್ನ ಗುರು ಎಂಥ ಮಹಿಮಾನ್ವಿತ ಎಂದು ಮನಸ್ಸಿನಲ್ಲಿಯೇ ನಮಿಸಿದರು.

ಇಂಗ್ಲೆಂಡಿನಲ್ಲಿ ಅವರು ಹಣ ಸಂಗ್ರಹ ಮಾಡುವುದರಲ್ಲಿ ಸಮರ್ಥರಾದರು. ಅವರು ಸ್ಫೂರ್ತಿದಾಯಕವಾದ ಅನೇಕ ಭಾಷಣಗಳನ್ನು ಮಾಡಿ, 1902 ಜನವರಿ 9ನೇ ದಿನ ಅವರು ಭಾರತಕ್ಕೆ ಹಿಂದಿರುಗಲು ಹಡಗು ಹತ್ತಿದರು. ಭಾರತದಲ್ಲಿ ಅವರಿಗೆ ಪ್ರೀತಿಪೂರ್ವಕ ಸ್ವಾಗತ ಕಾದಿತ್ತು. ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾದ ಕುಮಾರಿ ಕ್ರಿಶ್ಚೀನ್ ಮತ್ತು ಗ್ರೀನ್ ಸ್ಟೈಡಲ್ ಎಂಬ ಅಮೆರಿಕದ ಮಹಿಳೆಯರು ಬಂದು ನಿವೇದಿತಾರ ಜೊತೆಗೆ ಕೆಲಸಮಾಡಲು ಆರಂಭಿಸಿದರು. 1902 ಜುಲೈ 4ನೇ ದಿನ ಸ್ವಾಮಿ ವಿವೇಕಾನಂದರು ತಮ್ಮ ಭೌತಿಕ ಶರೀರವನ್ನು ತ್ಯಜಿಸಿ,

ಮಹಾಸಮಾಧಿಯಲ್ಲಿ ಲೀನರಾದರು. ಅಂತು ನಿವೇದಿತಾರಿಗೆ ದಾರುಣವಾದ ದು:ಖವಾಯಿತು. ಯಾವ ಗುರು ತನಗೆ ಮಂತ್ರ ದೀಕ್ಷೆಯನ್ನು ಕೊಟ್ಟು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಭದ್ರವಾದ ತಳಹದಿ ಹಾಕಿದರೋ ಅವರು ಇನ್ನಿಲ್ಲ! ಗುರುವು ಹೇಳಿದ "ನಾನು ನಿಮ್ಮನ್ನು ರೂಪಿಸಿಲ್ಲ, ಜಗನ್ಮಾತೆಯೇ ನಿಮ್ಮನ್ನು ರೂಪಿಸಿದ್ದು" ಎಂಬ ಮಾತುಗಳು ಅವರ ಹೃದಯದಲ್ಲಿ ಪ್ರತಿಧ್ವನಿಸಿದವು. ಅವರು ಕ್ರಿಯಾಶೀಲರಾದರು.

ನಿವೇದಿತಾ ಅವರಿಗೆ ಭಾರತದ ಸ್ವಾತಂತ್ರ್ಯಕ್ಕಾಗಿಯೂ ದುಡಿಯುವ ಹಂಬಲವಾಯಿತು. ಅವರು ರಾಮಕೃಷ್ಣ ಮಹಾಸಂಘಕ್ಕೆ ರಾಜೀನಾಮೆ ಕೊಟ್ಟು, ಸ್ವತಂತ್ರರಾದರು. ಕೇವಲ ಆಧ್ಯಾತ್ಮಿಕ ಸಂಘವಾದ ಶ್ರೀ ರಾಮಕೃಷ್ಣ ಮಹಾಸಂಘಕ್ಕೆ ತನ್ನಿಂದ ಅಪಕೀರ್ತಿ ಬಾರದಿರಲೆಂದು ಅವರು ಹೀಗೆ ಮಾಡಿದರು. ಶಾಲೆಯನ್ನು ಅಭಿವೃದ್ಧಿಪಡಿಸಲು ಬದ್ಧಕಂಕಣರಾದ ಅವರಿಗೆ ಕ್ರಮೇಣ ಶಾಲೆಯ ಕೆಲಸದ ವ್ಯಾಪ್ತಿ ವಿಸ್ತಾರವಾಯಿತು. ಮಧ್ಯಾಹ್ನ 12ರಿಂದ 4ರ ವರೆಗೆ ವಯಸ್ಕರಾದ ಮಹಿಳೆಯರಿಗೂ ಭಗವದ್ಗೀತೆ, ವೈಜ್ಞಾನಿಕ ಹಾಗೂ ಆರೋಗ್ಯದ ವಿಚಾರವಾಗಿ ಉಪನ್ಯಾಸ ಮಾಡಲು ಆರಂಭಿಸಿದರು.

1905ರಲ್ಲಿ ಬ್ರಿಟಿಷ್ ಸರ್ಕಾರ ಬಂಗಾಳವನ್ನು ವಿಭಜಿಸಿದುದನ್ನು ನಿವೇದಿತಾ ಪ್ರತಿಭಟಿಸಿದರು. ಕಾಶಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಅವರು ಭಾಗವಹಿಸಿದರು. 1907 ಆಗಸ್ಟ್ ತಿಂಗಳಲ್ಲಿ ಭಾರತವನ್ನು ಬಿಟ್ಟು ಗ್ರೇಟ್ ಬ್ರಿಟನ್ ಮತ್ತು ಅಮೆರಿಕಾಗಳಲ್ಲಿ ಪ್ರವಾಸಮಾಡಿ 1909 ಜುಲೈ 2ನೇ ತಾರೀಖು ಅವರು ಭಾರತಕ್ಕೆ ಹಿಂದಿರುಗಲು ಹಡಗನ್ನು ಹತ್ತಿದರು. ಭಾರತಕ್ಕೆ ಬಂದಮೇಲೆ ಪುನಃ ಅವರ ಅವಿರತ ಕಾರ್ಯ ಪ್ರಪಂಚ ವಿಸ್ತಾರ

ವಾಯಿತು. ಅವರ ಶಾಲೆಯನ್ನು ಸಂದರ್ಶಿಸಲು ವೈಸರಾಯ್ ಮಿಂಟೋವಿನ ಪತ್ನಿ ಶ್ರೀಮತಿ ಮಿಂಟೋ, ಬ್ರಿಟಿಷ್ ಪಾರ್ಲಿಮೆಂಟಿನ ಲೇಬರ್ ಪಕ್ಷದ ನಾಯಕ ರಾಮ್ಸೆ ಮ್ಯಾಕ್ಡೊನಾಲ್ಡ್ ಮೊದಲಾದವರು ಆಗಮಿಸಿದರು. ನಿವೇದಿತಾ ಅವರು ಶಾಲೆಯನ್ನು ನಡೆಸಲು ಸಾಕಷ್ಟು ಹಣವಿಲ್ಲದೆ ಕಷ್ಟಪಡಬೇಕಾಗಿತ್ತು. ತಮ್ಮ ಖರ್ಚನ್ನು ಕಡಿಮೆ ಮಾಡಿಕೊಂಡು, ಕಡುಬಡತನದಲ್ಲಿ ಜೀವಿಸತೊಡಗಿದರು. ಇದರ ಮಧ್ಯೆ ನಿವೇದಿತಾ ಹಲವು ಕೃತಿಗಳನ್ನು ರಚಿಸಿದರು. ಆ ಕೃತಿಗಳಿಂದ ಅವರ ಭಾರತ ಪ್ರೇಮ, ಹಿಂದೂಧರ್ಮದಲ್ಲಿರುವ ಅಪಾರ ಗೌರವ ವ್ಯಕ್ತವಾಗುತ್ತವೆ. ಈ ಮಧ್ಯೆ ಅವರು ತಮ್ಮ ಗೆಳತಿ ಶ್ರೀಮತಿ ಬುಲ್ ಅಸ್ವಸ್ಥರಾದುದನ್ನು ಕಂಡು, ಅವರ ಶುಶ್ರೂಷೆಗೆಂದು ಅಮೇರಿಕಾಕ್ಕೆ ಹೋಗಿ 1911 ಜುಲೈ 7ನೇ ದಿನ ಭಾರತಕ್ಕೆ ಹಿಂದಿರುಗಿದರು.

ಕಾರ್ಯಪ್ರಪಂಚದಿಂದ ನಿವೇದಿತಾಗೆ ಸ್ವಲ್ಪ ವಿಶ್ರಾಂತಿ ಬೇಕಾಗಿತ್ತು. ಅವರು ಡಾರ್ಜಿಲಿಂಗಿಗೆ ಹೋದರು. ಅಲ್ಲಿ ಅವರಿಗೆ ರಕ್ತಭೇದಿ ಆರಂಭವಾಯಿತು. 1911 ಅಕ್ಟೋಬರ್ 19ನೇ ದಿನ ಅವರು ತಮ್ಮ ಭೌತಿಕ ಶರೀರವನ್ನು ತ್ಯಜಿಸಿ, ಜಗನ್ಮಾತೆಯ ಪಾದಾರವಿಂದವನ್ನು ಸೇರಿದರು. ಬ್ರಿಟನ್ನಿನಲ್ಲಿ ಹುಟ್ಟಿದ ಐರಿಷ್ ಮಹಿಳೆ, ಭಾರತಕ್ಕೆ ಬಂದು, ಭಾರತವನ್ನೇ ತನ್ನ ರಾಷ್ಟ್ರವೆಂದು ಭಾವಿಸಿ, ಉಜ್ವಲ ರಾಷ್ಟ್ರಪ್ರೇಮಿಯಾಗಿ ತನ್ನ ಸರ್ವವನ್ನೂ ಭಾರತಕ್ಕೆ ಎರೆದ ನಿವೇದಿತಾ ಚಿರಸ್ಮರಣೀಯರು. ದೀನದಲಿತರ ಸೇವೆಯಲ್ಲಿ ಅವರು ತಮ್ಮ ಸರ್ವಸ್ವವನ್ನು ಅರ್ಪಿಸಿದ ಮಹಾ ಕರ್ಮಯೋಗಿನಿ. ಅವರು ಕಟ್ಟಿದ ಹೆಣ್ಣುಮಕ್ಕಳ ಶಾಲೆ ಇಂದಿಗೂ ನಿವೇದಿತಾ ಹೆಣ್ಣುಮಕ್ಕಳ ಶಾಲೆ ಎಂದು ಆದರ್ಶ ಶಾಲೆಯಾಗಿ ಮುಂದುವರಿಯುತ್ತಿದೆ ಕಲ್ಕತ್ತೆಯಲ್ಲಿ.

ಮೀರಾ ಬಹೆನ್ :

ಗಾಂಧೀಜಿಯ ಪ್ರಿಯ ಶಿಷ್ಯೆಯಾದ ಮೀರಾ ಬಹೆನ್ ಬ್ರಿಟಿಷ್ ನೌಕಾದಳದ ಮುಖ್ಯಾಧಿಕಾರಿಯಾದ ಸ್ಲೇಡ್ ಎಂಬುವವರ ಮಗಳು. ಅವರು ಜನ್ಮತಾಳಿದ್ದು 1892ರಲ್ಲಿ. ಅವರು ರೋಮೆ ರೊಲಾ ಅವರು ರಚಿಸಿದ ಮಹಾತ್ಮಾ ಗಾಂಧೀಜಿಯವರ ಜೀವನ ವನ್ನು ಓದಿ, ಗಾಂಧೀಜಿಯವರ ಬಳಿಗೆ ಹೋಗಿ ತನ್ನ ಬದುಕನ್ನು ರೂಪಿಸಿ ಕೊಳ್ಳಲು ಯೋಚಿಸಿದರು. ಭಾರತಕ್ಕೆ ಬರುವ ಮೊದಲು ನೂಲುವುದು, ನೆಲದ ಮೇಲೆ ಕುಳಿತು ಊಟ ಮಾಡು ವುದು, ಖಾದಿಯನ್ನು ಧರಿಸುವುದು — ಇವುಗಳನ್ನು ಅಭ್ಯಾಸ ಮಾಡಿಕೊಂಡು. ಹಿಂದಿ ಭಾಷೆಯನ್ನು ಕಲಿಯಲು ಸಾಕಷ್ಟು ಪ್ರಯತ್ನ ಮಾಡಿದರು. ಗಾಂಧೀಜಿಯವರಿಗೆ ಪತ್ರ ಬರೆದು, ಅವರ ಅನುಮತಿ ಪಡೆದು 1925ರ ನವೆಂಬರ್ ತಿಂಗಳಲ್ಲಿ ಅವರು ಭಾರತಕ್ಕೆ ಬಂದರು. ಗಾಂಧೀಜಿಯ ಅನುಯಾಯಿಗಳು ಬೊಂಬಾಯಿಗೆ ಬಂದು ಅವರನ್ನು ಸಬರಮತಿ ಆಶ್ರಮಕ್ಕೆ ಕರೆದು ಕೊಂಡು ಹೋದರು. ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಸಾಧಕರಾಗಲು ಅವರು ಸಿದ್ಧರಾದರು.

ಗಾಂಧೀಜಿಯವರೊಡನೆ ಬಾಳ್ವೆ ನಡೆಸುವುದೆಂದರೆ ಸುಲಭದ ಕೆಲಸವಲ್ಲ. ಅವರ ಬಳಿ ವಿಲಾಸಕ್ಕಾಗಲಿ, ಭೋಗಕ್ಕಾಗಲಿ, ಸೋಮಾರಿತನಕ್ಕಾಗಲಿ ಎಡೆಯೇ ಇರಲಿಲ್ಲ. ಮ್ಯಾಡೆಲಿನ್ ಸ್ಲೇಡ್ ಆಶ್ರಮಕ್ಕೆ ಸೇರಿದ ಬಳಿಕ ಹಿಂದಿ ಕಲಿಯಲು ಆರಂಭಿಸಿದರು. ತಕಲಿಯಿಂದ ದಾರ ತೆಗೆಯುವುದೂ ಅವರಿಗೆ ಅಭ್ಯಾಸವಾಯಿತು. ಆಶ್ರಮದ ಜೀವನಕ್ಕೆ ಅವರು ಬಹುಬೇಗ ಹೊಂದಿಕೊಂಡರು. ತಮ್ಮ ಪ್ರೀತಿಯಂತಿದ್ದ ಮ್ಯಾಡೆಲಿನ್ ಸ್ಲೇಡರನ್ನು ಗಾಂಧೀಜಿ ಮೀರಾ ಬಹೆನ್ ಎಂದು ಕರೆದರು.

ಮೀರಾ ಬಹೆನ್‌ಗೆ ಹಿಂದೂಸ್ಥಾನಿ ಭಾಷೆಯಲ್ಲಿ ಬರೆಯುವ, ಓದುವ, ಮಾತನಾಡುವ ಅಭ್ಯಾಸವಾಗಲೆಂದು ಅವರನ್ನು ದೆಹಲಿಯ ಬಳಿ ಇದ್ದ ಕನ್ಯಾ ಗುರುಕುಲಕ್ಕೂ, ಅನಂತರ ಹರಿದ್ವಾರದ ಕಂಗ್ರಿ ಗುರುಕುಲಕ್ಕೂ ಗಾಂಧೀಜಿ ಕಳುಹಿಸಿದರು. ಈ ಗುರುಕುಲಗಳಲ್ಲಿ ಶ್ರದ್ಧೆಯಿಂದ ಅಧ್ಯಯನ ಮಾಡಿದ ಮೀರಾ ಬಹೆನ್ ವರ್ಧಾಕ್ಕೆ ಬಂದರು. ಬಳಿಕ ಗಾಂಧೀಜಿಯವರ ಆದೇಶದಂತೆ, ಬಿಹಾರಿನಲ್ಲಿ ಸೇವಾಕಾರ್ಯಕ್ಕೆ ತೊಡಗಿದ ಮೀರಾ ಬಹೆನ್ ಕೆಲವು ದಿನ ಮಲೇರಿಯಾದಿಂದ ಕಷ್ಟಪಡಬೇಕಾಯಿತು. ಅನಂತರ ಖಾದಿ ಪ್ರಚಾರಕ್ಕಾಗಿ ಅವರು ಗಾಂಧೀಜಿಯವರೊಡನೆ ಪ್ರವಾಸಕ್ಕೆ ಹೊರಟರು.

ಕರಾಚಿಯಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನಕ್ಕೆ ಕಸ್ತೂರಿಬಾ, ಮೀರಾ ಬಹೆನ್, ಮಹದೇವ ದೇಸಾಯಿ–ಇವರೊಡನೆ ಗಾಂಧೀಜಿ ರೈಲಿನಲ್ಲಿ ಪ್ರಯಾಣ ಮಾಡಿದರು. ಕರಾಚಿಯ ಅಧಿವೇಶನದಲ್ಲಿ ಗಾಂಧೀಜಿ ಲಂಡನ್ನಿನಲ್ಲಿ ನಡೆಯಬೇಕಾದ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಬೇಕೆಂದು ತೀರ್ಮಾನಿಸಿದರು.

ಮೀರಾ ಬಹೆನ್ ಭಾರತಕ್ಕೆ ಬಂದ ಕೆಲವು ವರ್ಷಗಳಲ್ಲಿ ಅವರ ತಾಯಿ ತಂದೆಯರು ಕಾಲವಾದಾಗ, ಅವರನ್ನು ಲಂಡನ್ನಿಗೆ ಕಳುಹಿಸಲು ಗಾಂಧೀಜಿ ಇಚ್ಛಿಸಿದರು. ಆದರೆ ಮೀರಾ ಬಹೆನ್ ಭಾರತವನ್ನು ಬಿಟ್ಟು ಹೋಗಲು ಸಿದ್ಧರಾಗಿರಲಿಲ್ಲ. ಕೆಲವು ಕಾಲ ಅವರು ಸಬರಮತಿ ಆಶ್ರಮದಲ್ಲಿ ನೆಲಸಿ ಕಾರ್ಯಶೀಲರಾದರು.

ಗಾಂಧೀಜಿ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ತಮ್ಮ ಪರಿವಾರದವರೊಂದಿಗೆ ಮೀರಾ ಬಹೆನ್‌ರನ್ನೂ ಕರೆದುಕೊಂಡು ಹೋದರು. ಅಲ್ಲಿ ಮೀರಾ ದಿನವೂ ಬೆಳಗ್ಗೆ 3.15ಕ್ಕೆ ಎದ್ದು

ರಾತ್ರಿ ಹತ್ತು ಗಂಟೆಯವರೆಗೂ ಕೆಲಸ ಮಾಡುತ್ತಿದ್ದರು. ನಿದ್ರೆಗೂ ಸಮಯವಿಲ್ಲದಷ್ಟು ಅವರಿಗೆ ಕೆಲಸ. ಆದರೆ ಗಾಂಧೀಜಿಯವರಲ್ಲಿದ್ದ ಅವರ ಅಪಾರ ಪ್ರೀತಿಗಳಿಂದಾಗಿ, ಕಷ್ಟಗಳು ಅವರಿಗೆ ಯಾವ ಯಾತನೆಯನ್ನೂ ಉಂಟುಮಾಡಲಿಲ್ಲ.

ದುಂಡುಮೇಜಿನ ಪರಿಷತ್ತು ವಿಫಲವಾದ ಬಳಿಕ ಗಾಂಧೀಜಿ ಭಾರತಕ್ಕೆ ಹಿಂತಿರುಗಿ ಸತ್ಯಾಗ್ರಹಕ್ಕೆ ಸಿದ್ಧತೆ ಮಾಡಿಕೊಂಡರು. ಅದನ್ನು ತಿಳಿದ ಬ್ರಿಟಿಷ್ ಸರ್ಕಾರ ಅವರನ್ನು ಸೆರೆಮನೆಗೆ ಕಳುಹಿಸಿತು. ಮೀರಾಬಾಯಿ ಸತ್ಯಾಗ್ರಹದ ಸಿದ್ಧತೆ ಮಾಡುತ್ತಿದ್ದುದನ್ನು ಕಂಡು, ಅವರನ್ನೂ ಸರ್ಕಾರ ಸೆರೆಮನೆಗೆ ಕಳುಹಿಸಿತು. ಸೆರೆಮನೆಯಲ್ಲಿ ಯಾವ ಸೌಲಭ್ಯಗಳು ಇಲ್ಲ. ಅಲ್ಲಿಯ ಪರಿಸ್ಥಿತಿ ಚಿಂತಾಜನಕವಾಗಿತ್ತು. ಊರಿನ ಕೊಳಕೆಲ್ಲ ಸೆರೆಮನೆಯ ಹತ್ತಿರ ತಂದು ರಾಶಿ ಹಾಕುತ್ತಿದ್ದರು. ಆ ಕೊಳಕು ವಾಸನೆ ಸೆರೆಮನೆಯೆಲ್ಲವನ್ನೂ ತುಂಬಿರುತ್ತಿತ್ತು. ಸೆರೆಮನೆಯಲ್ಲಿ ಎಲ್ಲರಿಗೂ ಇದ್ದುದು ಒಂದೇ ನಲ್ಲಿ. ಅದರ ನೆರವಿನಿಂದ ಎಲ್ಲ ಕೆಲಸಗಳೂ ನಡೆಯಬೇಕಾಗಿತ್ತು. ಇಂತಹ ನರಕವಾಸದಲ್ಲಿ ಅವರು ಒಂದು ವರ್ಷಕಾಲ ಕಳೆಯಬೇಕಾಯಿತು.

ಸೆರೆಮನೆಯಿಂದ ಹೊರಬಂದ ಮೇಲೆ ಮೀರಾಬಹೆನ್ ಗಾಂಧೀಜಿಯವರ ಅಪ್ಪಣೆ ಪಡೆದು ಲಂಡನ್ ಮತ್ತು ಅಮೆರಿಕಾಗಳಲ್ಲಿ ಗಾಂಧೀತತ್ವಗಳ ಪ್ರಚಾರಕ್ಕಾಗಿ ಹೊರಟರು. ಲಂಡನ್ನಿನ ಕೈಗಾರಿಕಾ ಕೇಂದ್ರದಲ್ಲಿ, ಹಳ್ಳಿಗಳಲ್ಲಿ ಅವರ ಉಪನ್ಯಾಸಯಾತ್ರೆ ಯಶಸ್ವಿಯಾಗಿ ನಡೆಯಿತು. ಅಮೆರಿಕಾದಲ್ಲಿಯೂ ಅವರು ಪ್ರವಾಸಮಾಡಿ ಗಾಂಧೀಜಿಯವರ ಜೀವನ ದೃಷ್ಟಿಯನ್ನೂ, ಭಾರತದ ಸ್ವಾತಂತ್ರ್ಯದ ಅವಶ್ಯಕತೆಯನ್ನೂ ಕುರಿತು ಉಪನ್ಯಾಸ

ಮಾಡಿದರು. ಅಮೆರಿಕಾದ ಜನರು ಅವರಿಗೆ ಭವ್ಯ ಸ್ವಾಗತ ವಿತ್ತರು.

1934ರಲ್ಲಿ ಮೀರಾ ಭಾರತಕ್ಕೆ ಹಿಂತಿರುಗಿದರು. ಗಾಂಧೀಜಿಯವರ ಆದೇಶದಂತೆ, ಮೀರಾ ತೊಡಗಿದ್ದು ಗ್ರಾಮಸೇವೆಯಲ್ಲಿ. ಸಿಂಧಿ ಎಂಬ ಹಳ್ಳಿಯಲ್ಲಿ ಕಾಲರಾ ತಲೆದೋರಿದಾಗ,ಅವರು ಅಲ್ಲಿ ಎಲ್ಲ ರೀತಿಯಿಂದ ಸೇವಾಕಾರ್ಯ ಮಾಡತೊಡಗಿದರು. ಕಾಲರಾ, ಮಲೇರಿಯಾ, ಬಿಸಿಲು ಯಾವುದಕ್ಕೂ ಹೆದರದೆ ಅವರು ಸೇವಾ ಕಾರ್ಯದಲ್ಲಿ ಮಗ್ನರಾದರು. ಸಿಂಧಿಯಿಂದ ಅವರು ಸೇಗಾಂವ್ ಹಳ್ಳಿಯಲ್ಲಿ ಸೇವಾಕಾರ್ಯಕ್ಕೆ ತೊಡಗಿದರು. ಈ ಹಳ್ಳಿಯೆ ಮುಂದೆ ಸೇವಾಗ್ರಾಮವೆಂದು ಗಾಂಧೀಜಿಯವರ ಸೇವಾಕೇಂದ್ರವಾಯಿತು.

1942ರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿ ಬೃಹತ್ ರೂಪವನ್ನು ತಾಳಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರನ್ನೂ ಬ್ರಿಟಿಷ್ ಸರ್ಕಾರ ಕಾರಾಗೃಹಕ್ಕೆ ಕಳುಹಿಸಿತು. ಗಾಂಧೀಜಿ, ಕಸ್ತೂರಬಾ, ಮೀರಾಬಹೆನ್,ಮಹದೇವ ದೇಸಾಯಿ, ಸರೋಜಿನಿ ನಾಯಿಡು ಇವರೆಲ್ಲರೂ ಪೂನಾದ ಬಳಿ ಬಂಧನದಲ್ಲಿರಬೇಕಾಯಿತು. ಇಲ್ಲಿಯೇ ಗಾಂಧೀಜಿಯವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿ ನಿಧನರಾದರು. ಈ ದುಃಖಕರವಾದ ಘಟನೆಯಾದ ಬಳಿಕ ಕೆಲವು ದಿನಗಳಲ್ಲಿಯೇ ಕಸ್ತೂರಿಬಾ ನಿಧನರಾದರು. ಆಗ ಗಾಂಧೀಜಿಯವರ ಆರೋಗ್ಯವು ಕೆಟ್ಟಿತು. ಈ ಸಂದರ್ಭದಲ್ಲಿ ಮೀರಾ ಬಹೆನ್ ಅತ್ಯಂತ ಶ್ರದ್ಧೆಯಿಂದ ಸೇವೆಗೆ ನಿಂತರು. ಎರಡು ವರ್ಷಗಳ ಕಾಲ ಬಂಧನದಲ್ಲಿದ್ದ ಅವರು ಕಡೆಗೆ ಬಿಡುಗಡೆಯಾದರು.

ಗಾಂಧೀಜಿ ತಮ್ಮ ಆರೋಗ್ಯ ಸುಧಾರಣೆಗಾಗಿ ಬೊಂಬಾಯಿಯ ಜುಹೂವಿಗೆ ಹೋದರು. ಮೀರಾ ಬಹೆನ್ ರಚನಾತ್ಮಕ ಕಾರ್ಯಗಳಲ್ಲಿ ಮಗ್ನರಾಗಲು ಹರಿದ್ವಾರದ ಬಳಿ ಹತ್ತು ಎಕರೆ ಭೂಮಿಯಲ್ಲಿ ಕಿಸಾನ್ ಆಶ್ರಮವನ್ನು ಸ್ಥಾಪಿಸಿ, ಆಧ್ಯಾತ್ಮಿಕ ಸಾಧನೆ ಹಾಗೂ ಸೇವಾಕಾರ್ಯದಲ್ಲಿ ಮಗ್ನರಾದರು. ಹಳ್ಳಿಯ ಮಕ್ಕಳಿಗೆ ವಿದ್ಯಾಭ್ಯಾಸ, ವ್ಯಾಯಾಮ, ಔಷಧೋಪಚಾರ ಇಂತಹ ಹಲವು ಕೆಲಸಗಳಲ್ಲಿ ಅವರು ತೊಡಗಿದರು. ನೂಲು ನೂಪು, ಗೋಪಾಲನೆ, ಮೊದಲಾದ ಕೆಲಸಗಳೂ ಆರಂಭವಾಗಿ ಪ್ರಗತಿಶೀಲವಾದ ಆಶ್ರಮವಾದುದನ್ನು ಕಂಡು ಉತ್ತರ ಪ್ರದೇಶದ ಸರ್ಕಾರ ಆ ಆಶ್ರಮದ ಕಾರ್ಯವನ್ನು ಅಭಿವೃದ್ಧಿಪಡಿಸಲು ಉತ್ಸಾಹ ತೋರಿತು. ಆಗ ಆಶ್ರಮವನ್ನು ಸರ್ಕಾರಕ್ಕೆ ವಹಿಸಿ, ಋಷಿಕೇಶದಲ್ಲಿ 3,000 ಎಕರೆಯ ಭೂಮಿಯಲ್ಲಿ ಹಸುಗಳನ್ನೂ, ವೃಷಭಗಳನ್ನೂ ಬೆಳೆಸಿ, ಗೋಸಂಪತ್ತನ್ನು ಬೆಳೆಸುವ ಕಾರ್ಯದಲ್ಲಿ ಅವರು ಮಗ್ನರಾದರು. ಉತ್ತಮ ಹಸುಗಳನ್ನು ಬೆಳೆಸಿ, ಹಳ್ಳಿಯವರಿಗೆ ಒದಗಿಸುವುದೇ ಅವರ ಉದ್ದೇಶವಾಯಿತು. ಕೆಲವು ಕಾಲ ಅವರು ಮಲೇರಿಯಾ ರೋಗದಿಂದ ಬಳಲಿದರು. ಅವರಿಗೆ ಆಗಲೇ 55 ವರ್ಷಗಳಾಗಿದ್ದವು. ಯೌವನದ ಶಕ್ತಿ ಕಡಿಮೆಯಾಗುತ್ತ, ಅವರ ಮನಸ್ಸು ಶಾಂತಿಯನ್ನರಸುತ್ತಿತ್ತು. ಭೂಮಿಯನ್ನೂ, ತಮ್ಮ ಕಾರ್ಯವನ್ನೂ ಸರ್ಕಾರಕ್ಕೆ ವಹಿಸಿ ಟೆಹ್ರಿ ಬಳಿ ಗೋಪಾಲ ಆಶ್ರಮವನ್ನು ಕಟ್ಟಿಕೊಂಡು ವಾಸಿಸ ತೊಡಗಿದರು.

1948 ಜನವರಿ 30ನೇ ದಿನ ಗಾಂಧೀಜಿಯವರ ಕೊಲೆಯ ವೃತ್ತಾಂತ ಅವರಿಗೆ ತಿಳಿಯಿತು. ಮೂಕ ಶೋಕದಲ್ಲಿ ಅವರು ಮುಳುಗಿಹೋದರು. ಧರ್ಮ, ಸೇವೆ, ರಾಜ್ಯಶಾಸ್ತ್ರ, ಸಾಧನೆ

ಇವುಗಳಲ್ಲಿ ಗುರುಗಳಾಗಿ ಅವರ ಜೀವನವನ್ನು ರೂಪಿಸಿದ ಮಹಾತ್ಮಾ ಗಾಂಧೀಜಿ ಅವರ ಪಾಲಿಗೆ ಇನ್ನಿಲ್ಲ! ಅವರಿಗೆ ಬಾಪೂಜಿ ಇಲ್ಲದ ಭಾರತದಲ್ಲಿ ವಾಸಿಸುವುದೂ ಕಷ್ಟವಾಗಿ, ಕಡೆಗೆ ಭಾರತದಿಂದ ಹೊರಟು ವಿಯನ್ನಾಕ್ಕೆ ಸಮೀಪದ ಜೇಡನ ವನ ಪ್ರದೇಶದಲ್ಲಿ ನೆಲಸಿ ತಪಸ್ವಿನಿಯಾಗಿದ್ದಾರೆ. ಈಗ ಅವರಿಗೆ ಎಂಭತ್ತಕ್ಕೂ ಮೀರಿದ ವಯಸ್ಸು.

ಬ್ರಿಟಿಷ್ ಅಡ್ಮಿರಲ್ ಅವರ ಮಗಳಾದ ಅವರು ಭೌತಿಕವಾದ ಸುಖಭೋಗಗಳನ್ನು ತ್ಯಜಿಸಿ, ಸರ್ವಸಂಗ ಪರಿತ್ಯಾಗಿಯಾಗಿ ದೇಶದ ಉದ್ಧಾರಕ್ಕಾಗಿ ದುಡಿಯುತ್ತಿದ್ದ ಮಹಾತ್ಮಾ ಗಾಂಧೀಜಿ ಯವರ ಅನುಯಾಯಿಯಾಗಿ, ಆಧ್ಯಾತ್ಮಿಕ ಹಾಗೂ ಸೇವಾ ಕಾರ್ಯದಲ್ಲಿ ಮಗ್ನರಾದರು. ಮೀರಾ ಬಹೆನ್ ಅವರ ಜೀವನ ಪಾವನ. ಅವರ ಆದರ್ಶ, ಸಹನೆ, ನಿಷ್ಕಾಮಕರ್ಮ ಇವೆಲ್ಲ ಯಾರಿಗಾದರೂ ಸ್ಫೂರ್ತಿ ನೀಡುತ್ತವೆ.

4. ಉಪಸಂಹಾರ

ಭಾರತೀಯರಿಗೆ ವೇದ, ಉಪನಿಷತ್ತು, ಭಗವದ್ಗೀತೆ—ಇವು ಪರಮಪೂಜ್ಯವಾದುವು. ವೇದದಲ್ಲಿ ಆರ್ಯರು ತಮ್ಮ ದರ್ಶನ ವನ್ನು ಅಭಿವ್ಯಕ್ತಗೊಳಿಸಿದ್ದಾರೆ. ಪುರಾತನ ಕಾಲದಿಂದ ಜ್ಞಾನ ಗಂಗೆಯ ಪ್ರವಾಹವನ್ನು ಹರಿಸಿದ ಋಷಿಗಳ ಹೆಸರೆಲ್ಲ ನಮಗೆ ತಿಳಿದಿಲ್ಲ. ಅಹಂಕಾರ ಶೂನ್ಯರಾದ ಅವರ ಹೆಸರು ಕಾಲಗರ್ಭದಲ್ಲಿ ಸೇರಿಹೋಗಿದೆ. ಆದರೆ ಅವರು ನೀಡಿದ ಜ್ಞಾನ ಮಾತ್ರ ಅಮರ. ವೇದಗಳ ಕಡೆಯ ಭಾಗಗಳಾದ ಉಪನಿಷತ್ತುಗಳಲ್ಲಿ ಪರಮ

ಧರ್ಮ ಸಾರವೆಲ್ಲ ಅಡಗಿದೆ. ಉಪನಿಷತ್ತಿನ ಧರ್ಮ ವಿಶ್ವಧರ್ಮ ವಿಖ್ಯಾತ ಜರ್ಮನ್ ತತ್ವಜ್ಞಾನಿ ಷೋಪನ್ ಹೋರ್ ಉಪ ನಿಷತ್ತುಗಳನ್ನು ಕುರಿತು—“ಉಪನಿಷತ್ತಿನ ಅಧ್ಯಯನದಷ್ಟು ಪ್ರಯೋಜನಕಾರಿಯಾದುದು ಪ್ರಪಂಚದಲ್ಲಿ ಬೇರೆ ಯಾವುದೂ ಇಲ್ಲ. ಇದು ನನ್ನ ಜೀವನಕ್ಕೆ ಶಾಂತಿ ನೀಡಿದೆ. ಮೃತ್ಯು ಸಮ್ಮುಖ ದಲ್ಲಿಯೂ ಶಾಂತಿ ಭರವಸೆಗಳನ್ನು ನೀಡುತ್ತದೆ”—ಎಂದು ಹೇಳಿ ದರು. ಉಪನಿಷತ್ತುಗಳನ್ನು ವೇದಾಂತವೆಂದು ಕರೆದಿದ್ದಾರೆ. ಇವುಗಳು ಭಾರತೀಯ ಜ್ಞಾನದ ಗೌರೀಶಂಕರ. ಅನಿತ್ಯ ಶರೀರ ದಲ್ಲಿ ನಿತ್ಯವೂ, ಅಶರೀರವೂ, ಮಹತ್ವವೂ, ಸರ್ವವ್ಯಾಪಕವೂ ಆದ ಆತ್ಮವಿದೆ—ಎಂಬ ಪ್ರಚಂಡ ಸತ್ಯವನ್ನು ಉಪನಿಷತ್ತುಗಳು ಸಾರಿವೆ.

ಭಾರತದಲ್ಲಿ ಮಹಿಳೆಯರು ತಮ್ಮದೇ ಆದ ಧಾರ್ಮಿಕ ಸಂಸ್ಥೆ ಗಳನ್ನು ನಿರ್ಮಿಸಿ, ಸಾಮೂಹಿಕವಾದ ಉನ್ನತಿಗಾಗಿ ಶ್ರಮಿಸಲು, ಅವರಿಗೆ ವಿಶೇಷವಾದ ಸೌಲಭ್ಯಗಳು ಸಿಗದಿದ್ದರೂ ಅಲ್ಲಲ್ಲಿ ಮಹಿಳೆ ಯರು ತಮ್ಮ ಸಾಧನೆಯಿಂದ ಸಾಕ್ಷಾತ್ಕಾರ ಮಾಡಿಕೊಂಡು, ತಮ್ಮ ವರ್ಚಸ್ಸಿನಿಂದ ಅನೇಕರನ್ನು ಪರಿವರ್ತಿಸಿ, ಜನಮನದಲ್ಲಿ ಗೌರವಕ್ಕೆ ಭಾಜನರಾಗಿದ್ದಾರೆ. ಆದರೆ ಇಂದು ಮತ್ತಷ್ಟು ಮಹತ್ ಕಾರ್ಯವಾಗಬೇಕಾಗಿದೆ.

ಜಾತ್ಯತೀತ ರಾಷ್ಟ್ರವಾದ ಭಾರತದಲ್ಲಿ ಧಾರ್ಮಿಕ ಅಧ್ಯ ಯನಕ್ಕೆ ಮಕ್ಕಳಿಗೆ ವಿಶೇಷವಾದ ಸ್ಥಾನವಿಲ್ಲ. ಧ್ಯಾನ, ಚಿಂತನೆ, ತತ್ವಶಾಸ್ತ್ರಗಳ ಪರಿಚಯಕ್ಕೆ ಶಾಲಾಕಾಲೇಜುಗಳಲ್ಲಿ ಎಲ್ಲರಿಗೂ ಅವಕಾಶವಿಲ್ಲ. ಕಾಲೇಜುಗಳಲ್ಲಿ ಮಾತ್ರ ತತ್ತ್ವಶಾಸ್ತ್ರವನ್ನು ಐಚ್ಛಿಕವಾಗಿ ಅಧ್ಯಯನ ಮಾಡಲು ಅವಕಾಶವಿದೆ. ಆಧ್ಯಾತ್ಮಿಕ ಜಾಗೃತಿಯಾಗಿ, ಮಹಿಳೆಯರ ಜೀವನದಲ್ಲಿ ಧಾರ್ಮಿಕ, ಜೀವನ

ಜೀರೂರಲು ಸದವಕಾಶಗಳು ಭಾರತದಲ್ಲಿ ಹೆಚ್ಚಾಗಿಲ್ಲ. ಆದರೆ ಶ್ರೀ ರಾಮಕೃಷ್ಣಾಶ್ರಮದ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಶಾರದಾಶ್ರಮ ಮಹಿಳೆಯರಿಗಾಗಿಯೇ ನಿರ್ಮಿತವಾಗಿರುವ ಆಶ್ರಮ. ಈ ಆಶ್ರಮದಲ್ಲಿ ವಿದ್ಯಾವತಿಯರಾದ ಮಹಿಳೆಯರು ಬ್ರಹ್ಮಚಾರಿಣಿಯಾಗಿ ಸೇರಿ, ಅನಂತರ ಸನ್ಯಾಸಿನಿಯರಾಗಿ ಧಾರ್ಮಿಕ ಜಾಗೃತಿಗಾಗಿ ಶ್ರಮಿಸುತ್ತಿದ್ದಾರೆ.

ಭಾರತದಲ್ಲಿ ಮಕ್ಕಳು ಧಾರ್ಮಿಕ ವಿದ್ಯಾಭ್ಯಾಸದಿಂದ ವಂಚಿತ ರಾಗಿ ಹೋಗಿದ್ದಾರೆ. ನಮ್ಮ ವೇದ, ಉಪನಿಷತ್ತು ಮತ್ತು ಗೀತೆಗಳ ಪರಿಚಯ ಎಲ್ಲರಿಗೂ ಆವಶ್ಯಕ. ಪ್ರಾಥಮಿಕ ಶಾಲೆ ಯಿಂದಲೇ ಈ ಮಹತ್ ಕೃತಿಗಳ ವಿಚಾರವಾಗಿ ಮಕ್ಕಳಿಗೆ ಜ್ಞಾನ ಮೂಡಿಸುವುದು ಆವಶ್ಯಕ. ವೈಜ್ಞಾನಿಕ ಹಾಗೂ ಧಾರ್ಮಿಕ ವಿಚಾರಗಳನ್ನು ಮಕ್ಕಳಿಗೆ ಎಲ್ಲ ಹಂತದಲ್ಲಿ ಬೋಧಿಸಬೇಕು. ನಮ್ಮ ಯೋಗ, ಧ್ಯಾನ, ಪ್ರಾಣಾಯಾಮ ಮೊದಲಾದ ವಿಚಾರ ಗಳನ್ನು ತಿಳಿಯುವ ಸದವಕಾಶಗಳು ಎಲ್ಲರಿಗೂ ದೊರಕಬೇಕು. ಇಂದಿನ ಭಾರತೀಯ ಸಂಸ್ಕೃತಿ ಉಳಿದಿರುವುದು ಹೆಚ್ಚಾಗಿ ಮಹಿಳೆ ಯರಿಂದಲೇ ಎಂದರೆ ಅತಿಶಯೋಕ್ತಿಯಾಗಲಾರದು. ಮಹಿಳೆ ಯರು ಸಾಮಾನ್ಯವಾಗಿ ಭಾವನಾಶೀಲರು. ಅವರಲ್ಲಿ ಸಾಮಾನ್ಯ ವಾಗಿ ಉನ್ನತ ಧಾರ್ಮಿಕ ಚಿಂತನೆಗಳನ್ನು ಅನುಷ್ಠಾನಕ್ಕೆ ತರ ಬೇಕೆಂಬ ಸಹಜ ಪ್ರವೃತ್ತಿ ಇದೆ. ಈ ದಿಶೆಯಲ್ಲಿ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಹಳ್ಳಿಹಳ್ಳಿಗಳಲ್ಲಿ ಕಾವ್ಯ ವಾಚನ, ಭಜನೆ ಮಾಡುವುದು, ಪುರಾಣ–ಪುಣ್ಯಕಥೆಗಳನ್ನು ಓದುವುದು, ವ್ರತಗಳನ್ನು ಆಚರಿಸುವುದು—ಇತ್ಯಾದಿ ಪದ್ಧತಿ ಗಳು ಇನ್ನೂ ಜೀವಂತವಾಗಿವೆ.

ನಮ್ಮ ರಾಷ್ಟ್ರದಲ್ಲಿ ನವಶಕ್ತಿಚೈತನ್ಯಗಳು ಮೂಡಬೇಕಾಗಿದೆ.

ಪಾಶ್ಚಿಮಾತ್ಯ ರೀತಿಯ ಕಾನ್ವೆಂಟ್‌ಗಳಂತೆ, ಭಾರತೀಯ ದೃಷ್ಟಿಯಿಂದ ಮೂಡಿಬರುವ ಮಹಿಳೆಯರ ಆಶ್ರಮಗಳು ಸೃಷ್ಟಿಯಾಗಿ ವಿದ್ಯಾಸಂಸ್ಥೆಗಳನ್ನು ನಡೆಸುವ ಬ್ರಹ್ಮಚಾರಿಣಿಯರು ಅಧಿಕ ಸಂಖ್ಯೆಯಲ್ಲಿ ಬೇಕಾಗಿದ್ದಾರೆ. ಅವರು ಒಂದು ಶೀಲಸಂಹಿತೆಯನ್ನು ಮಾಡಿಕೊಂಡು, ಆದರ್ಶ ಶೀಲವತಿಯರಾಗಿ ಬೆಳೆಯುತ್ತ ನವರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕು. ಮಹಿಳೆಯರ ಶಿಕ್ಷಣದಲ್ಲಿ, ವೈಜ್ಞಾನಿಕವಾದ ಧಾರ್ಮಿಕ ಶಿಕ್ಷಣಕ್ಕೆ ಮಹತ್ತರ ಸ್ಥಾನವಿರಬೇಕು. ಮಹಿಳೆಯರು ಅಲ್ಲಲ್ಲಿ ವೈಯಕ್ತಿಕವಾಗಿ ಮಹತ್ಕಾರ್ಯ ಮಾಡಿದ್ದರೂ ಇಂದು ಸಾಂಘಿಕವಾಗಿ ಅವರು ಕ್ರಿಯಾಶೀಲರಾಗಬೇಕಾಗಿದೆ. ದೇಶದಲ್ಲಿರುವ ಭ್ರಷ್ಟಾಚಾರ, ಅನಾಚಾರಗಳನ್ನು ನಿರ್ಮೂಲನ ಮಾಡಲು, ಮಹಿಳಾ ಸಂಸ್ಥೆಗಳು ಧಾರ್ಮಿಕ ಜಾಗೃತಿಯನ್ನು ಮೂಡಿಸಿದಾಗ ಮಾತ್ರ ನಮ್ಮ ದೇಶದ ಉತ್ಥಾನವಾಗುತ್ತದೆ. ಧರ್ಮದೃಷ್ಟಿಯ ಪ್ರಚಂಡ ಪ್ರವಾಹ ನಾಡಿನಲ್ಲಿ ಹರಿದಾಗಲೇ ರಾಷ್ಟ್ರದ ಉದ್ಧಾರ. ಈ ಕಾರ್ಯದಲ್ಲಿ ಮಹಿಳೆಯರ ಪಾತ್ರ ಹಿರಿದಾದುದು.

— O —

WO 22276—MUPM—5,000—22-7-81

ಕೆಲವು ಸಾಹಿತ್ಯ ಕೃತಿಗಳು

ಬೆಲೆ : ೨೫ ಪೈಸೆಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ಟಿ. ಎನ್. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ಟಿ. ಎಸ್. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣ
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣ
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ॥ ಹಿರಣ್ಮಯ

೨೭. ವೇಮನ—ಕೆ.ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಕೃಷ್ಣಮೂರ್ತಿ
೩೪. ಜನ್ನ—ಡಾ॥ ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ॥ ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ॥ ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ॥ ಹಿರಣ್ಮಯ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ॥ ಆರ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಉ. ಕಾ. ಸುಬ್ಬರಾಯಾಚಾರ್
೫೬. ಶ್ರೀ ಸಮರ್ಥರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ